

# ಕಲ್ಯಾಣ ಕಿರಣ

ನವೆಂಬರ್ - 2000 ಬೆಲೆ : 5-00






# ★ ಕಲ್ಯಾಣ ಕಿರಣ ★

| | | |
|---|---|---|
| ಸಂಪುಟ 31 | ಬಸವ ಶಕೆ 867 | ಆಜೀವ ಸದಸ್ಯತ್ವ 500 ರೂ |
| ಸಂಚಿಕೆ 11 | ನವೆಂಬರ್-2000 | ವಾರ್ಷಿಕ ಚಂದಾ 50/- ರೂ |


## ಲಿಂಗವಂತರ ಧರ್ಮ ಸಂಹಿತೆ ವಚನ ಸಾಹಿತ್ಯ

ನಮ್ಮ ಪುರಾತರ ವಚನಂಗಳೆನೆಲ್ಲ ಓದದೆ ಇದ್ದಾರು,
ಓದಿಯೂ ನಂಬಿಗೆ ಇಲ್ಲದೆ ಇದ್ದಾರು, ನೂರಕ್ಕೊಬ್ಬರಲ್ಲದೆ ನಂಬರು
ನಮ್ಮ ಆದ್ಯರ ವಚನಂಗಳ ಜರೆದಾರು, ತಮ್ಮ ಕವಿತ್ವವ ಮೆರೆದಾರು
ನಮ್ಮ ಆದ್ಯರ ವಚನಂಗಳಿಂದೊದವಿದ ಜ್ಞಾನವೆಂಬುದನರಿಯರು.
ತಾಯಿಯಿಂದ ಜಕ್ಕಳಾದರೆಂಬುದರಿಯರು.
ಊರೆಲ್ಲಕ್ಕೆ ಹುಟ್ಟಿದ ಹಾಗೆ ನುಡಿದಾರು
ನಮ್ಮ ಪುರಾತರ ವಚನವೆ ತಾಯಿ ತಂದೆ ಎಂದರಿಯರು.
ನಮ್ಮ ಆದ್ಯರ ವಚನ ಜ್ಞಾನದ ನೆಲೆಯ ತೆಗೆದಿರಿಸಿತ್ತು
ನಮ್ಮ ಆದ್ಯರ ವಚನ ಜದ ಮಾತ್ಸರ್ಯಾದಿ ಅರಿಷಡ್ವರ್ಗ ಸಪ್ತವ್ಯಸನ
ಪಂಚೇದ್ರಿಯ ದಶವಾಯುಗಳಿಚ್ಛೆಗೆ ಹರಿವ ಮನವ ಸ್ವಸ್ಥವಾಗಿ ನಿಲಿಸಿತ್ತು
ನಮ್ಮ ಆದ್ಯರ ವಚನ ಅಂಗೇಂದ್ರಿಯಂಗಳ ಲಿಂಗೇಂದ್ರಿಯಗಳೆನಿಸಿತ್ತು.
ನಮ್ಮ ಆದ್ಯರ ವಚನ ನೂರೊಂದು ಸ್ಥಲವ ಮೀರಿದ ಮಹದಲ್ಲಿ ನೆಲೆಸಿತ್ತು
ನಮ್ಮ ಆದ್ಯರ ವಚನ ಇನ್ನೂರ ಹದಿನಾರು ಲಿಂಗಕ್ಕೆ
ಸರ್ವೆಂದ್ರಿಯವ ಸನ್ಮತವ ಮಾಡಿ,
ಸಾಕಾರವ ಸವೆದು ನಿರಾಕಾರವನರಿದು ನಿರವಯಲ ನಿತ್ಯಸುಖದಲ್ಲಿರಿಸಿತ್ತು
ಇಂತಪ್ಪ ಆದ್ಯರ ವಚನ ಭಂಡಾರವ,
ನಮ್ಮ ಪ್ರಭುದೇವರು ಮುಖ್ಯವಾದ ಏಳುನೂರೆಪ್ಪತ್ತು ಅಮರಗಣಂಗಳು
ಅಸಂಖ್ಯಾತ ಪುರಾತನರು, ಪ್ರಮಥಗಣಂಗಳು ಕೇಳಿ ಹೇಳಿ ಕೊಂಡಾಡಿದ ಕಾರಣ
ನಮ್ಮ ಕೂಡಲಚನ್ನಸಂಗಯ್ಯನಲ್ಲಿ
ಸರ್ವಸುಖವ ಸೂರೆಗೊಂಡು ಸ್ವಯಲಿಂಗವಾದರು.

-ಚ.ಬ.ವ. ೧೩೩೭. (ಸ.ವ.ಸಂ. ೩)

ಕಲ್ಯಾಣ ಕಿರಣ ಅಕ್ಷರ ಜೋಡಣೆ : ರಮೇಶ್ ಲಿಂಗಾಯತ

# ★ ಕಲ್ಯಾಣ ಕಿರಣ ★

| | | |
|---|---|---|
| ಸಂಪುಟ 31 | ಬಸವ ಶಕೆ 867 | ಆಜೀವ ಸದಸ್ಯತ್ವ 500 ರೂ |
| ಸಂಚಿಕೆ 11 | ನವೆಂಬರ್-2000 | ವಾರ್ಷಿಕ ಚಂದಾ 50 ರೂ |


ಕಿರಣಗನ್ನಡಿ



**ರಕ್ಷಾಪುಟ 1 ಮತ್ತು 4 : ವಿಶ್ವಗುರು ಬಸವಣ್ಣನವರು**

**ರಕ್ಷಾಪುಟ 3 : ವ್ಯಂಗ್ಯ ಚಿತ್ರ ರಚನೆ : ಶಿವಗೌಡ ಬಾಳಗೌಡ ಪಾಟೀಲ, ಸಂಕೇಶ್ವರ**

**(ಸೆಪ್ಟೆಂಬರ-2000 ಕಲ್ಯಾಣ ಕಿರಣದ ರಕ್ಷಾಪುಟ 2ರ ವ್ಯಂಗ್ಯ ಚಿತ್ರ ರಚನೆ : ಶಿವಗೌಡ ಬಾಳಗೌಡ ಪಾಟೀಲ ಸಂಕೇಶ್ವರ )**

ನವೆಂಬರ್ ತಿಂಗಳಲ್ಲಿ ಬರುವ ಶರಣರ ಜಯಂತಿ-ಉತ್ಸವಗಳು

ಚೆನ್ನಬಸವಣ್ಣನವರ ಲಿಂಗೈಕ್ಯ ದಿನ ನವೆಂಬರ್. 11

E-mail : viswakalyana@yahoo.com E-mail : matemahadevi@hotmail.com

KALYANA KIRANA- Reg. No. 19988/70. Monthly Magazine printed and published by B.Shambulingaiah, at Prabhudeva Printing Press, Basava Gangotri, Kumbalgodu, Bangalore-560074. Phone : 8437234

ಕಲ್ಯಾಣ ಕಿರಣ DTP : ರಮೇಶ್ ಲಿಂಗಾಯತ

# ಅನುಭವ ಮಂಟಪ

-ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ವಿಶ್ವಗುರು ಬಸವಣ್ಣನವರ ಜೀವನದ ಅಪೂರ್ವ ಸಿದ್ಧಿ ಅವರು ಕಟ್ಟಿ ತೋರಿಸಿದ ಅನುಭವ ಮಂಟಪ. ಅನುಭವ ಮಂಟಪವು ಒಂದು ಐತಿಹಾಸಿಕ ಸಂಸ್ಥೆಯೆ ? ಅದು ಸ್ಥಾವರ ರೂಪದ ಕಟ್ಟಡವೋ, ಜಂಗಮಾತ್ಮಕ ಸಂಸ್ಥೆಯೋ ? ಇಂತಹ ಹಲವಾರು ಪ್ರಶ್ನೆಗಳು ಏಳುವುದು ಬಲು ಸಹಜ.

ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ ಮೂವತ್ತಾರು ವರುಷ
ಅಯ್ಯಾ, ಅನುಭವಕ್ಕೆ ಶಿವಸದನವಾದುದು ಇಪ್ಪತ್ತೇಳು ವರುಷ

ಎಂಬ ವಿಶ್ವಗುರು ಬಸವಣ್ಣನವರ ವಚನ (ಬ.ವ.ದೀ. 1151) ಅನುಭವ ಗೋಷ್ಠಿಯು ಇಪ್ಪತ್ತೇಳು, ವರ್ಷಕಾಲ ನಡೆಯಿತು ಎಂಬುವನ್ನು ಪುಷ್ಟೀಕರಿಸುತ್ತದೆ. 'ಅನುಭವ ಮಂಟಪ' ಎಂಬ ಕಲ್ಲುಮಣ್ಣುಗಳ ಕಟ್ಟಡವನ್ನು ಬಸವಣ್ಣನವರು ಕಟ್ಟಿದ್ದರೂ ಇಲ್ಲವೋ ; ಆದರೆ ಜ್ಞಾನ ಪ್ರಧಾನವಾದ ಅನುಭವ ಮಂಟಪ ನಡೆದುದಂತೂ ನಿಜ. ಜನಪದ ಕವಿಗಳೂ ಅದನ್ನು ಮಾರ್ಮಿಕವಾಗಿ ಚಿತ್ರಿಸುತ್ತಾರೆ.

ಸಾಗಿ ಬಸವನು ಬಂದು ತೂಗಿದನು ಕಲ್ಯಾಣ
ಹಾಗಿನಲಿ ಕಟ್ಟಿ ಅನುಭಾವ ಮಂಟಪವ
ಕೂಗು ಕೇಳುತಲಿ ಜನವೆದ್ದು ॥ ಕ.ಜ.22
ಸೋಸಿ ವಚನದ ತಿರುಳ ಬೀಸಿದವು ಶಿವಗಾಳಿ
ಮೂಸಿ ಬಂದಂತೆ ಗುಂಗಿಗಳು । ಹೂಗಳಿಗೆ
ದಾಸಿ ಜನ ಬಂತು ಮಂಟಪಕೆ ॥ ನೇ.ಅ.74
ವಚನ ಮಂಟಪ ಬಳ್ಳಿ ಸುಚಿ ಮೊಗ್ಗೆ ಹೂ ಬಿಡಲು
ರುಚಿಜೇನ ಹುಟ್ಟ ಹೊಸ ಮತವೆ ಕಟ್ಟಿದರು
ವಚನ ಶಾಸ್ತ್ರಕರು ನಾಡೊಳಗೆ ॥ ನೇ.ಅ.75
ಅಲ್ಲಮನ ಸಿದ್ಧರಾಮ ಬಲ್ಲಿದೆಲ್ಲರು ಬರಲು
ಕಲ್ಯಾಣ ಮನೆಗೆ ಕಳೆಬಂತು । ಬಸವಯ್ಯ
ಎಲ್ಲಿ ಹೋದಲ್ಲಿ ಜಿಲ್ಲಾದ ಕ.ಜ.33
ಅಲ್ಲಮನೆ ಗುರುವಾದ ಕಲ್ಯಾಣ ಮಂಟಪಕೆ
ಕಲ್ಲಿದೆಯ ಬಂಟ ಮಡಿವಾಳ । ಕರವಾಳು
ಸಲ್ಲಿಸಲು ಸೇವೆ ಮಂಟಪಕೆ ॥ ಕ.ಜ.36

ಕೇವಲ ಜನಪದ ಸಾಹಿತ್ಯದಲ್ಲಿ ಮಾತ್ರವಲ್ಲ ವಚನ ವಾಙ್ಮಯದಲ್ಲಿಯೂ 'ಅನುಭವ ಮಂಟಪ' ಸ್ಥಾಪನೆಯಾದುದಕ್ಕೆ ಸಾಕಷ್ಟು ಆಧಾರಗಳು ಸಿಗುತ್ತವೆ.

1. ಜಡರುಗಳ ಮನದ ಕತ್ತಲೆಯ ಕಳೆಯಲೆಂದು
   ಕಟ್ಟಿತ್ತು ಕಲ್ಯಾಣದಲ್ಲಿ ಮಹಾಮಠವು -ಚ.ಬ.ವ. 677
2. ಆ ದಾಸೋಹ ಮಠಂಗಳಿಗೆ ಮುಖ್ಯವಾದ
   ಬಸವರಾಜದೇವರ ಮಠದ ವಿಸ್ತೀರ್ಣವೆಂತೆಂದಡೆ
   ......ಮಹಾಮನೆಯ ಮಾಡಿದಾತ ಬಸವಣ್ಣ. -ಚ.ಬ.ವ. 345
3. ಆ ಶಿವಶರಣನ ಮನೆಯೊಳಗಿಪ್ಪ
   ಶಿವಗಣಂಗಳ ತಿಂಥಿಣಿಯ ಕಂಡು -ಅ.ಪ್ರ.ವ. 953
4. ಸಂಗನ ಬಸವಣ್ಣ ಬಂದು ಕಲ್ಯಾಣದೊಳಗೆ ಮಹಾಮನೆಯ ಕಟ್ಟಿದಡೆ
   ಮರ್ತ್ಯಲೋಕವೆಲ್ಲವೂ ಭಕ್ತಿ ಸಾಮ್ರಾಜ್ಯವಾಯಿತ್ತು -ಸಿ.ವ. 866

'ಮಹಾಮನೆ''- ಗುರು ಬಸವಣ್ಣನವರು ತಮ್ಮ ನಿವಾಸಕ್ಕೆ ಇಟ್ಟ ಹೆಸರು. ಅದು ಎಲ್ಲರನ್ನೂ ಇಂಬಿಟ್ಟುಕೊಳ್ಳುವದಾದ್ದರಿಂದ ಅದಕ್ಕೆ 'ಮಹಾಮನೆ' ಎಂಬುದೇ ಅನ್ವರ್ಥಕ ಪದ. ಇಂಥ ಮಹಾಮನೆಯಲ್ಲಿ ಅನ್ನದಾಸೋಹ-ಜ್ಞಾನದಾಸೋಹಗಳೆರಡೂ ನಿರಂತರವಾಗಿ ನಡೆಯುತ್ತಿದ್ದವು. ಜ್ಞಾನ ದಾಸೋಹ ನಡೆಯುವ ತಾಣವೇ ಅನುಭವ ಮಂಟಪ.

ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನೆರೆದು
ಆಚಾರವೆಂಬ ಬತ್ತಿಗುಂಟ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು
ತೊಳಗಿ ಬೆಳಗುತ್ತಿತ್ತು ಶಿವನ ಪ್ರಕಾಶ
ಆ ಪ್ರಕಾಶದೊಳಗೆ ಒಪ್ಪುತಿದ್ದರಯ್ಯ ಅಸಂಖ್ಯಾತ ಪ್ರಮಥ ಗಣಂಗಳು

ಅಲ್ಲಮ ಪ್ರಭುದೇವರು (ಅ.ಪ್ರ.ವ. 823) ಹೇಳುವಂತೆ ಕಲ್ಯಾಣವೇ ಪ್ರಣತೆಯಾಯಿತು. ಭಕ್ತಿರಸವೇ ತೈಲವಾಯಿತು. ಆಚಾರವೇ ಬತ್ತಿಯಾಗಿ ಬಸವಣ್ಣನೆಂಬ ದಿವ್ಯ ಜ್ಯೋತಿ ಮುಟ್ಟಲು ಎಲ್ಲೆಡೆಗೂ ಶಿವನ ಪ್ರಕಾಶ ಹಬ್ಬಿ ಹಸರಿಸಿತು. ಆ ಬೆಳಕಿನಲ್ಲಿ ತಮ್ಮ ಬಾಳಿನ ಹಣತೆಗಳನ್ನು ಹೊತ್ತಿಸಿಕೊಳ್ಳಲು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗಿನ ಭೂಭಾಗದಿಂದ ಮುಮುಕ್ಷುಗಳು ಸಾಧಕರು, ಸಿದ್ಧಪುರುಷರು ಧಾವಿಸಿ ಬಂದರು.

ಕಾಲಜ್ಞಾನ ವಚನ ಗ್ರಂಥದಲ್ಲಿ, ''ಕ್ಷಯನಾಮ ಸಂವತ್ಸರದ ಬಳಿಕ ಬರುವ ಪ್ರಭುನಾಮ ಸಂವತ್ಸರದ ಚೈತ್ರಶುದ್ಧ ಪಾಡ್ಯ. ಸೋಮವಾರ ರೇವತಿ ನಕ್ಷತ್ರದಲ್ಲಿ ಪ್ರಭುದೇವರು ಸಿಂಹಾಸನದ ಮೇಲೆ ಮೂಹೂರ್ತವನ್ನು ಮಾಡುವರು'' ಎಂಬುವುದಾಗಿ ಉಲ್ಲೇಖಗೊಂಡಿದ್ದು ಇದು ಅನುಭವ ಮಂಟಪ, ಅದರಲ್ಲಿ ಶೂನ್ಯ ಪೀಠ ನಿರ್ಮಾಣವಾದುದು, ಆ ಪೀಠವನ್ನು ಅಲ್ಲಮಪ್ರಭು ಆರೋಹಿಸಿದುದನ್ನು ಖಚಿತಪಡಿಸುತ್ತದೆ.

ಹೀಗೆ ವಚನಗಳು, ಕಾಲಜ್ಞಾನದ ಮಾತುಗಳು ಮುಂತಾದುವುಗಳಿಂದ ಕಲ್ಯಾಣದಲ್ಲಿ ಅನುಭವ ಮಂಟಪ ಎಂಬುದಿತ್ತು. ಅಲ್ಲಿಗೆ ಎಲ್ಲೆಡೆಯಿಂದ ಪವಿತ್ರಾತ್ಮರು ಬಂದರು ಎಂದು ನಿಃಸಂಶಯಪೂರ್ವಕವಾಗಿ ಸಿದ್ಧವಾಗುತ್ತದೆ. ಅನುಭವ ಮಂಟಪದ ವೇದಿಕೆಯ ಮೇಲೆ ವಚನ ಸಾಹಿತ್ಯದ ರಚನೆಯೂ ಆದ್ದರಿಂದ ಶರಣರು ಅದನ್ನು ವಚನ ಮಂಟಪ ಎಂದೂ ಕರೆದರು.

## ಅನುಭವ ಮಂಟಪವನ್ನು ಸ್ಥಾಪಿಸಿದ ಉದ್ದೇಶ

ವಿಶ್ವಗುರು ಬಸವಣ್ಣನವರು ತಮ್ಮ ಹೃನ್ಮನಗಳಲ್ಲಿ ರೂಪುಗೊಂಡ ಹಲವಾರು ತತ್ತ್ವಗಳಿಗೆ, ಸಿದ್ಧಾಂತಗಳಿಗೆ, ಜಾತಿವರ್ಣವರ್ಗರಹಿತ ಕಲ್ಯಾಣ ರಾಜ್ಯವನ್ನು ಕಟ್ಟುವ ಸೂತ್ರಗಳಿಗೆ ಸಾರ್ವತ್ರಿಕ ಮತ್ತು ಕ್ರಿಯಾತ್ಮಕ ಸ್ವರೂಪವನ್ನು ಕೊಡಬೇಕು ಎಂಬ ಮಹದುದ್ದೇಶದಿಂದ ಅನುಭವ ಮಂಟಪ ಕಟ್ಟಿದರು. ಕೃಷಿ ಇಲಾಖೆಯವರು ಹೊಸ ತಳಿಗಳನ್ನು ಕಂಡು ಹಿಡಿದು ಅವುಗಳನ್ನು ಸಾರ್ವಜನಿಕರಿಗೆ ಬಿಡುಗಡೆ ಮಾಡುವ ಮೊದಲು ತಾವು ಪ್ರಾತ್ಯಕ್ಷಿಕೆಯ ಮೂಲಕ ತಳಿಗಳ ಗುಣಮಟ್ಟ, ಫಲ ನೀಡುವ ಸಾಮರ್ಥ್ಯವನ್ನು ಖಚಿತಪಡಿಸಿಕೊಳ್ಳಲು ಪ್ರಯತ್ನಿಸುವಂತೆ ಅನುಭವ ಮಂಟಪವು ಒಂದು ಪ್ರಾಯೋಗಿಕ ಕಾರ್ಯಕ್ಷೇತ್ರವಾಯಿತು. ಹುಟ್ಟಿನಿಂದಲೇ ಮೇಲು ಕೀಳೆಂದು ವಿಭಜಿಸುವ ಜಾತಿಭೇದ, ಉದ್ಯೋಗದ ಮೇಲೆ ವಿಭಜಿಸುವ ವರ್ಣಭೇದ, ಅಂತಸ್ತಿನ ಮೇಲೆ ವಿಭಜಿಸುವ ವರ್ಗಭೇದ-ಇವೆಲ್ಲವನ್ನು ನಿರಾಕರಿಸಿ ಸಮಾನತೆಯ ಮೇಲೆ ಸಮಾಜವನ್ನು ಕಟ್ಟಬೇಕೆಂಬ ಬಸವಣ್ಣನವರ ಆದರ್ಶದ ಕನಸು ನನಸಾಗಲು ಅವರು ಒಂದು ಮಹಾನ್ ಯೋಜನೆ ರೂಪಿಸಿದರು. ಆ ಯೋಜನೆಯ ಪ್ರಯೋಗಶಾಲೆಯಾಗಿ ಅನುಭವ ಮಂಟಪ ಕಾರ್ಯಮಾಡಿತು.

ಧರ್ಮ-ದೇವರನ್ನು ಹೊಂದುವ ಹಕ್ಕು ಎಲ್ಲರಿಗೂ ಲಭ್ಯವೆಂದು ಸಮತಾವಾದಿ ಬಸವಣ್ಣನವರು



ಘೋಷಿಸಿದರು. ಕೇವಲ ಘೋಷಿಸಿ ಸುಮ್ಮನಾಗದೆ ಎಲ್ಲರಿಗೂ ಧರ್ಮಸಂಸ್ಕಾರ ನೀಡಿದರು. ಹಾಗೆ ಅವರಿಗೆ ತನು ಸಂಸ್ಕಾರ ನೀಡಿ, ಮನ ಸಂಸ್ಕಾರ ನೀಡದಿದ್ದರೆ, ಸರ್ವಾಂಗೀಣ ಪರಿವರ್ತನೆಯಾಗದೆಂದು ಅನುಭವ ಮಂಟಪದ ಮೂಲಕ ಸರ್ವಾಂಗೀಣ ಸಂಸ್ಕಾರ ನೀಡಿದರು. ಇದನ್ನರಿತೇ ಶಿವಯೋಗಿ ಸಿದ್ಧರಾಮೇಶ್ವರರು ಹೀಗೆ ಹೇಳುವರು :

ಕಪಿಲಸಿದ್ಧ ಮಲ್ಲಿಕಾರ್ಜುನಾ
ನಿಮ್ಮ ಸಂಗನ ಬಸವಣ್ಣ ಬಂದು
ಕಲ್ಯಾಣದಲ್ಲಿ ಮನಾಮನೆಯ ಕಟ್ಟಿದಡೆ
ಮರ್ತ್ಯಲೋಕವೆಲ್ಲವೂ ಭಕ್ತಿಸಾಮ್ರಾಜ್ಯವಾಯಿತ್ತು
ಆ ಮನೆಗೆ ತಲೆಬಾಗಿ ಹೊಕ್ಕವರೆಲ್ಲರೂ
ನಿಜಲಿಂಗ ಫಲವ ಪಡೆದರು. ಆ ಗೃಹವ ನೋಡಬೇಕೆಂದು
ನಾನು ಹಲವು ಕಾಲ ತಪಿಸಿದ್ದೆನು. ಕಪಿಲಸಿದ್ಧಮಲ್ಲಿನಾಥಾ
ನಿಮ್ಮ ಶರಣ ಸಂಗನ ಬಸವಣ್ಣನ ಮಹಾಮನೆಗೆ
ನಮೋ ನಮೋ ಎಂದು ಬದುಕಿದೆನು. -ಸಿ.ವ. 866

ಅನುಭವ ಮಂಟಪವು ಒಂದು ಮುಕ್ತ ವಿಶ್ವವಿದ್ಯಾಲಯವಾಗಿ ಕಾರ್ಯ ಮಾಡಿತು. ಜಾತಿ, ವರ್ಣ, ವರ್ಗ, ಅಂತಸ್ತು, ಲಿಂಗ, ವಯೋಭೇದವಿಲ್ಲದೆ ಎಲ್ಲರನ್ನೂ ಬರಮಾಡಿಕೊಂಡಿತು, ಇಂಬಿಟ್ಟುಕೊಂಡಿತು, ಸಂಸ್ಕರಿಸಿತು.

ಅನುಭವ ಮಂಟಪವನ್ನು ಹೋಲುವ ಇನ್ನೊಂದು ಸಂಸ್ಥೆ ಜಗತ್ತಿನಲ್ಲಿ ಅಂದು-ಇಂದೂ ಕಾಣಬರದುದು ಅದರ ವಿಶೇಷ. ಹಿಂದೆ ರಾಜಮಹಾರಾಜರುಗಳ ಆಸ್ಥಾನಗಳು ಇರುತ್ತಿದ್ದವು. ಅಲ್ಲಿ ಕವಿ-ಪಂಡಿತರು, ಗಾಯಕ-ವಿದೂಷಕರು ಮುಂತಾದ ಸಾಕಷ್ಟು ಜನರು ಇರುತ್ತಿದ್ದರು. ಅವರಲ್ಲಿ ಬಹುಪಾಲು ಜನರು ರಾಜನನ್ನು ಓಲೈಸುವವರು, ಬಿರುದು-ಸನ್ಮಾನಗಳಲ್ಲಿ ಆಸಕ್ತರು ; ಇಲ್ಲವೇ ತಮ್ಮ ಪಾಂಡಿತ್ಯ ಪ್ರದರ್ಶನದಲ್ಲಿ ಉತ್ಸುಕರು. ಆದರೆ ಅನುಭವ ಮಂಟಪದ ಶರಣರು ಕರ್ತನನ್ನು, ಕರ್ತನಿಗೆ ಶರಣಾದ ಶರಣರನ್ನು ಮಾತ್ರ ಓಲೈಸುವವರು. ಅವರುಗಳು ಎಂತಹ ಪ್ರಸಂಗದಲ್ಲಿಯೂ ಧೃತಿಗೆಟ್ಟು ಅನ್ಯರನ್ನು ಬೇಡುವವರಲ್ಲ, ಮತಿಗೆಟ್ಟು ಅನ್ಯರನ್ನು ಹೊಗಳುವವರಲ್ಲ.

ಹಾಡಿದರೆ ಎನ್ನೊಡೆಯನ ಹಾಡುವೆ
ಬೇಡಿದರೆ ಎನ್ನೊಡೆಯನ ಬೇಡುವೆ
ಒಡೆಯಂಗೊಡಲ ತೋರಿ ಎನ್ನ ಬಡತನವ ಬಿನ್ನೈಸುವೆ
ಒಡೆಯ ಮಹಾದಾನಿ ಲಿಂಗದೇವಂಗೆ
ಸೆರಗೊಡ್ಡಿ ಬೇಡುವೆ -ಬ.ವ.ದೀ. 1178

ಎಂಬ ಅಚಲ ಶ್ರದ್ಧೆಯವರು. ಜನಕ ಮಹಾರಾಜನ ಒಡ್ಡೋಲಗ, ಸೋಕ್ರತೀಸನ ಚರ್ಚಾಕೂಟಗಳು, ಅಕ್ಬರನ ದಿನ್-ಇ-ಲಾಹಿಗಳು ಅನುಭವ ಮಂಟಪಕ್ಕೆ ಹೋಲುವಂತೆ ಕಂಡರೂ, ಅವುಗಳು ಮುಖ್ಯವಾಗಿ ತತ್ತ್ವಜ್ಞಾನಿಗಳು ಪಂಡಿತರ ಕೂಟಗಳು. ಅನುಭವ ಮಂಟಪ ಕೇವಲ ವಾದದ ಸಂತೆಯಾಗಿರಲಿಲ್ಲ, ಪರಮಾತ್ಮನನ್ನು 'ಮೈದುಂಬಿಕೊಂಡ' ಸರ್ವಾಂಗದಲ್ಲೂ ಅಳವಡಿಸಿಕೊಳ್ಳುವ ಹಂಬಲವುಳ್ಳ ಪ್ರಯೋಗಶೀಲ ಸಾಧಕರ, ಅನುಭಾವಿಗಳ ದಿವ್ಯ ಸಂಗಮವಾಗಿತ್ತು. ಇಂತಹ ಅನುಭವ ಮಂಟಪವನ್ನು ಜಗತ್ತಿನ ಮೊಟ್ಟ ಮೊದಲ ಲೋಕಸಭೆ ಎನ್ನಬಹುದು. ಪ್ರಜಾಪ್ರಭುತ್ವದ ಜೀವಾಳವಾದ ಲೋಕಸಭೆ ಅಥವಾ ಸಂಸತ್ತು ವಿಚಾರ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ, ಆಚಾರ ಸ್ವಾತಂತ್ರ್ಯಗಳನ್ನು ಪ್ರತಿಪಾದಿಸುವುದಷ್ಟೆ. ಅದೇ ರೀತಿ ಅನುಭವ ಮಂಟಪ ವಿಚಾರ ಸ್ವಾತಂತ್ರ್ಯವನ್ನು ಪ್ರತಿಪಾದಿಸಿತು. ವಾಕ್ ಸ್ವಾತಂತ್ರ್ಯಕ್ಕೆ ಅವಕಾಶ ನೀಡಿತು. ಅಂತೆಯೇ ಆಯ್ದಕ್ಕಿ ಮಾರಯ್ಯ, ನುಲಿಯ ಚಂದಯ್ಯನಂತಹವರು

ನಿರ್ಭೀತಿಯಿಂದ ತಮ್ಮ ಅಂತರಂಗದ ಚಿಂತನೆಯ ಹೊನಲನ್ನು ಚರ್ಚೆಗಳಲ್ಲಿ ಹರಿಸಬಲ್ಲವರಾದರು.

ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅನುಭವ ಮಂಟಪವನ್ನು ಮೊಟ್ಟ ಮೊದಲ "ವಿಶ್ವರಾಷ್ಟ್ರ ಸಂಸ್ಥೆ" (ಯು.ಎನ್.ಓ) ಎನ್ನಬೇಕು ಎಂದು ನನಗೆ ಅನ್ನಿಸುತ್ತದೆ. ವಿಶ್ವರಾಷ್ಟ್ರ ಸಂಸ್ಥೆಯು ಯಾವುದೇ ಒಂದು ದೇಶದ, ಒಂದು ಭಾಷೆಯ, ಒಂದು ಜನಾಂಗದ ಬಗ್ಗೆ ಆಲೋಚನೆ, ಹಿತಚಿಂತನೆ ಮಾಡದೆ ಇಡೀ ಜಗತ್ತಿನ, ಮಾನವ ಜನಾಂಗದ ಆಗುಹೋಗು ಕುರಿತು ಚಿಂತನೆ ಮಾಡುವುದು. ಅನುಭವ ಮಂಟಪವಾದರೂ ಅಷ್ಟೇ ; ಇಡೀ ಮಾನವ ಸಮಾಜಕ್ಕೆ ಬೇಕಾದ ಮೌಲ್ಯಗಳನ್ನು ಚಿಂತಿಸಿತು. ಧಾರ್ಮಿಕ, ಮಾನವೀಯ ಹಕ್ಕುಗಳು, ಆರ್ಥಿಕ-ಸಾಮಾಜಿಕ ಸಮಾನತೆ ಮುಂತಾದುವುಗಳನ್ನು ಎಲ್ಲರಿಗೂ ದೊರಕಿಸಿ ಕೊಡುವಲ್ಲಿ ಆಸಕ್ತಿ ತಾಳಿತ್ತು. ಈ ಪ್ರಯತ್ನ ಅಥವಾ ಹೋರಾಟ ಕೇವಲ ಭೌತಿಕ ಮೌಲ್ಯಗಳ ತಳಹದಿಯ ಮೇಲೆ ಇರದೆ, ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಅಳವಡಿಸಿಕೊಂಡುದು ಗಮನಾರ್ಹ ಅಂಶ.

## ಅನುಭವ ಮಂಟಪದ ಕೊಡುಗೆ

ಈ ವಿಷಯವನ್ನು ಬರೆಯಲು ನೂರಾರು ಪುಟಗಳ ಸ್ಥಳಾವಕಾಶಬೇಕಾದೀತು ಎಂದರೆ ಉತ್ಪ್ರೇಕ್ಷೆಯಲ್ಲ. ಏಕೆಂದರೆ ಅನುಭವ ಮಂಟಪದ ಕೊಡುಗೆ ಅಷ್ಟು ವ್ಯಾಪಕವಾಗಿದೆ.

**1. ಅಪೂರ್ವ ಜನಜಾಗೃತಿ :**

ಸಾಧು ಸಾಧೆಲೆ ಬಸವ ಓದು ಕಲಿಯಿತು ಜನವು
ಹೋದ ಹೋದಲ್ಲಿ ಹೊಸ ಮಾತು । ಕೇಳಿದವು
ಮೇದಿನಿಗೆ ಬಂತು ಹೊಸಬೆಳಕು ॥ -ಕ.ಬ. 12

ಸಾಗಿ ಬಸವನು ಬಂದು ತೂಗಿದನು ಕಲ್ಯಾಣ
ವಾಗಿನಲಿ ಕಟ್ಟಿ ಅನುಭಾವ । ಮಂಟಪದ
ಕೂಗು ಕೇಳುತಲಿ ಜನವೆದ್ದು ॥ -ಕ.ಬ. 22

ಅವರೆಗೂ ಪಂಡಿತರ-ಗುರುಕುಲದ ಸೊತ್ತಾಗಿದ್ದ, ಇನ್ನೂ ಸಮರ್ಪಕವಾಗಿ ಹೇಳಬೇಕೆಂದರೆ ತೊತ್ತಾಗಿದ್ದ ವಿದ್ಯಾಶ್ರೀಯನ್ನು ಜನಸಾಮಾನ್ಯರ ಮನ-ಮನೆ ತುಂಬುವ ಕಾರ್ಯವನ್ನು ಅಪ್ಪ ಬಸವಣ್ಣನವರು ಕೈಗೊಂಡರು. ಪರಿಣಾಮವಾಗಿ ಜನಸಮುದಾಯ ಓದು ಕಲಿಯಿತು. ಅವರ ಒಳಗಣ್ಣು ತೆರೆಯಿತು. ಹೀಗಾಗಿ ಈವರೆಗೂ ಕೇಳದಿದ್ದ ಹೊಸ ಹೊಸ ಮಾತುಗಳು ಕೇಳತೊಡಗಿದವು. ಭೂಮಿಗೆ ಹೊಸಬೆಳಕು ಬಂದಂತಾಯಿತು. ಬಸವಣ್ಣನವರು ಕಟ್ಟಿದ ಅನುಭವ ಮಂಟಪದ ದಿವ್ಯ ಕರೆಯನ್ನು (Divine call) ಕೇಳಿ ಜನಸಮುದಾಯ ವಿಚಾರ ದಾಸ್ಯವನ್ನು ಕೊಡವಿಕೊಂಡು ಮೇಲೆದ್ದಿತು. ಹೀಗೆ ಸಮಾಜದ ಅತ್ಯಂತ ಕೆಳಗಿನ ಸ್ತರದ ಜನರನ್ನೂ ಅನುಭವ ಮಂಟಪ ಜಾಗೃತಗೊಳಿಸಿತು. ಈವರೆಗೂ 'ವ್ಯವಸ್ಥೆ'ಯು ಕರ್ಮವಾದದ ಹೆಸರಿನಲ್ಲಿ ಹೇರಿದ್ದ ಹೊರೆಯನ್ನು ಕೊಡವಲು ಜನಸಮುದಾಯ ಸಿದ್ಧವಾಯಿತು.

**2. ಉದಾತ್ತ ಸಂಸ್ಕಾರ :**

ಅನುಭವ ಮಂಟಪವು ಕೇವಲ ಜಾಗೃತಿಸಿ ಜನರನ್ನು ಕೈಬಿಡಲಿಲ್ಲ. ಹೀಗೆ ಜಾಗೃತಗೊಂಡ ಹೃದಯಗಳಿಗೆ ಉದಾತ್ತ ಗುರಿಯನ್ನು ಒದಗಿಸಿತು ವಿಧಾಯಕ ಗುರಿಯಿಲ್ಲದೆ ಉಂಟಾದ ಎಚ್ಚರ ಅನೇಕ ಬಾರಿ ವಿಧ್ವಂಸಕ ರೂಪ ತಳೆಯುತ್ತದೆ. ಅದಕ್ಕಾಗಿ ಬಸವಣ್ಣನವರು ಮಾಡಿದುದೇನು ?

ಅರಿಯುಂದಕೆ ಕುರುಹೆಂದು ಕರಲಿಂಗ ನೀ ಕೊಟ್ಟ
ಶರಣೆಂಯೊ ನುಡಿಯ ಫಲಮಾಡಿ । ಶಿವಮತಕೆ
ಗುರು ಬಸವಲಿಂಗ ನಿಜಮಂತ್ರ ॥ -ಕ.ಬ.49



ಪರಮಾತ್ಮನ ಕೃಪೆ ಗಳಿಸಿಕೊಳ್ಳಲು ಎಲ್ಲರಿಗೂ ಅವಕಾಶ ಉಂಟು ಎಂದು ಹೇಳಿ, ಕರ್ತನ ಕುರುಹಾದ ಇಷ್ಟಲಿಂಗ ಕೊಟ್ಟರು. ಹುಟ್ಟಿನಿಂದ ಯಾರೂ ಶ್ರೇಷ್ಠ-ಕನಿಷ್ಠರಲ್ಲ, ಸಾಧನೆಯಿಂದ ಯಾರಾದರೂ ಶರಣರಾಗಬಹುದು ಎಂದು ಬಸವಣ್ಣನವರು ಸಾಧಿಸಿ ತೋರಿಸಿದರು. ಪ್ರತಿಯೊಬ್ಬ ವ್ಯಕ್ತಿಯೂ ಕಾಯಕ ಮಾಡಬೇಕು. ಅನ್ನವನ್ನೊದಗಿಸುವ ಕಾಯಕದಂತೆ, ಜ್ಞಾನವನ್ನು ಒದಗಿಸುವ ಅಧ್ಯಯನ, ಅನುಭಾವ ಗೋಷ್ಠಿಗಳೂ ಅತ್ಯಗತ್ಯ. ಆತ್ಮನ ಹಸಿವು ಎಲ್ಲ ಮಾನವರಿಗೂ ಉಂಟು ಅದನ್ನು ತಣಿಸಲು ಉಪಾಸನೆ ಅವಶ್ಯ. ಕಾಯಕ-ಅಧ್ಯಯನ-ಆರಾಧನೆಗಳು ಎಲ್ಲ ಮಾನವರಿಗೂ ಅಗತ್ಯವಿರುವ ಕಾರಣ ಧರ್ಮವು ಎಲ್ಲರಿಗೂ ಇವುಗಳ ಸೌಲಭ್ಯವನ್ನೊದಗಿಸಬೇಕು. ಈ ಸಿದ್ಧಾಂತವನ್ನು ಅರ್ಜನೆ-ಅರ್ಪಣೆ-ಅನುಭಾವ ಎಂಬ ತ್ರಿಕೂಟದ ಸಾಧನೆಯಲ್ಲಿ ಅನುಷ್ಠಾನಕ್ಕೆ ತಂದರು. ಈ ಜಗತ್ತನ್ನು, ಮಾನವ ಜೀವವನ್ನು ಸೃಷ್ಟಿಸಿದ ಕರ್ತನಲ್ಲಿ ಅನನ್ಯ ನಂಬುಗೆ ಇರಿಸಿ, ಕೃತಜ್ಞತೆ, ಸಲ್ಲಿಸಲೋಸುಗ ಅರ್ಚಿಸಬೇಕು. ದೈವೀ ಶ್ರದ್ಧೆಯನ್ನು ಒಸ್ತಲೆಯಲ್ಲಿರಿಸಿಕೊಂಡು ಸತ್ಯಶುದ್ಧಕಾಯಕ ಮಾಡಬೇಕು. ಸತ್ಯಸದಾಚಾರದಿಂದ ಅರ್ಜಿಸಲು ಯಾವುದೇ ಕಾಯಕವನ್ನು ಅವಲಂಬಿಸಬಹುದು.

ನಾನು ಆರಂಭವ ಮಾಡುವೆನಯ್ಯಾ ಗುರುಪೂಜೆಗೆಂದು
ನಾನು ಬೆವಹಾರವ ಮಾಡುವೆನಯ್ಯಾ ಲಿಂಗಾರ್ಚನೆಗೆಂದು
ನಾನು ಪರಸೇವೆಯ ಮಾಡುವೆನಯ್ಯಾ ಜಂಗಮದಾಸೋಹಕ್ಕೆಂದು
ನಾನಾವಾವ ಕರ್ಮಂಗಳ ಮಾಡಿದಡೆಯೂ ಆ ಕರ್ಮಫಲಭೋಗವ
ನೀ ಕೊಡುವೆ ಎಂಬುದ ನಾನು ಬಲ್ಲೆನು
ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದು ಕ್ರೀಯ ಮಾಡೆನು
ನಿಮ್ಮ ಸೊಮ್ಮಿಂಗೆ ಸಲಿಸುವೆನು, ನಿಮ್ಮಾಣೆ ಲಿಂಗದೇವ. ಬ.ವ.ವಿ: 706

ಶರೀರ ಪರಿಶ್ರಮದ ಒಕ್ಕಲುತನವೇ ಇರಲಿ, ಹಣದ ವಹಿವಾಟು ಪ್ರಧಾನವಾದ ವ್ಯಾಪಾರವೇ ಇರಲಿ, ಇನ್ನೊಬ್ಬರ ಕೈಕೆಳಗೆ ಮಾಡುವ ಪರಸೇವೆಯೇ ಇರಲಿ ಇವುಗಳ ಉದ್ದೇಶ ತಾನು ಗಳಿಸಿದ ಹಣವು ಗುರುಪೂಜೆ-ಲಿಂಗಾರ್ಚನೆ-ಜಂಗಮದಾಸೋಹಕ್ಕೆ ವಿನಿಯೋಗವಾಗಬೇಕೆಂಬುದು. ಮಾಡುವ ಮಾಟದಲ್ಲಿ ಶೀಲವಂತಿಕೆ, ದೈವೀಶರಣಾಗತಿ, ಪ್ರಾಮಾಣಿಕತೆ ಇರಬೇಕು. ತಾನು ಗಳಿಸಿದ ಸಂಪತ್ತು ತನ್ನ ಜೀವನದ ಅವಶ್ಯಕತೆಗಳ ತೃಪ್ತಿ ಮಾಡಿದ ನಂತರ, ಸಮಷ್ಟಿಯ ಹಿತಕ್ಕೆ ಸಲ್ಲಬೇಕು. ಹೀಗೆ ದಾಸೋಹದ ಮೂಲಕ ಸಮಾಜದ ಉದ್ಧಾರಕ್ಕೆ ಸಂದಾಗಲೇ ಮಾಡಿದ ಮಾಟ 'ಕಾಯಕ'ವಾಗುತ್ತದೆ. ಇಲ್ಲವಾದರೆ ಅದು ಅರ್ಥರಹಿತ ದುಡಿತ. ಕಾಯಕದಿಂದ ಗಳಿಸಿ, ದಾಸೋಹದ ಮೂಲಕ ಸಮಾಜಕ್ಕೆ ಸಲ್ಲಿಸಿ, ತಾನು ಉಂಡುದು ಪ್ರಸಾದವಾಗುತ್ತದೆ. ತನಗಾಗಿ ದುಡಿದು, ಗಳಿಸಿದುದೆಲ್ಲವನ್ನೂ ತಾನೇ ಉಪಯೋಗಿಸಿದಾಗ ಅದು ಪ್ರಸಾದವಲ್ಲ. ಹೀಗೆ ಕಾಯಕ-ದಾಸೋಹ-ಪ್ರಸಾದ ಈ ಮೂರರ ಮುಪ್ಪುರಿಯೇ 'ಅರ್ಪಣೆ'.

ಅರ್ಜನೆ-ವೈಯಕ್ತಿಕ ಆತ್ಮೋದ್ಧಾರವನ್ನು ಸಾಧಿಸಿತು ; ಅರ್ಪಣೆ ಐಹಿಕ ಉಪಜೀವನ, ಸಮಾಜದಲ್ಲಿ ಸಮೃದ್ಧಿ ಸಾಧಿಸಿತು. ಅನುಭಾವವು ಶರಣರ, ಪವಿತ್ರಾತ್ಮರ ಒಕ್ಕೂಟವನ್ನು ಸ್ಥಾಪಿಸುವುದು.

ಜ್ಞಾನದ ಬಲದಿಂದೆ ಅಜ್ಞಾನದ ಕೇಡು ನೋಡಯ್ಯಾ
ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯಾ
ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯಾ
ಪರುಷದ ಬಲದಿಂದ ಅಪಲೋಹದ ಕೇಡು ನೋಡಯ್ಯಾ
ಲಿಂಗದೇವನ ಶರಣರ ಅನುಭಾವದಿಂದ
ಎನ್ನ ಭವದ ಕೇಡು, ನೋಡಯ್ಯಾ. -ಬ.ವ.ವಿ.837
ಮಡಕೆಯ ಮಾಡುವರೆ ಮಣ್ಣೆ ಮೊದಲು

....ನಮ್ಮ ಲಿಂಗದೇವರನರಿವೊಡೆ
ಶರಣರ ಸಂಗವೇ ಮೊದಲು. -ಬ.ವ.ದೀ 68

ಹೀಗೆ ಭವಬಂಧನವನ್ನು ಹರಿದುಕೊಳ್ಳಲಿಕ್ಕಾಗಲೀ, ದೇವರನ್ನು ಅರಿಯುವುದಕ್ಕಾಗಲೀ ಶರಣರ ಸಂಗ ಅತ್ಯಗತ್ಯ. ಇನ್ನೊಂದು ಕಡೆ ಶರಣೆ ಆಯ್ದಕ್ಕಿ ಲಕ್ಕಮ್ಮ ಹೇಳುವಳು.

ತೊಟ್ಟು ಬಿಡದನ್ನಕ್ಕ ಮತ್ತಾಬುಡದಾಸೆ ಬೇಕು
ಮರ್ತ್ಯದ ಹಂಗುಳ್ಳನ್ನಕ್ಕ ಸತ್ಯಶರಣರ ಸಂಗ
ನಿತ್ಯ ಜಂಗಮಸೇವೆ ಕೃತ್ಯವಿರಬಹುದು.

ಆಯ್ದಕ್ಕಿ ಲಕ್ಕಮ್ಮನಂತಹ ಒಬ್ಬ ಸಾಮಾನ್ಯ ಗೃಹಿಣಿಗೆ ವ್ಯಕ್ತಿ-ಸಮಾಜಗಳ ಸಂಬಂಧದ ಅರಿವಿರುವುದನ್ನು ಕಂಡಾಗ ಅನುಭವ ಮಂಟಪದ ಮೂಲಕ ಗುರು ಬಸವಣ್ಣನವರು ನೀಡಿದ ಸಂಸ್ಕಾರ ಎಷ್ಟು ಅದ್ಭುತವಾಗಿರಬೇಕು ಎನ್ನಿಸುತ್ತದೆ. ಒಂದು ಹಣ್ಣು ಅಥವಾ ಹೂವು ಎಲ್ಲಿಯವರೆಗೆ ತೊಟ್ಟಿಗೆ ಅಂಟಿಕೊಂಡಿರುತ್ತದೋ, ಅಂದರೆ ಅದರ ಸಂಬಂಧ ಗಿಡದೊಡನೆ ಇರುತ್ತದೋ ಅಲ್ಲಿಯವರೆಗೂ ಅದು ಗಿಡದ ಹಿತಚಿಂತನೆ ಮಾಡಬೇಕು. 'ಗಿಡಕ್ಕೆ ಏನಾದರೇನು ತಾನು ಸುಖವಾಗಿದ್ದರೆ ಸಾಕು. ಎಂದು ಆಲೋಚಿಸುವಂತಿಲ್ಲ. ಗಿಡದ ಮೇಲೆ ಅದು ಅವಲಂಬಿ ; ಗಿಡದ ಸುರಕ್ಷಿತತೆಯಿಂದಲೇ ಒಂದು ಹೂವು ಅಥವಾ ಕಾಯಿಯ ಸುಭದ್ರತೆ. ಹಾಗೆಯೇ ವ್ಯಕ್ತಿ ಎಂಬ ಹೂವು (ಅಥವಾ ಕಾಯಿ) ಮರ್ತ್ಯ ಎನ್ನುವ ಗಿಡಕ್ಕೆ ಧರ್ಮ, ಸಮಾಜ ಎಂಬ ತೊಟ್ಟಿನ ಸಹಾಯದಿಂದ ಅಂಟಿಕೊಂಡಿರುವ ಕಾರಣ, ಮರ್ತ್ಯದ ಹಂಗು ಇರುವವರೆಗೂ ಎಲ್ಲರೂ ಸತ್ಯ ಶರಣರ ಸಂಗದಲ್ಲಿ ಇರಬೇಕು. ಜಂಗಮ ಸೇವೆಯಲ್ಲಿ ತೊಡಗಬೇಕು. ಹೀಗೆ ಕಾಯಕ-ದಾಸೋಹ-ಪ್ರಸಾದ ಎಂಬ ತ್ರಿಪುಟಿಯ 'ಅರ್ಪಣೆ' ಅನುಭವ ಮಂಟಪದ ಶ್ರೇಷ್ಠಕೊಡುಗೆ.

**3. ವಚನ ಸಾಹಿತ್ಯ :**

ಗುರು ಬಸವಣ್ಣನವರೇ ಆದಿ ಪ್ರಮಥರಾಗಿ ಅವರ ಸಮಕಾಲೀನ ಶರಣರು ಕೊಟ್ಟ ಅತ್ಯಮೂಲ್ಯ ಸಂಪತ್ತು ವಚನ ವಾಙ್ಮಯ. ಯಾವ ರಾಜಮಹಾರಾಜರನ್ನು ಹೊಗಳಿ, ಅವರಿಂದ ಬಿರಿದು ಬಾವಲಿ, ಬಹುಮಾನಗಳನ್ನು ಪಡೆದುಕೊಳ್ಳಲು ವಚನಗಳ ರಚನೆಯಾಗಲಿಲ್ಲ. ಸಚ್ಚಿದಾನಂದ ನಿತ್ಯ ಪರಿಪೂರ್ಣನಾದ ಕರ್ತನನ್ನು ಕೃತಜ್ಞತೆಯಿಂದ ಸ್ಮರಿಸಲು, ತಮ್ಮ ತಮ್ಮ ಅಂತರಂಗವನ್ನು ಶುದ್ಧೀಕರಿಸಲು, ಸಮಾಜದ ಲೋಪದೋಷ ಕಂಡು ಅದನ್ನು ತಿದ್ದಲು, ಶೋಷಣೆಯನ್ನು ಪ್ರತಿಭಟಿಸಲು, ಜಾತಿವರ್ಣವರ್ಗರಹಿತ ಕಲ್ಯಾಣರಾಜ್ಯ ಕಟ್ಟಲು ವಚನ ವಾಙ್ಮಯ ಸೃಷ್ಟಿಯಾಯಿತು. ಇದರಲ್ಲಿ ಸಾಹಿತ್ಯದ ಸೌಂದರ್ಯವಿದೆ ; ತತ್ತ್ವಜ್ಞಾನದ ಪರಿಮಳವಿದೆ ; ಅನುಭಾವದ ಮಕರಂದವಿದೆ.

ಅನುಭವ ಮಂಟಪ ಎಂಬ ಜೇಂಗೊಡದಲ್ಲಿ ಎಲ್ಲ ಜಾತಿ ಮತ ಪಂಥಗಳಿಂದಲೂ ಬಂದ ಸತ್ಯಾನ್ವೇಷಕ ಹೃದಯಿಗಳಾದ ಶರಣರೆಂಬ ಜೇನ್ನೊಣಗಳು ತಮ್ಮ ಅನುಭವದ ಮಕರಂದವನ್ನು ಕ್ರೋಢೀಕರಿಸಿದಾಗ ಹುಟ್ಟಿದುದು ಈ ವಚನ ವಾಙ್ಮಯ. ಎಲ್ಲರ ಹಕ್ಕು ಬಾಧ್ಯತೆಗಳನ್ನು ರಕ್ಷಿಸುವ ಧಾರ್ಮಿಕ, ಸಾಮಾಜಿಕ, ಆರ್ಥಿಕ ಸಮಾನತೆ ಸಾರುವ ಪ್ರಗತಿಪರ ದೃಷ್ಟಿಕೋನ ಹೊಂದಿದುದು ವಚನ ಸಾಹಿತ್ಯ.

ಬಸವಾದಿ ಪ್ರಮಥರ ಮತ್ತು ಅನುಭವ ಮಂಟಪದ ಶ್ರೇಷ್ಠ ಕೊಡುಗೆಯಾದ ವಚನ ಸಾಹಿತ್ಯವು ಜನಪರ ಚಳುವಳಿಯ ಒಂದು ಧ್ವನಿಯಾದುದು ಕನ್ನಡಕ್ಕೆ ಒತ್ತು ಕೊಡುವ ಮೂಲಕ. ಸಂಸ್ಕೃತವು ದೇವಭಾಷೆಯೆಂಬ ಪಟ್ಟಗಟ್ಟಿಕೊಂಡು, ನೇಮ ಸೀಮೆಗಳನ್ನು, ವಿಧಿ-ನಿಷೇಧಗಳನ್ನು ಹೇರಿಕೊಂಡು ಜನಸಾಮಾನ್ಯರನ್ನು ತಲ್ಪಲು ಅಸಮರ್ಥವಾದಾಗ, ತನ್ನಲ್ಲಿ ತುಂಬಿಕೊಂಡ ಧರ್ಮಶ್ರೀಯನ್ನು ಜನರ





ಮೇಲೆ ಹರಿಸದಿದ್ದಾಗ ಬಸವಣ್ಣನವರು ಆಡುಮಾತನ್ನೇ ಮೃಡನ ಮಾತನ್ನಾಗಿ, ನೆಲದ ಭಾಷೆಯನ್ನೇ ದೇವಭಾಷೆಯನ್ನಾಗಿ ಪರಿವರ್ತಿಸಿದರು. ನಿಜವಾದ ಕನ್ನಡದ ಚಳುವಳಿ ಆರಂಭಿಸಿದವರು ಪಟ್ಟಭದ್ರ ಹಿತಾಸಕ್ತರು ಉಳಿಸಿ, ಬೆಳೆಸಿ, ಪೋಷಿಸಿಕೊಂಡು ಬಂದಿದ್ದ ವ್ಯವಸ್ಥೆಯ ವಿರುದ್ಧ ದನಿ ಎತ್ತಿದ 'ಬಂಡಾಯ ಆಂದೋಳನ'ದ ಪ್ರಥಮ ನೇತಾರರು ವಚನ ವಾಙ್ಮಯಕಾರರು ಎಂದರೆ ಉತ್ಪ್ರೇಕ್ಷೆಯಾಗದು.

**4. ಸಮತಾವಾದಿ ಸಮಾಜ ರಚನೆ**

ಅನುಭವ ಮಂಟಪವು ಸರ್ವ ಮಾನವರ ಸಮಾನತೆಯನ್ನು ಘೋಷಿಸಿತಲ್ಲದೆ, ಶ್ರೇಣೀಕೃತ ಸಮಾಜ ವ್ಯವಸ್ಥೆಯನ್ನು ಪ್ರತಿಭಟಿಸಿತು. ಅದರ ನೇತಾರರೂ, ವಕ್ತಾರರೂ, ಸ್ಥಾಪಕರೂ ಆದ ಬಸವಣ್ಣನವರು ಹೀಗೆ ಹೇಳಿದರು.

ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ
ಜಲವೊಂದೆ ಶೌಚಾಚಮನಕ್ಕೆ
ಕುಲವೊಂದೆ ತನ್ನ ತಾನರಿದವಂಗೆ
ಫಲವೊಂದೆ ಷಡುದರ್ಶನ ಮುಕ್ತಿಗೆ
ನಿಲವೊಂದೆ ಲಿಂಗದೇವಾ, ನಿಮ್ಮನರಿದವಂಗೆ -ಬ.ವ.ದೀ. 874

ಹುಟ್ಟಿನಿಂದಲೇ ಮೇಲು-ಕೀಳು ಎಂದು ವಿಭಜಿಸುವ ಜಾತಿವಾದ, ಉದ್ಯೋಗದ ತಳಹದಿಯ ಮೇಲೆ ಮೇಳು-ಕೀಳು ಎನ್ನುವ ವರ್ಗವಾದ ಈ ಎರಡನ್ನೂ ಶರಣರು ಪ್ರತಿಭಟಿಸಿದರು. ಹುಟ್ಟಿನಿಂದಾಗಲೀ, ಉದ್ಯೋಗದಿಂದಾಗಲೀ ಯಾರೂ ಶ್ರೇಷ್ಠ-ಕನಿಷ್ಠರಲ್ಲ. ತಮ್ಮ ಸದಾಚಾರ-ಸನ್ನಡತೆಗಳಿಂದ ಯಾರು ಬೇಕಾದರೂ ತಮ್ಮ ಶರಣರು, ಗುರುಜಂಗಮರು ಆಗಬಹುದೆಂಬುದನ್ನು ಬಸವಾದಿ ಪ್ರಮಥರು ಪ್ರತಿಪಾದಿಸಿದರು.

ಹೊಲೆಗಂಡಲ್ಲದೆ ಪಿಂಡದ ನೆಲೆಗೆ ಆಶ್ರಯವಿಲ್ಲ
ಜಲಬಿಂದುವಿನ ವ್ಯವಹಾರವೊಂದೇ !
ಆಸೆ ಆಮಿಷ ರೋಷ ಹರುಷ ವಿಷಯಾದಿಗಳೆಲ್ಲ ಒಂದೆ
ಏನನೋದಿ, ಏನಕೇಳಿ, ಏನು ಫಲ ?
ಕುಲಜನೆಂಬುದಕ್ಕೆ ಆವುದು ದೃಷ್ಟ
"ಸಪ್ತಧಾತು ಸಮಂಪಿಂಡಂ ಸಮಯೋನಿ ಸಮುದ್ಭವಂ
ಆತ್ಮಜೀವ ಸಮಾಯುಕ್ತಂ ವರ್ಣಾನಾಂ ಕ್ರಿಂ ಪ್ರಯೋಜನಂ" ಎಂದುದಾಗಿ
ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾಧ
ಹಾಸನಿಕ್ಕಿ ಸಾಲಿಗನಾದ ವೇದವನೋದಿ ಹಾರುವನಾದ
ಕರ್ಣದಲಿ ಜನಿಸಿದವರುಂಟೇ ಜಗದೊಳಗೆ ?
ಇದು ಕಾರಣ ಲಿಂಗದೇವಾ
ಲಿಂಗಸ್ಥಲವನರಿದವನೆ ಕುಲಜನು ! -ಬ.ವ.ದೀ 588

ಪ್ರತಿಯೊಂದು ಮಗುವು ಜನ್ಮ ತಳೆಯುವುದೂ ಒಂದೇ ರೀತಿಯಲ್ಲಿ, ಹುಟ್ಟಿಬಂದಾನಂತರದ ಶಾರೀರಿಕ ಚಟುವಟಿಕೆಗಳೂ ಒಂದೇ ಬಗೆಯವು. ಆಸೆ-ಆಮಿಷ-ರೋಷ ಮುಂತಾದ ಮಾನಸಿಕ ಚಟುವಟಿಕೆಗಳು ಒಂದೇ ಇರುತ್ತವೆ. 'ಎಲ್ಲವೂ ಬ್ರಹ್ಮಸ್ವರೂಪ, ಎಲ್ಲರಲ್ಲಿಯೂ ಪರಮಾತ್ಮನ ಅಂಶವಿದೆ.' ಎಂಬ ಉದಾತ್ತ ಮಾತುಗಳನ್ನು ಶಾಸ್ತ್ರಗಳಲ್ಲಿ ಓದಿ, ಕೇಳಿ, ಅದನ್ನು ಪಠಣ ಮಾಡಿ ಪ್ರಯೋಜನವೇನು ? ಯಾವುದಾದರೂ ಒಂದು ವ್ಯಕ್ತಿಯನ್ನು ಶ್ರೇಷ್ಠ ಎನ್ನಲು ಆಧಾರ ಯಾವುದು ?

ಸಪ್ತಧಾತುಗಳಾದ ರಸ, ರುಧಿರ, ಮಾಂಸ, ಮೇಧಸ್, ಅಸ್ಥಿ, ಮಜ್ಜೆ ಶುಕ್ಲಗಳಿಂದಲೇ ಎಲ್ಲರ

ಶರೀರಗಳೂ ಆಗಿವೆ ; ಎಲ್ಲರೂ ಹುಟ್ಟುವ ಬಗೆಯೂ ಒಂದೇ ಆಗಿದೆ. ಎಲ್ಲರಲ್ಲಿಯೂ ಆತ್ಮ ದೇಹಗಳ ಬೆಸುಗೆ ಇದೆ ಎಂದಾಗ ಈ ವರ್ಣವ್ಯವಸ್ಥೆಯಿಂದ ಪ್ರಯೋಜನವೇನು ?

ಕಬ್ಬಿಣವನ್ನು ಕಾಸುವವ ಕಮ್ಮಾರ, ಬಟ್ಟೆ ತೊಳೆಯುವವ ಮಡಿವಾಳ, ಬಟ್ಟೆ ನೇಯುವವ ನೇಕಾರ, ಧರ್ಮಶಾಸ್ತ್ರಗಳನ್ನು ಓದುವವ ಬ್ರಾಹ್ಮಣ. ಹೀಗೆ ಗುಣವಾಚಕ ಮತ್ತು ಕಾಯಕವಾಚಕವಾಗಿ ಈ ಪದಗಳು ಬಳಕೆಯಾಗಬೇಕು. ಯಾರೂ ಅನೈಸರ್ಗಿಕ ಮತ್ತು ಅವೈಜ್ಞಾನಿಕವಾಗಿ ಹುಟ್ಟಲು ಸಾಧ್ಯವಿಲ್ಲ. ಪರಮಾತ್ಮನನ್ನು ಅರಿತವನು, ಅಳವಡಿಸಿಕೊಂಡವನು ಶ್ರೇಷ್ಠನು.

ಹೀಗೆ ನಿಚ್ಚಣಿಕೆಯೋಪಾದಿಯ ಶ್ರೇಣೀಕೃತ ವ್ಯವಸ್ಥೆ (Ladder type)ಯನ್ನು ಮಾನಿಸದೆ ಸಮಪಾತಳಿ(horizontal type)ಯ ಸಮತಾವಾದಿ ಸಮಾಜವನ್ನು ನಿರ್ಮಿಸುವಲ್ಲಿ ಅನುಭವ ಮಂಟಪ ಶ್ರಮಿಸಿತು. ಶತಶತಮಾನಗಳಿಂದಲೂ ಭಾರತೀಯರಲ್ಲಿ ರಕ್ತಗತವಾಗಿದ್ದ, ಬೇರು ಬಿಟ್ಟಿದ್ದ ನಂಬಿಕೆಗಳನ್ನು ಅಲುಗಿಸಿ, ಹೊಸ ವಿಚಾರದ ಕೃಷಿ ಮಾಡಿತು.

**5. ಪಂಚ ಆಚಾರಗಳು**

ಅನುಭವ ಮಂಟಪವು ಪ್ರತಿಪಾದಿಸಿದ ಪಂಚ ಆಚಾರಗಳು ಪ್ರಗತಿಪರ ಧರ್ಮ, ರಾಷ್ಟ್ರಧರ್ಮ, ವಿಶ್ವಧರ್ಮ ಎಂಬ ವಿಶ್ಲೇಷಣಗಳನ್ನು ಲಿಂಗವಂತ ಧರ್ಮಕ್ಕೆ ಒದಗಿಸುತ್ತವೆ. ಬಹುದೇವತಾ ಉಪಾಸನೆಯ ಜಂಜಂಡಕ್ಕೆ ಸಿಕ್ಕಿ ಹಾಳುಮೊರಡಿಗಳಲ್ಲಿ, ಊರದಾರಿಗಳಲ್ಲಿ, ಕೆರೆಭಾವಿಗಳಲ್ಲಿ, ಚೌಪಥ ಪಟ್ಟಣಂಗಳಲ್ಲಿ ನೆಲೆಸಿದ್ದ ಅರಗು ತಿಂದು ಕರಗುವ ದೈವ, ಉರಿಯ ಕಂಡರೆ ಮುರುಟುವ ದೈವ, ಅಂಜಿಕೆಯಾದರೆ ಹೂಳುವ ದೈವಗಳನ್ನೆಲ್ಲ ಪೂಜಿಸಿ ಘಾಸಿಗೊಳ್ಳುತ್ತಿದ್ದ ಜನರಿಗೆ 'ಲಿಂಗಾಚಾರ' ಅಥವಾ ಏಕದೇವೋಪಾಸನೆಯನ್ನು ಬಸವಾದಿ ಪ್ರಮಥರು ಕಲಿಸಿ ಲಿಂಗವಂತ ಧರ್ಮವನ್ನು ಅತ್ಯಂತ ಪ್ರಗತಿಪರ, ವೈಚಾರಿಕ ಧರ್ಮ (Rational religion)ವನ್ನಾಗಿಸಿದರು. ಅಮೂಲ್ಯನು, ಅಪ್ರಮಾಣನು, ಅಗೋಚರನು, ಸರ್ವಶಕ್ತನೂ ಆದ ಪರಮಾತ್ಮನ ನಿಜ ಸ್ವರೂಪವನ್ನು ತಿಳಿಸಿ, ಅವನನ್ನು ಲಿಂಗದೇವನೆಂದು ಕರೆದು ಆ ಲಿಂಗದೇವನನ್ನು ವಿಶ್ವದಾಕಾರದಲ್ಲಿ ಪೂಜಿಸುವ ಇಷ್ಟಲಿಂಗವನ್ನು ಕೊಟ್ಟು ಧರ್ಮಪಿತ ಬಸವಣ್ಣನವರು ಕಟ್ಟುನಿಟ್ಟಿನ ಏಕದೇವೋಪಾಸನೆಯನ್ನು ಭಾರತದ ಇತಿಹಾಸದಲ್ಲಿಯೇ ಮೊಟ್ಟಮೊದಲ ಬಾರಿಗೆ ಪ್ರತಿಪಾದಿಸಿದರು. ತಾವು ಮಾಡಿದ ಆರ್ಥಿಕ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಕ್ರಾಂತಿಗೆ ದೇವರ ಕಲ್ಪನೆಯನ್ನೇ ತಳಹದಿಯನ್ನಾಗಿ ಇರಿಸಿಕೊಂಡುದು ಗಮನಾರ್ಹ ತತ್ತ್ವ. ದೇವರು-ಧರ್ಮವನ್ನು ನಂಬಿಯೂ ನಾವು ಪ್ರಗತಿಪರ ಧೋರಣೆಯವರು, ಸಮತಾವಾದಿಗಳೂ, ಜಾತ್ಯತೀತರೂ ಆಗಿರಲು ಸಾಧ್ಯ ಎಂಬುದನ್ನು ಈ ಪಂಚ ಆಚಾರಗಳ ಮೂಲಕ ತೋರಿಸುತ್ತಾರೆ.

ಎರಡನೆಯದಾದ 'ಸದಾಚಾರ'ವು ಸತ್ಯ ಶುದ್ಧ ಕಾಯಕ, ಸರಳ ಜೀವನ, ದಾಸೋಹ ಮುಂತಾದ ತತ್ತ್ವಗಳನ್ನು ಪ್ರತಿಪಾದಿಸಿ ಆರ್ಥಿಕ ಸಮಾನತೆ ಸಾಧಿಸಲು ಯತ್ನಿಸುತ್ತದೆ. ಸದಾಚಾರ ಅಥವಾ ಆರ್ಥಿಕ ಸಮಾನತೆ (Economic Equality)ಯ ಸಾರವನ್ನು ಹೀಗೆ ಹೇಳಬಹುದು. "ಪರಮಾತ್ಮನು ಮನುಷ್ಯನನ್ನು ಸೃಷ್ಟಿಸಿ ಅವನಿಗೆ ಕಾಯಕ ಮಾಡಲು ವಿಪುಲ ಅವಕಾಶವಿರುವಂತೆ ಈ ಮರ್ತ್ಯವನ್ನು ಸೃಜಿಸಿದ್ದಾನೆ. ತಿನ್ನಲು ಒಂದು ಬಾಯಿಕೊಟ್ಟಿದ್ದರೆ, ದುಡಿಯಲು ಎರಡು ಕೈಗಳನ್ನು ಕೊಟ್ಟಿದ್ದಾನೆ. ಆದ್ದರಿಂದ ವ್ಯಕ್ತಿಯು ಪರಾವಲಂಬಿಯಾಗಿ ಬಾಳದೆ ದುಡಿದು ತಿನ್ನಬೇಕು. "ವ್ರತ ತಪ್ಪಲು ಸೈರಿಸಬಹುದು; **ಕಾಯಕ ತಪ್ಪಲು ಸೈರಿಸಬಾರದು.**" ನಾವು ಮಾಡಿದುದು ಕೇವಲ ದುಡಿತವಾಗದೆ ಕಾಯಕವಾಗಬೇಕಾದರೆ ಅದರಲ್ಲಿ ಸತ್ಯತೆ ಇರಬೇಕು, ಶುದ್ಧತೆ ಇರಬೇಕು. ಇದು ಪರಮಾತ್ಮನನ್ನು ಒಲಿಸುವ ಪವಿತ್ರ ಪೂಜೆ ಎಂಬ ಶ್ರದ್ಧೆ ಇರಬೇಕು. ಶರಣನು ಸರಳ ಜೀವನ ಸ್ವೀಕರಿಸಿ, ಕಾಯಕದಿಂದ ಬಂದ ಸಂಪತ್ತನ್ನು ಜೀವನಾವಶ್ಯಕತೆಗಳ ತೃಪ್ತಿಗಾಗಿ ಬಳಸಿ, ಮಿಕ್ಕುದನ್ನು ದಾಸೋಹಂಭಾವನೆಯಿಂದ ಸಮಾಜದ ಹಿತಕ್ಕೆ



ಬಳಸಬೇಕು. ಹೀಗೆ ಕಾಯಕ-ದಾಸೋಹಗಳೆಂಬ ಎರಡು ಮುಖಗಳಿರುವ ನಾಣ್ಯ 'ಸದಾಚಾರ.' ಇಂಥ ಸದಾಚಾರಕ್ಕೆ ಮಾತ್ರ ದೇವನೊಲಿವನು.

ಪರಮಾತ್ಮನ ಸೃಷ್ಟಿಯಲ್ಲಿ ಎಲ್ಲರೂ ಸಮಾನರು. ಆದ್ದರಿಂದ ಹುಟ್ಟು-ಉದ್ಯೋಗ, ಲಿಂಗಭೇದ ಇವುಗಳ ಆಧಾರದ ಮೇಲೆ ವಿಂಗಡಿಸಿ ಯಾರನ್ನೇ ಯಾವುದೇ ಹಕ್ಕು ಬಾಧ್ಯತೆಗಳಿಂದ ವಂಚಿಸಬಾರದು ಎಂಬುದೇ 'ಶಿವಾಚಾರ'. ಇದು ಸಾಮಾಜಿಕ-ಸಮಾನತೆಯನ್ನು ಪ್ರತಿಪಾದಿಸುತ್ತದೆ.

ನಾಲ್ಕನೆಯದಾದ ಗಣಾಚಾರವು ಸಾಮಾಜಿಕ ಅನಿಷ್ಟಗಳಾದ ಜಾತಿಭೇದ , ಮೂಢನಂಬಿಕೆ, ಶೋಷಣೆ ಮುಂತಾದುವುಗಳನ್ನು ಪ್ರತಿಭಟಿಸುವ ತತ್ತ್ವನಿಷ್ಠೆಯನ್ನು, ಧೈರ್ಯವಂತಿಕೆಯನ್ನು ಕಲಿಸುತ್ತದೆ. ಸತ್ಯವನ್ನು ನಿರ್ಭೀತಿಯಿಂದ ಪ್ರತಿಪಾದಿಸುವ ಎದೆಗಾರಿಕೆಯನ್ನು ಬೆಳೆಸುತ್ತದೆ. ಗಣಾಚಾರವೆಂದರೆ ಕ್ರೌರ್ಯವಲ್ಲ ಧೈರ್ಯ ; ಸಮಾಜದ ಹಿತವನ್ನು ರಕ್ಷಿಸಲು ಬೇಕಾದ ಮಾನವೀಯತೆಯಿಂದ ಕೂಡಿದ ಎದೆಗಾರಿಕೆಯೇ ಗಣಾಚಾರ.

ಐದನೆಯದಾದ ಭೃತ್ಯಾಚಾರವು ವ್ಯಕ್ತಿಯನ್ನು ಸಮಷ್ಟಿಯ ಒಂದಂಗವಾಗಿ ಬದುಕುವ ಉದಾತ್ತ ಪ್ರಜ್ಞೆಯನ್ನು ಬೆಳೆಸುತ್ತದೆ. ಸಮಷ್ಟಿಯ ಹಿತಕ್ಕಾಗಿ ವ್ಯಕ್ತಿಯು ಸಮರ್ಪಣ ಭಾವನೆಯಿಂದ, ತ್ಯಾಗಬುದ್ಧಿಯಿಂದ ದುಡಿಯಲು ಪ್ರೇರೇಪಿಸುತ್ತದೆ. ವಿನಯವಿಲ್ಲದ ವೀರತ್ವ ಕ್ರೌರ್ಯವಾಗಬಹುದು ; ವೀರತ್ವವಿಲ್ಲದ ವಿನಯ ಹೇಡಿತನವಾಗಬಹುದು. ಆದ್ದರಿಂದ ಬದುಕಿನಲ್ಲಿ ವಿನಯ-ವೀರತ್ವಗಳು ಕೂಡಿಯೇ ಸಾಗಬೇಕೆಂಬುದು ಬಸವಣ್ಣನವರ ಅಭಿಪ್ರಾಯ.

ಎಡದ ಕೈಯಲು ಹಾಲ ಬಟ್ಟಲು
ಬಲದ ಕೈಯಲು ಓಜಗಟ್ಟಿಗೆ
ಯಾವಾಗ ಬಂದಾನೋ ನಮ್ಮಯ್ಯ
ಬಡಿದು ಹಾಲು ಕುಡಿಸುವ ತಂದೆ -ಬ.ವ.ದೀ. 389

ಎಂಬ ವಚನದಲ್ಲಿ ದೇವರ ಎರಡು ಮುಖಗಳು ವ್ಯಕ್ತವಾಗುತ್ತವೆ. ಒಂದು ಹಾಲನ್ನು ಹಿಡಿದು ಕುಡಿಸಲು ಯತ್ನಿಸುವ ತಾಯಿಯ ಮಾತೃವಾತ್ಸಲ್ಯ. ಇನ್ನೊಂದು, ಕುಡಿಯದೆ ಹಟ ಮಾಡುವ ಮಗುವಿಗೆ ಬೆದರಿಸಿ ಹಾಲು ಕುಡಿಸುವ ತಂದೆಯ ಕರ್ತವ್ಯ ಪ್ರಜ್ಞೆ, ಭೃತ್ಯಾಚಾರ-ಗಣಾಚಾರಗಳ ಸ್ವರೂಪವು ಹೀಗೇ ಇರುತ್ತದೆ. ಪಂಚಾಚಾರಗಳು ಈ ರೀತಿಯಲ್ಲಿ ಆರ್ಥಿಕವಾಗಿ ಸಮೃದ್ಧವಾದ, ನೈತಿಕವಾಗಿ ಪರಿಪುಷ್ಟವಾದ, ಆಧ್ಯಾತ್ಮಿಕವಾಗಿ ಪರಿಪೂರ್ಣವಾದ, ಸಮಗ್ರ ಸಮಾಜವನ್ನು ಕಟ್ಟಲು ನೆರವಾಗುತ್ತವೆ.

ಅಷ್ಟಾವರಣ, ಪಂಚಾಚಾರ, ಷಟಸ್ಥಲ ಎಂಬ ಪರಿಕಲ್ಪನೆ (Concept)ಗಳು ಧರ್ಮಪಿತ ಬಸವಣ್ಣನವರ ಕೊಡುಗೆ. ಇಂಥ ಅಮೂಲ್ಯ ಕಲ್ಪನೆಗಳು ಮೊದಲೇ ಇದ್ದವು ಎಂಬ ವಾದವನ್ನು ಕೆಲವರು ದುರುದ್ದೇಶದಿಂದ ಹುಟ್ಟುಹಾಕಿದ್ದಾರೆ. ಅಷ್ಟಾವರಣದಲ್ಲಿ ಬರುವ ಮೊದಲನೆ "ಗುರು" ತತ್ತ್ವವು ಕೇವಲ ದೀಕ್ಷಾಗುರುವಿಗೆ ಅನ್ವಯವಾಗದೆ, ಧರ್ಮಗುರುವಿಗೆ ಅನ್ವಯವಾಗುತ್ತದೆ. ಹಾಗಾದಾಗ ಮಾತ್ರ ಉಳಿದ 7 ಆವರಣಗಳಿಗೆ ಬೆಲೆ ಬರುತ್ತದೆ. ಅದೇ ರೀತಿ ಪಂಚಾಚಾರಗಳ ಪರಿಕಲ್ಪನೆ ಕೊಟ್ಟವರು ಧರ್ಮಪಿತರು. ಇದನ್ನು ನಿಸ್ಸಂದೇಹಪೂರ್ವಕವಾಗಿ ಪ್ರತಿಪಾದಿಸಲು "ಬಸವಾಚಾರ" ಎಂಬ ತತ್ತ್ವವನ್ನು 1994ರಲ್ಲಿ ಪೂಜ್ಯ ಅಪ್ಪಾಜಿಯವರು, ನಾವು ಸೇರಿಸಿ, 1. ಬಸವಾಚಾರ, 2. ಲಿಂಗಾಚಾರ, 3.ಸದಾಚಾರ 4. ಶಿವಾಚಾರ. 5.ಗಣಾಚಾರ. 6.ಭೃತ್ಯಾಚಾರ ಎಂದು ಷಡಾಚಾರಗಳನ್ನು ಮಾಡಲಾಗಿದೆ. ಬಸವಾಚಾರವೆಂದರೆ, "ಸೃಷ್ಟಿಕರ್ತ ಲಿಂಗದೇವನ ಪ್ರತಿನಿಧಿಯಾಗಿ ಧರ್ಮಪಿತ ಬಸವಣ್ಣನವರು ಅವತರಿಸಿ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಯುಕ್ತವಾದ ಲಿಂಗಾಯತ ಧರ್ಮವನ್ನು ಕೊಟ್ಟರು. ಧರ್ಮಗುರು ಬಸವಣ್ಣನವರೇ ನಮಗೆ ಮುಕ್ತಿದಾಯಕ ಮಹಾಗುರು" ಎಂದು ದೃಢವಾಗಿ ನಂಬುವುದು. ಇದಕ್ಕೆ ಸಾಕ್ಷಿಯಾಗಿ ಅನೇಕ ವಚನಗಳಿವೆ. ಒಂದೆರಡನ್ನು ಉಲ್ಲೇಖಿಸಬಹುದು.

"ಮರ್ತ್ಯಲೋಕದ ಮಹಾಮನೆ ಹಾಳಾಗಿ ಹೋಗಬಾರದೆಂದು
ಕರ್ತನು ಅಟ್ಟಿದನಯ್ಯ ಬಸವಣ್ಣನ" -ಅಲ್ಲಮಪ್ರಭು

"ಜಗದ್‌ಹಿತಾರ್ಥಕ್ಕಾಗಿ ಮರ್ತ್ಯಕ್ಕೆ ಅವತರಿಸಿದ ನಮ್ಮ ಬಸವಣ್ಣ" -ಅಕ್ಕಮಹಾದೇವಿ

ಕತ್ತಲೆಯಲ್ಲಿ ಕನ್ನಡಿಯ ನೋಡಿ ಕಳವಳಗೊಂಡೆನಯ್ಯಾ
ನಿಮ್ಮ ಶರಣ ಬಸವಣ್ಣನ ತೇಜದೊಳಗಲ್ಲದೆ
ಅನಿನ್ನೆಂತು ಕಾಂಬೆ ಹೇಳಾ ಚನ್ನಮಲ್ಲಿಕಾರ್ಜುನಾ -ಅಕ್ಕಮಹಾದೇವಿ-214

ಇಷ್ಟಲಿಂಗವೆಂಬ ದರ್ಪಣದ ಮೂಲಕ ಲಿಂಗದೇವನೆಂಬ ಪರಮಾತ್ಮನನ್ನು ದರ್ಶಿಸಲು ಧರ್ಮಗುರು ಬಸವಣ್ಣ ನೀಡುವ ಜ್ಞಾನವೇ ಸಹಾಯಕವಾಗುವ ಬೆಳಕು. ಈ ದೃಷ್ಟಿಯಲ್ಲಿ ಧರ್ಮಗುರು ಬಸವಣ್ಣನವರು ಮೋಕ್ಷದಾಯಕರು ; ಮೋಕ್ಷದಾತ ಪರಮಾತ್ಮನಿಂದ ಮೋಕ್ಷ ಕೊಡಿಸಬಲ್ಲ ಮೋಕ್ಷಗುರು.

**6. ಅನುಭವ ಮಂಟಪದ ವಿಶ್ವಮಾನವ ಸಂದೇಶ**

ಈ ಜಗತ್ತು ಕರ್ತನ ಮಹಾನ್ ಕಮ್ಮಟ (Workshop) ಇಲ್ಲಿ ಉತ್ತಮ ವಸ್ತುಗಳಾಗಿ ಸಿದ್ಧವಾದರೆ ನಾವು ಕರ್ತನಲ್ಲಿಯೂ ಸಲ್ಲುತ್ತೇವೆ. (ಬ.ವ.ದೀ. 157) ಸ್ವರ್ಗಲೋಕ, ಮೃತ್ಯುಲೋಕ ಎಂಬವು ಬೇರೆ ಎಲ್ಲಿಯೂ ಇಲ್ಲ. ಇವೆಲ್ಲವೂ ಈ ಮರ್ತ್ಯದಲ್ಲಿಯೇ ಇವೆ. ಸತ್ಯವನ್ನು ನುಡಿಯುವುದೇ ದೇವಲೋಕ, ಮಿಥ್ಯವನ್ನು ನುಡಿಯುವುದೇ ಮೃತ್ಯುಲೋಕ. ಸದಾಚಾರವಿದ್ದುದೇ ಸ್ವರ್ಗ, ದುರಾಚಾರದ ಬೀಡೇ ನರಕ. (ಬ.ವ.ದೀ. 241)

ಧರ್ಮವಂತಿಕೆ ಕೇವಲ ಸ್ನಾನ-ಮಡಿಗಳಲ್ಲಿಲ್ಲ. ಅದು ನಡೆ-ನುಡಿ, ಆಚಾರ-ವಿಚಾರಗಳಲ್ಲಿ ಅಭಿವ್ಯಕ್ತಿಗೊಳ್ಳಬೇಕು. ನಾಲಿಗೆಯಲ್ಲಿ ಕಠೋರತೆ, ಮನದಲ್ಲಿ ವಂಚನೆ, ವರ್ತನೆಯಲ್ಲಿ ಕೋಪತಾಪ ಸಲ್ಲವು. ಧರ್ಮವಂತನ ಅಂತಃಕರಣದಲ್ಲಿ ದಯೆ-ಮಾನವೀಯತೆ ತುಂಬಿ ತುಳುಕಬೇಕು. ಈ ಮಾನವ ಜೀವನವು ಪರಮಾತ್ಮನ ಒಂದು ಶ್ರೇಷ್ಠ ವರ. ಐಹಿಕ ಜೀವನವನ್ನು, ಜಗತ್ತನ್ನು ಹೇಯವೆಂದು, ಮಾಯೆಯೆಂದು ಭಾವಿಸದೆ ಇದರ ಪರಿಪೂರ್ಣತೆಗೆ ಯತ್ನಿಸಬೇಕು.

ಶ್ರೇಣೀಕೃತ ಜಾತಿ ವ್ಯವಸ್ಥೆಯು ಮಾನವ ಕಲ್ಪಿತವೇ ವಿನಾ ದೇವನಿರ್ಮಿತವಲ್ಲ. ವ್ಯಕ್ತಿಯು ಹುಟ್ಟಿದ ಜಾತಿ, ಮುಖ್ಯವಲ್ಲ ಅವನ ಸಾಧನೆ ಬಲು ಮುಖ್ಯ. ಶಾಸ್ತ್ರಗಳು ಜ್ಞಾನದ ಆಗರಗಳಾಗಿದ್ದರೂ ಅವುಗಳಲ್ಲಿ ಲೋಪದೋಷಗಳಿರುತ್ತವೆ. ಆದ್ದರಿಂದ ಶಾಸ್ತ್ರಪ್ರಮಾಣಕ್ಕಿಂತಲೂ ಅನುಭವಪ್ರಮಾಣ ಬಹುಮುಖ್ಯ. ತನ್ನ ಅಂತರಾತ್ಮ ಮನ್ನಿಸಿದುದೇ ಪರಮ ಪ್ರಮಾಣ. ಅದರ ಅನುಷ್ಠಾನಕ್ಕಾಗಿ ನಿಷ್ಠೆಯಿಂದ ದುಡಿ.

"ಇವನು ಯಾರು ?' ಇವನು ಯಾರು? ಎಂದು ಸಂಕುಚಿತ ಬುದ್ಧಿಯಿಂದ ಪ್ರಶ್ನಿಸಿ ಯಾರನ್ನೇ ಆಗಲಿ ಹೊರಹಾಕುವುದಕ್ಕಿಂತಲೂ ಇವನು ನಮ್ಮವ, ಇವನು ನಮ್ಮವ ಎಂಬ ವಿಶಾಲ ಮನೋಭಾವದಿಂದ ಎಲ್ಲರನ್ನೂ ಇಂಬಿಟ್ಟುಕೊ. ಆಗಲೇ ನೀನು ಪರಮಾತ್ಮನ ಮಹಾಮನೆಯ ಪ್ರೀತಿಯ ಮಗನಾಗಲು ಸಾಧ್ಯ." ಈ ವಿಶ್ವಭ್ರಾತೃತ್ವವನ್ನು ಸಾರಿದ ಮಹಾನ್ ವೇದಿಕೆ ಹನ್ನೆರಡನೆಯ ಶತಮಾನದ ಅನುಭವ ಮಂಟಪ.

-ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ





## ಚಿ (ಛೀ).ಮೂ. ಲೇಖನಕ್ಕೆ ಒಂದು ಪ್ರತಿಕ್ರಿಯೆ

ದಿ. 23-9-2000 ವಿಜಯಕರ್ನಾಟಕದಲ್ಲಿ ಚಿದಾನಂದಮೂರ್ತಿಗಳು ಮತ್ತೆ ವೀರಶೈವರು ಪ್ರತಿಶತ ನೂರರಷ್ಟು ಹಿಂದೂಗಳೇ ಎಂದು ಘಂಟಾಘೋಷವಾಗಿ ಸಾರಿ ಬಸವ ಧರ್ಮೀಯರಿಗೆ ಅಪಾರ ನೋವುಂಟು ಮಾಡುತ್ತಿದ್ದಾರೆ. ಹಿಂದೂ ಧರ್ಮದಲ್ಲಿದ್ದು ಶೂದ್ರರೆನಿಸಿಕೊಳ್ಳಲು ಅವರಿಗೆ ಯಾವ ಸುಖ ಕಾಣಿಸುತ್ತಿದೆಯೋ ತಿಳಿಯದು. ವೇದಗಳಲ್ಲಿ ಶೂದ್ರರನ್ನು ಎಷ್ಟು ಕೀಳಾಗಿ ಕಂಡಿದ್ದಾರೆಂಬುದು ಈ ಮಹಾನ್ ಸಂಶೋಧಕರಿಗೆ ತಿಳಿಯದೆ ? ಧಾರ್ಮಿಕ ಅಲ್ಪ ಸಂಖ್ಯಾತರ ಲಾಭ ಪಡೆಯಲು ಮತ್ತು ಲಿಂಗಾಯತರೆಂದು ಹೇಳಿಕೊಳ್ಳುವುದು ಎಂದು ಅವರು ಭ್ರಮಿಸಿರುವದು ಎಷ್ಟು ವಿಚಿತ್ರ. ಸಾಮಾಜಿಕ ಲಾಭಕ್ಕಿಂತ ಸ್ವಾಭಿಮಾನ ಮುಖ್ಯ ಎಂಬುದು ಇವರಿಗೇಕೆ ಅರ್ಥವಾಗುತ್ತಿಲ್ಲ ? ಇರಲಿ. ಇವರನ್ನು ತಿದ್ದಲು ಬ್ರಹ್ಮನಿಗೂ ಆಗಲಿಕ್ಕಿಲ್ಲ.

ಆದರೆ ಬಸವಣ್ಣನವರನ್ನು ಲಿಂಗಾಯತ ಧರ್ಮ ಸ್ಥಾಪಕರೆಂದು ನಂಬುವ ಜನ ಒಂದು ಮಾತನ್ನು ತಿಳಿಯಬೇಕಾಗಿದೆ. ಏನೆಂದರೆ ಪಂಚಪೀಠದವರು ಮತ್ತು ಚಿದಾನಂದ ಮೂರ್ತಿಯಂಥವರು ಬಸವಣ್ಣನವರನ್ನು ಲಿಂಗಾಯತ ಧರ್ಮಸ್ಥಾಪಕರೆಂದು ಒಪ್ಪುವುದು ಸಾಧ್ಯವಿಲ್ಲ. ಏಕೆಂದರೆ ಅವರಿಗೆ ತತ್ತ್ವ ಸ್ವಾಭಿಮಾನಗಳಿಗಿಂತ ತಮ್ಮ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳುವುದು ಮುಖ್ಯವಾಗಿದೆ. ಈ ವಿಷಯದಲ್ಲಿ ಹಿಂದೆ ನ್ಯಾಯಾಲಯದಲ್ಲಿ ಹೋರಾಟವಾದರೂ ಪಂಚಪೀಠಗಳವರ ವಿರೋಧದಿಂದಾಗಿಯೇ ಲಿಂಗಾಯತ ಧರ್ಮ ಸ್ವತಂತ್ರ ಧರ್ಮ ಎಂದು ಒಪ್ಪಿಗೆಯಾಗದೇ ಉಳಿದಿದೆ. ಆದ್ದರಿಂದ ತರ್ಕದಲ್ಲಿ ಅವರನ್ನು ಒಪ್ಪಿಸುವುದು ಸಾಧ್ಯವಿಲ್ಲ. ಏಕೆಂದರೆ ಮಲಗಿದವರನ್ನು ಎಬ್ಬಿಸಬಹುದು ಆದರೆ ನಿದ್ರೆಯ ನಾಟಕ ಮಾಡುವವರನ್ನಲ್ಲ. ಆದ್ದರಿಂದ ಅವರನ್ನು ಅವರ ಪಾಡಿಗೆ ಬಿಟ್ಟು ಬಸವಣ್ಣನವರನ್ನು ಧರ್ಮಗುರುವೆಂದು ಒಪ್ಪಿದವರು ಲಿಂಗಾಯತ ಧರ್ಮವನ್ನು ಒಂದು ಸ್ವತಂತ್ರ ಧರ್ಮ ಎಂದು ಸರಕಾರವನ್ನು ಒಪ್ಪಿಸಲು ಕಾನೂನು ಬದ್ಧ ಕ್ರಮಗಳನ್ನು ಕೈಗೊಳ್ಳಲು ಮುಂದಾಗಬೇಕು, ಈಗಾಗಲೇ ನೀವು ಈ ತತ್ತ್ವಗಳನ್ನು ಒಪ್ಪಿದವರ ಒಂದು ಸಂಘಟನೆ ಮಾಡಿದ್ದೀರೇನೋ ಸರಿ. ಆದರೆ ಈ ಸಂಘಟನೆಗೆ ಕಾನೂನಿನ ಮುದ್ರೆ ಬೀಳುವಂತೆ ನೋಡಿ ಕೊಳ್ಳಬೇಕಾಗಿದೆ. ಆದ್ದರಿಂದ ಈ ವಿರೋಧಿಗಳನ್ನು ಒಪ್ಪಿಸುವಲ್ಲಿ ತಮ್ಮ ಶ್ರಮ ವ್ಯರ್ಥಗೊಳಿಸುವದಕ್ಕಿಂತ ಅದನ್ನೇ ಕಾನೂನನ್ನು ಒಪ್ಪಿಸುವಲ್ಲಿ ಶ್ರಮಪಡುವುದು ಸಾರ್ಥಕ. ಇದಕ್ಕಾಗಿ ನಿಮ್ಮ ಬೆಂಬಲಿಗರಲ್ಲಿ ಪ್ರಭಾವೀ ವ್ಯಕ್ತಿಗಳ ಮತ್ತು ಕಾನೂನು ಪಂಡಿತರ ಸಲಹೆ ಪಡೆಯಬೇಕು.

ಈ ದೇಶದಲ್ಲಿ ನಮಗಿಷ್ಟವಾದ ಧರ್ಮ, ಬೇಕಾದರೆ ಅದು ಹೊಸದೇ ಇರಲಿ, ಆಚರಿಸಲು ಹಕ್ಕಿಲ್ಲವೇ ? ಲಿಂಗಾಯತ ಶಬ್ದವನ್ನು ವೀರಶೈವ ಸಂಘಟನೆಗೆ ಬಳಸಿರುವುದರಿಂದ ಗೊಂದಲ ತಪ್ಪಿಸಲು ನೀವು 'ಬಸವ ಧರ್ಮ'ವನ್ನೇ ಬಳಸಬಹುದಾಗಿದೆ. ಲಿಂಗಾಯತ ಧರ್ಮ ಇಬ್ಭಾಗವಾಗುತ್ತದೆ. ನಿಜ. ಆದರೆ ಅದನ್ನು ತಪ್ಪಿಸಲು ಸಾಧ್ಯವೇ ಇಲ್ಲದಾಗಿದೆ. ಈ ಇಬ್ಭಾಗ ತಪ್ಪಿಸಬೇಕಾದರೆ ಬಸವಣ್ಣನವರು ಧರ್ಮಸ್ಥಾಪಕರಲ್ಲ ಕೇವಲ ವೀರಶೈವ ಧರ್ಮ ಉದ್ಧಾರಕರು ಎಂದು ಒಪ್ಪಿ ಬಸವಣ್ಣನವರಿಗೆ ಅಪಚಾರ ಎಸಗಬೇಕಾಗುತ್ತದೆ. ಇದು ಬಸವಾಭಿಮಾನಿಗಳಿಗೆ ಎಂದೂ ಖುಷಿ ಕೊಡಲಾರದು.

ಹೀಗೆ ಒಮ್ಮೆ ಬಸವಾಭಿಮಾನಿಗಳಿಗೆ ಒಂದು ಕಾನೂನು ಒಪ್ಪಿದ ಸಂಘಟನೆ ಸಿಕ್ಕರೆ ಖಂಡಿತಾ ಅದು ಬೆಳೆಯುತ್ತಾ ಹೋಗುತ್ತದೆ. ಬಹಳವಾದರೆ ಪಂಚಪೀಠಗಳ ಕೆಲ ಅಂಧಾಭಿಮಾನಿಗಳು ಬೇರೆಯಾಗಬಹುದು ಮತ್ತೆ ತಾತ್ತ್ವಿಕ ತಳಹದಿಯ ಮೇಲೆ ಎಲ್ಲ ಧರ್ಮಗಳಲ್ಲೂ ಈ ರೀತಿಯ ಭಾಗಗಳಾಗುತ್ತಲೇ ಬಂದಿವೆ ಮತ್ತು ಅದನ್ನು ತಪ್ಪಿಸಲು ಸಾಧ್ಯವೂ ಇಲ್ಲ.

ಆದ್ದರಿಂದ ದಯವಿಟ್ಟು ಈ ದಿಶೆಯಲ್ಲಿ ಚಿಂತಿಸಿ, ಇಂತಹ ಏನಾದರೊಂದು ಕ್ರಾಂತಿಕಾರೀ

ಕಾರ್ಯ ಆಗಬೇಕಾದರೆ ಅದು ನಿಮ್ಮ ಕಾಲದಲ್ಲೇ ಆಗಬೇಕಾಗಿದೆ. ಆಗಲೇ ನಿಮ್ಮ ಅಪಾರವಾದ ಬಸವಾಭಿಮಾನ ಮತ್ತು ಬಸವಸೇವೆಗಳು ಸಾರ್ಥಕವಾಗುತ್ತವೆ. ಮುಖ್ಯವಾಗಿ ಆಗಬೇಕಾಗಿರುವುದು ಬಸವಣ್ಣನವರ ನಿಜ ತತ್ತ್ವಗಳನ್ನೆಲ್ಲ ಒಪ್ಪಿರುವವರ ಒಂದು ಕಾನೂನು ಬದ್ಧ ಧರ್ಮ ಸಂಘಟನೆ.

ತಮ್ಮ ಬಸವಾಭಿಮಾನಿ

ಶ್ರೀ ಶಿವನಗೌಡ ಚ.ಗೌಡರ ಸಪ್ತಾಪುರ, ಧಾರವಾಡ-580003

## ಮಹಾಮಾತೆ

1. ತಾಯಿಯಂತೆ ಇರುವವರು ಲಿಂಗಾಯತ ಧರ್ಮಕ್ಕೊಬ್ಬರು ನಾರಿ
ಇವರು ತೋರಿಸುವರು ನಮ್ಮ ಶರಣರಿಗೆಲ್ಲ ಉತ್ತಮ ದಾರಿ
ಇವರು ಮಾಡುವರು ಲೋಕದ ಅಭಿವೃದ್ಧಿ
ಇದರಿಂದಾಗುವುದು ಉತ್ತಮ (ಲಿಂಗಾಯತ) ಧರ್ಮದ ವೃದ್ಧಿ
ಆ ತಾಯಿಯೇ ಪೂಜ್ಯ ಮಾತಾಜಿ

2. ಬಸವಣ್ಣನವರಿಂದ ಸ್ಥಾಪಿತವಾಯಿತು ಲಿಂಗಾಯತ ಧರ್ಮ
ಇದರಿಂದ ಸಮಾಜದಲ್ಲಿ ಹೊಡೆದೋಡುವುವು ಕೆಟ್ಟ ಮರ್ಮ
ಲಿಂಗಾಯತ ಧರ್ಮ ಅಭಿವೃದ್ಧಿ ಪಡುತ್ತಿದೆ ಪೂಜ್ಯ ಮಾತಾಜಿಯವರಿಂದ
ಆ ಧರ್ಮದ ವೃದ್ಧಿಯ ಮೂಲ ನಮ್ಮ ಶರಣರಿಂದ

3. ಬಸವ ಪೀಠದ ಅಧ್ಯಕ್ಷೆ ಮಾತಾಜಿ ರಾಣಿಯೇ
ನೀ ತೋರು ನಮ್ಮ ಶರಣರಿಗೆಲ್ಲ ದಯೆ
ನೀ ಬಿತ್ತು ನಮ್ಮ ಆಸ್ತಿಯಾದ ಬಸವತತ್ತ್ವ
ನೀ ಸಾರು ಜಗಕೆ ಲಿಂಗಾಯತ ಧರ್ಮದ ಋಜುತ್ವ

-ಶರಣ. ಎಸ್.ಚನ್ನಕೇಶವ, ಭದ್ರಾವತಿ

## ವಚನ ಕಿರಣ

1. ಮಡಿ ಮಡಿ ಎಂಬಿರ್ರೈ
ಮುಟ್ಟು ಮೈಲಿಗೆ ಎಂಬಿರ್ರೈ
ಮುಟ್ಟಿನೊಳಗುಟ್ಟದೆ ನೀವೆತ್ತಲಿಂದ ಬಂದಿರ್ರೈ ?
ಮನ ಶುಚಿ ಉಳ್ಳಾತನೆ ಮಡಿವಂತ ಕಾಣಿರ್ರೈ
ನಮ್ಮ ನಿರಾಕಾರ ಲಿಂಗಯ್ಯನಲ್ಲಿ

2. ಬಸವಾ ಬಸವಾ ಎಂದು ಆನು ಆನಂದದಲ್ಲಿ ತೇಲಾಡುತ್ತಿದ್ದೆನಯ್ಯ
ಬಸವಾ ಬಸವಾ ಎಂದು ಆನು ಸಂತೋಷದಲ್ಲಿರಲು ದುಃಖವನ್ನೆ
ಮರೆತೆನಯ್ಯ ನೀವು ಕೊಟ್ಟಿರುವ ಇಷ್ಟಲಿಂಗದಲ್ಲಿ ಎನ್ನ ಭಕ್ತಿ ತುಂಬಿ
ಎನ್ನ ಮನ ನಿಶ್ಚಲಗೊಂಡಿತ್ತಾಗಿ
ಭಾವ ಆನಂದ ಸಾಗರದಂತೆ ಹರಿಯುತ್ತಿದ್ದಿತ್ತಯ್ಯ
ಸರ್ವಶಕ್ತ ನಿರಾಕಾರ ಲಿಂಗಯ್ಯ

-ಶರಣ. ಅಮರೇಗೌಡ ಪಾಟೀಲ್, ಕೊಪ್ಪಳ



# ಲಿಂಗಾಯತ ಧರ್ಮ ಮಹಾಸಭೆಯ
# ಐದನೆಯ ವಾರ್ಷಿಕೋತ್ಸವದ ನಿಮಿತ್ತ
# ಲಿಂಗಾಯತ ಧರ್ಮೀಯರ ಸಮಾವೇಶ

ಸ್ಥಳ : ಸರ್ ಪುಟ್ಟಣ್ಣ ಚೆಟ್ಟಿ ಪುರಭವನ, ಬೆಂಗಳೂರು

ಭಾನುವಾರ ದಿ. 12-11-2000, ಬೆಳಿಗ್ಗೆ 10-30



## ಶರಣರ ಬರವೆಮಗೆ ಪ್ರಾಣ ಜೀವಾಳ

ಸಂಪರ್ಕಿಸುವ ವಿಳಾಸ :

**ಲಿಂಗಾಯತ ಧರ್ಮ ಮಹಾಸಭಾ (ರಿ.)**

ಬಸವ ಮಂಟಪ, 2035, 20ನೇ ಮೇನ್

2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010

☎ : (080) 3325335/3322790

E-mail : viswakalyana@yahoo.com

# ಲಿಂಗಾಯತ ಧರ್ಮೀಯರ ಸಮಾವೇಶ

ಕರುಣಿ ಬಸವಾ, ಕಾಲಹರ ಬಸವಾ, ಕರ್ಮಹರ ಬಸವಾ
ನಿರ್ಮಳ ಬಸವಾ, ಶಿವಜ್ಞಾನಿ ಬಸವಾ
ನಿಮ್ಮ ಧರ್ಮವಯ್ಯಾ ಈ ಭಕ್ತಿ ಪಥವು
ಕರುಣಿ ಕಪಿಲಸಿದ್ಧ ಮಲ್ಲಿನಾಥಯ್ಯಾ
ನಿಮಗೂ ಎನಗೂ ಬಸವಣ್ಣನ ಧರ್ಮವಯ್ಯಾ.

*-ಶಿವಯೋಗಿ ಸಿದ್ಧರಾಮೇಶ್ವರ*

ಲಿಂಗಾಯತ ಧರ್ಮ ಮಹಾಸಭಾ (ರಿ.) ಟ್ರಸ್ಟ್ ಪ್ರಾರಂಭವಾಗಿ ಐದು ವರ್ಷಗಳು ಪೂರೈಸಿರುವ ನಿಮಿತ್ತ ಪ್ರಸ್ತುತ ಸಂಘಟನೆಯ 5ನೆಯ ವಾರ್ಷಿಕೋತ್ಸವವನ್ನು ಬೆಂಗಳೂರು ನಗರದ ಶ್ರೀ ಜಯಚಾಮ-ರಾಜೇಂದ್ರ ರಸ್ತೆಯಲ್ಲಿರುವ ಸರ್ ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ದಿ. 12-11-2000 ಭಾನುವಾರದಂದು ಬೆಳಿಗ್ಗೆ 10-30ಕ್ಕೆ ಏರ್ಪಡಿಸಲಾಗಿದೆ. ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ ಹಾಗೂ ತಮಿಳುನಾಡು ರಾಜ್ಯಗಳಿಂದ ಲಿಂಗಾಯತ ಸಮಾಜದ ಹಿತ ಚಿಂತಕರು ಆಗಮಿಸಲಿದ್ದು ಮುಂಬರುವ 2001ರ ಜನಗಣತಿಯ ಹಿನ್ನೆಲೆಯಲ್ಲಿ ಚಿಂತನಗೋಷ್ಠಿ ನಡೆಯಲಿದೆ. ಈ ಸಮಾವೇಶದ ದಿವ್ಯ ಸಾನ್ನಿಧ್ಯವನ್ನು ಕೂಡಲ ಸಂಗಮದ ಬಸವ ಧರ್ಮ ಪೀಠಾಧೀಶರಾದ, ಲಿಂಗಾಯತ ಧರ್ಮ ಮಹಾಸಭಾದ ಗೌರವಾಧ್ಯಕ್ಷರಾದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರು ವಹಿಸಲಿದ್ದಾರೆ.

ಅನೇಕ ಪೂಜನೀಯರು, ಗಣ್ಯರು, ಚಿಂತನಶೀಲರು ಈ ಸಮಾವೇಶದಲ್ಲಿ ಭಾಗಿಗಳಾಗಿ ಉಪನ್ಯಾಸ ಮಾಡಲಿದ್ದಾರೆ. ಅವರ ಹೆಸರುಗಳನ್ನು ಮುದ್ರಿಸಿ ತಮಗೆ ತಲುಪಿಸಲು ಸಮಯದ ಅಭಾವ ಇರುವುದರಿಂದ ಇದನ್ನೇ ಆಹ್ವಾನ ಪತ್ರವೆಂದು ಪರಿಗಣಿಸಿ ಹೆಚ್ಚಿನ ಸಂಖ್ಯೆಯಲ್ಲಿ ಶರಣ ಬಂಧುಗಳು ಭಾಗವಹಿಸಬೇಕೆಂದು ಕೋರುತ್ತೇವೆ. ಕಾರ್ಯಕ್ರಮದ ಯಶಸ್ಸಿಗೆ ಉದಾರವಾದ ದೇಣಿಗೆ ನೀಡಿ ಸಹಕರಿಸಬೇಕೆಂದು ವಿನಂತಿಸುತ್ತೇವೆ.

ಕಾರ್ಯಕ್ರಮದ ನಂತರ ಗಣಪ್ರಸಾದ (ಊಟ)ವು ಇರುತ್ತದೆ.

## ಶರಣರ ಬರವೆಮಗೆ ಪ್ರಾಣ ಜೀವಾಳ

ಶರಣ. ಹೆಚ್. ಎ .ಶರಣಪ್ಪ
ಗೌ.ಕಾರ್ಯದರ್ಶಿ,ಲಿಂಗಾಯತ ಧರ್ಮ ಮಹಾಸಭಾ

ಶರಣ. ಎನ್. ಪುಟ್ಟರುದ್ರ
ಕಾರ್ಯಾಧ್ಯಕ್ಷ, ಲಿಂಗಾಯತ ಧರ್ಮ ಮಹಾಸಭಾ

## ಲಿಂಗಾಯತ ಧರ್ಮ ಮಹಾಸಭಾ (ರಿ.)

(ಪಬ್ಲಿಕ್ ರಿಲಿಜಿಯಸ್ ಚಾರಿಟಬಲ್ ಟ್ರಸ್ಟ್)

### ಪರಿಚಯ

ಧರ್ಮಪಿತ ಶ್ರೀ ಗುರು ಬಸವಣ್ಣನವರ ದಿವ್ಯ ಪ್ರೇರಣೆಯಂತೆ ಅವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮದಲ್ಲಿ ಬಸವ ಧರ್ಮ ಸಂಸ್ಥಾಪನಾ ದಿನ 14-1-1995 ರಂದು ಬಸವ ಧರ್ಮದ ಮಹಾಜಗದ್ಗುರು ಪೀಠಾಧೀಶ ಪೂಜ್ಯ ಶ್ರೀಮನ್ ನಿರಂಜನ ಮಹಾ ಜಗದ್ಗುರು ಲಿಂಗಾನಂದ ಮಹಾಸ್ವಾಮೀಜಿಯವರ ಆದೇಶದಂತೆ ಮತ್ತು ಬಸವ ಧರ್ಮಪೀಠದ ಕಾರ್ಯಾಧ್ಯಕ್ಷೆ ಪೂಜ್ಯ



ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಸತ್ಸಂಕಲ್ಪ ಮತ್ತು ಮಾರ್ಗದರ್ಶನದೊಡನೆ ಲಿಂಗಾಯತ ಧರ್ಮ ಮಹಾಸಭಾ ಎಂಬ ಸಂಸ್ಥೆಯನ್ನು ವಿಧ್ಯುಕ್ತವಾಗಿ ಘೋಷಿಸಿ ದಿ. 20-6-1995ರಂದು ಇಂಡಿಯನ್ ಟ್ರಸ್ಟ್ ಆಕ್ಟ್ ಪ್ರಕಾರ ನೋಂದಾವಣೆ ಮಾಡಲಾಯಿತು. ನೋಂದಣಿ ಸಂಖ್ಯೆ 217/ 95-96. ಇದರ ಮುಖ್ಯ ಕಾರ್ಯಾಲಯವು ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿರುವುದು.

### ಧ್ಯೇಯೋದ್ದೇಶಗಳು

ಲಿಂಗಾಯತ ಧರ್ಮ ಮಹಾಸಭಾ ಕೆಳಕಂಡ ಧ್ಯೇಯೋದ್ದೇಶಗಳಿಗಾಗಿ ದುಡಿಯಲು ಕಂಕಣಬದ್ಧವಾಗಿದೆ.

1. 12ನೇ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರಿಂದ ಸಂಸ್ಥಾಪಿಸಲ್ಪಟ್ಟ ಲಿಂಗಾಯತ ಧರ್ಮವು ಒಂದು ಸ್ವತಂತ್ರ ಧರ್ಮವೆಂದೂ, ಇದಕ್ಕೆ ಕನ್ನಡದಲ್ಲಿರುವ ವಚನ ಸಾಹಿತ್ಯವು ಧಾರ್ಮಿಕ ಸಂವಿಧಾನವೆಂದೂ ರಾಜ್ಯ ಸರಕಾರ ಮತ್ತು ಕೇಂದ್ರ ಸರಕಾರಕ್ಕೆ ಮನವರಿಕೆ ಮಾಡಿಕೊಡುವುದು.
2. ಬೌದ್ಧ, ಜೈನ ಮತ್ತು ಸಿಖ್ ಧರ್ಮಗಳಂತೆ ಲಿಂಗಾಯತ ಧರ್ಮವೂ ಸಹ ಒಂದು ಸ್ವತಂತ್ರ ಧರ್ಮವೆಂದು, ಭಾರತದಲ್ಲಿ ಸಂವಿಧಾನಾತ್ಮಕ ಮಾನ್ಯತೆ ಪಡೆಯುವುದು.
3. ಲಿಂಗಾಯತ ಧರ್ಮಕ್ಕೆ ಭಾರತ ಮತ್ತು ಹೊರದೇಶಗಳಲ್ಲಿನ ಜನಗಣತಿಯ ದಾಖಲಾತಿಯಲ್ಲಿ ಇತರೇ ಸ್ವತಂತ್ರ ಧರ್ಮಗಳಿಗಿರುವಂತೆ ಪ್ರತ್ಯೇಕ ಸ್ಥಾನವನ್ನು ದೊರಕಿಸುವುದು. ಲಿಂಗಾಯತ ಧರ್ಮವು ವಿಶ್ವಧರ್ಮಗಳಲ್ಲೊಂದು ಎಂದು ಗುರುತಿಸುವಂತೆ ಮಾಡುವುದು.
4. ಭಾರತ ದೇಶದಲ್ಲಿ ಹುಟ್ಟಿದ್ದರೂ ಸ್ವತಂತ್ರ ಧರ್ಮದ ಸ್ಥಾನಮಾನ ಪಡೆದು ಧಾರ್ಮಿಕ ಅಲ್ಪ ಸಂಖ್ಯಾತರೆಂದು ಗುರುತಿಸಲ್ಪಟ್ಟು ಅನೇಕ ರೀತಿಯ ಸವಲತ್ತುಗಳನ್ನು ಬೌದ್ಧ, ಜೈನ್, ಸಿಖ್ ಧರ್ಮದವರು ಪಡೆದಿರುವಂತೆ ಲಿಂಗಾಯತರು ಸಹ ಧಾರ್ಮಿಕ ಅಲ್ಪಸಂಖ್ಯಾತರೆಂದು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನೇಕ ಸೌಲಭ್ಯಗಳನ್ನು ಪಡೆಯಲು ವ್ಯವಸ್ಥಿತವಾದ ಪ್ರಯತ್ನ ಮಾಡುವುದು.
5. ಲಿಂಗಾಯತ ಧರ್ಮೀಯರಲ್ಲಿ ಸಂಘಟನಾ ಶಕ್ತಿಯನ್ನು ಬೆಳೆಸುವುದು ಹಾಗೂ ಅವರಲ್ಲಿರಬಹುದಾದ ಜಾತೀಯತೆ, ಮೂಢನಂಬಿಕೆ, ಅಂಧಶ್ರದ್ಧೆ , ರೋಗಗ್ರಸ್ತ ಸಂಪ್ರದಾಯಗಳನ್ನು ದೂರ ಮಾಡುವುದು.
6. ಧರ್ಮಪಿತ ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರು ಬೋಧಿಸಿದ ಧಾರ್ಮಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಕ್ರೋಢೀಕರಿಸುವುದು, ರಕ್ಷಿಸುವುದು, ಅಭಿವೃದ್ಧಿ ಪಡಿಸುವುದು ಮತ್ತು ಪ್ರಚಾರ ಮಾಡುವುದು. ದುರುದ್ದೇಶದಿಂದ ಕೆಲವರು ವಿಕೃತಗೊಳಿಸಿರುವ ವಚನ ಸಾಹಿತ್ಯವನ್ನು ಶರಣರ ಸೈದ್ಧಾಂತಿಕ ಚೌಕಟ್ಟಿನಲ್ಲಿ ಶುದ್ಧೀಕರಿಸುವುದು.
7. ಭಾರತ ಮತ್ತು ಹೊರದೇಶಗಳಲ್ಲಿನ ಲಿಂಗಾಯತರೊಂದಿಗೆ ಸಂಪರ್ಕವನ್ನು ವೃದ್ಧಿಪಡಿಸಿಕೊಂಡು ಸಾಧ್ಯವಾದ ನೆರವನ್ನು ಅರ್ಹರಿಗೆ ನೀಡುವುದು.
8. ವಿಶ್ವಗುರು ಬಸವಣ್ಣನವರು ಹಾಗೂ ಅವರ ಸಮಕಾಲೀನ ಶರಣರಿಂದ ಲಭ್ಯವಾಗಿರುವ ವಚನ ಸಾಹಿತ್ಯವನ್ನು ಪುಸ್ತಕ, ಪ್ರವಚನ, ಕ್ಯಾಸೆಟ್, ವೃತ್ತ ಪತ್ರಿಕೆ, ಸ್ಮರಣ ಸಂಚಿಕೆಗಳ ಮೂಲಕ ಪ್ರಚಾರ ಮಾಡುವುದು.
9. ಮಹಾಸಭೆಯ ಧ್ಯೇಯೋದ್ದೇಶಗಳನ್ನು ಕ್ರಿಯಾರೂಪಕ್ಕೆ ತರಲು ಲಿಂಗಾಯತ ಧರ್ಮ ಮಹಾಸಭಾದ ಶಾಖೆಗಳನ್ನು ಎಲ್ಲ ರಾಜ್ಯಗಳಲ್ಲಿ, ಕರ್ನಾಟಕದ ಇತರೆ ಜಿಲ್ಲೆಗಳಲ್ಲಿ, ತಾಲ್ಲೋಕು, ಗ್ರಾಮಗಳಲ್ಲಿ ತೆರೆಯುವುದು. ಹೆಚ್ಚು ಜನರನ್ನು ಸದಸ್ಯರನ್ನಾಗಿ ಮಾಡಿಕೊಳ್ಳುವುದು ಇತ್ಯಾದಿ. ★

# ಶರಣ ವ್ರತ ಸ್ವೀಕಾರ

-ಮಾತಾಜಿ

ಸಿಖ್ ಧರ್ಮದ ಖಾಲ್ಸಾ, ಇಸ್ಲಾಂ ಧರ್ಮದ ಹಜ್‌ದಿಂದ ಪ್ರೇರಿತರಾಗಿ, ಪಂಢರಾಪುರದ ವಾರಕರಿಯ ದಿಂಡಿ ಉತ್ಸವ, ಶಬರಿ ಮಲೈದ ಅಯ್ಯಪ್ಪಸ್ವಾಮಿ ಭಕ್ತಿಪಂಥದ ಆಚರಣೆಗಳಿಂದ ಸ್ಫೂರ್ತಿ ಪಡೆದು ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಧರ್ಮಕ್ಷೇತ್ರವೆಂದು ಗುರುತಿಸಿಕೊಂಡು 1988ರಲ್ಲಿ ಮೊಟ್ಟ ಮೊದಲ ಶರಣ ಮೇಳವನ್ನು ನಡೆಸಲಾಯಿತು. ಇದು ವಿಶ್ವಗುರು ಬಸವಣ್ಣನವರೇ ಆದಿಯಾಗಿ ಶರಣ ಪುಂಗವರೆಲ್ಲರ ಅಪೇಕ್ಷೆ ಮತ್ತು ಸಂಕಲ್ಪ ಎಂಬುದು ನಮಗೆಲ್ಲ ಮನದಟ್ಟಾಗಿದೆ. ಧರ್ಮಪಿತ ಬಸವಣ್ಣನವರು ಅವರ ಕಾಲದಲ್ಲಿಯೇ ಆಗಾಗ ಗಣಪರ್ವಗಳನ್ನು ನಡೆಸಿ ಶರಣರನ್ನು ಒಂದೆಡೆಯಲ್ಲಿ ಸಮಾವೇಶಗೊಳಿಸುತ್ತಿದ್ದರು. ಇದಕ್ಕೆ ಅಂಗ, ವಂಗ, ಕಳಿಂಗ, ಗುರ್ಜರ ದೇಶಗಳಿಂದೆಲ್ಲ ಭಕ್ತರು ಬರುತ್ತಿದ್ದರು ಎಂಬುದನ್ನು ಹರಿಹರ ಮಹಾಕವಿ, ಸಿಂಗಿರಾಜ ಮುಂತಾದವರು ಬಣ್ಣಿಸಿದ್ದಾರೆ.

ಮಡಿವಾಳ ಮಾಚಿದೇವರು ಕಾಲಜ್ಞಾನ ವಚನದಲ್ಲಿ ಹೀಗೆ ಹೇಳುತ್ತಾರೆ.

೧. ದಕ್ಷಿಣದ ಕೃಷ್ಣೆಗೆ ಕರೆವರೈಯ್ಯ ಜನ ನೆರೆವರಯ್ಯ

೨. ಉತ್ತರ ದಕ್ಷಿಣ ಪೂರ್ವ ಪಶ್ಚಿಮ ಹರನಾಜ್ಞೆಯಿಂದ ಬಂತು
ಜರಿಯಲು ಬೇಡ, ಅರಿದು ನೋಡುವುದು
ಅಮೃತ ರಸಾಯನವೆಂದು ಶರಣ ಸಂತತಿಗಳು ತಿಳಿವರು

೩. ಪರಿಧಾವಿಯೆಂಬ ಕಟ್ಟಳೆಗೆ ಉಳಿದವರು ಬರುವರು
ಒಬ್ಬರುಳಿಯದ ಹಾಗೆ ನೆರೆದು ಕೂಡುವರು.

ಪರಿಧಾವಿ ಸಂವತ್ಸರವು ಕ್ರಿ.ಶ. 2032ಕ್ಕೆ ಬರುವುದು. ಈಗ ನಾವು ಎಷ್ಟೇ ಕಳಕಳಿಯಿಂದ ನಿಷ್ಕಲ್ಮಶ ಮನಸ್ಸಿನಿಂದ ಕರೆದರೂ ಲಿಂಗಾಯತರು ಎಲ್ಲರೂ ಒಟ್ಟಾಗಿ ಸೇರದೆ, ಶರಣ ಮೇಳಕ್ಕೆ ಬರದೆ ಗುಂಪುಗುಂಪಾಗಿ ಇರುವರು. ಆದರೆ ಆದಿ ಶರಣರ ಸಂಕಲ್ಪ, ನಮ್ಮ ಆಶಯ ಖಂಡಿತ ವ್ಯರ್ಥವಾಗದು. ಈ ಎಲ್ಲ ಭೇದಗಳು ಅಳಿದು ಕ್ರಿ.ಶ. 2032ರ ಸುಮಾರಿಗೆ (ನಾವು ಅಷ್ಟು ಕಾಲ ಬದುಕಿರದೆ ಇದ್ದರೂ) ಎಲ್ಲ ಬಸವ ಭಕ್ತರು, ಲಿಂಗಾಯತರು ಶರಣ ಮೇಳಕ್ಕೆ, ಧರ್ಮಕ್ಷೇತ್ರ ಕೂಡಲ ಸಂಗಮಕ್ಕೆ ಬರಲು ಆರಂಭಿಸುವರು. ಇದು ಮಾಚಿದೇವರ ವಾಣಿ.

ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ಜನವರಿ 11ರಿಂದ ೧೫ರವರೆಗೆ ಶರಣ ಮೇಳವು 1988 ರಿಂದಲೂ ನಡೆಯುತ್ತ ಬರುತ್ತಿದ್ದು 2001 ಇಸವಿಗೆ 14ನೆಯ ಶರಣ ಮೇಳ ಒದಗಿ ಬಂದಿದೆ. ಕೇವಲ ಯಾಂತ್ರಿಕವಾಗಿ ಬಂದು ಹೋಗುವ ಪರಿಪಾಠಕ್ಕಿಂತಲೂ **'ಶರಣ ವ್ರತ'**ವನ್ನು ಸ್ವೀಕಾರ ಮಾಡಿ ಬರುವ ಪರಿಪಾಠವು ಅತ್ಯುತ್ತಮ. ಈಗಾಗಲೇ 3-4 ವರ್ಷಗಳಿಂದ ಕೆಲವರು ಶರಣ ವ್ರತಧಾರಿಗಳಾಗಿ ಬರುತ್ತಲಿದ್ದಾರೆ. ಈಗ ನಾವು ಇದಕ್ಕೆ ನಿರ್ದಿಷ್ಟ ರೂಪ ಕೊಡಬೇಕಲ್ಲದೆ, ಹೆಚ್ಚಿನ ಸಂಖ್ಯೆಯಲ್ಲಿ ಶರಣ ವ್ರತಿಗಳು ವ್ರತ ಸ್ವೀಕಾರ ಮಾಡುವುದಕ್ಕೆ ಒತ್ತು ಕೊಡಬೇಕು. ಇದಕ್ಕಾಗಿ ಕೆಲವು ನಿಯಮಾವಳಿ ಸೂಚಿಸಲಾಗಿದೆ.

ಜನವರಿ 14ರಂದು ಬೆಳಿಗ್ಗೆ ಗಣಲಿಂಗ ದರ್ಶನ ಪಡೆಯುವುದು, 11ರಿಂದ 2ರವರೆಗೆ ನಡೆಯುವ ಸಮುದಾಯ ಪ್ರಾರ್ಥನೆಯಲ್ಲಿ ಭಾಗವಹಿಸುವುದು, ಸಂಜೆ ನಡೆಯುವ ಸಾಮೂಹಿಕ ಇಷ್ಟಲಿಂಗಾರ್ಚನೆಯಲ್ಲಿ ಪಾಲ್ಗೊಳ್ಳುವ ಕ್ರಿಯೆಯಿಂದ ಆ ವರ್ಷದ ವ್ರತ ಪೂರ್ತಿಯಾಗುತ್ತದೆ. ಈ ದಿನಾಂಕಕ್ಕೆ ಪೂರ್ವಭಾವಿಯಾಗಿ 10,20,30,40 ದಿವಸಗಳ ವ್ರತವನ್ನು ·ರಣ ಬಂಧುಗಳು ಕೈಗೊಳ್ಳಬೇಕು.





**೧. ಗುರು ಸಾರಾಯ ಸಂಪದ್ ವ್ರತ :** 40 ದಿವಸಗಳ ವ್ರತ ; ಡಿಸೆಂಬರ್ 6ರಂದು ಪ್ರಾರಂಭ

**೨. ಲಿಂಗ ಸಾರಾಯ ಸಂಪದ್ ವ್ರತ :** 30 ದಿವಸಗಳ ವ್ರತ ; ಡಿಸೆಂಬರ್ 16ರಂದು ಪ್ರಾರಂಭ

**೩. ಜಂಗಮ ಸಾರಾಯ ಸಂಪದ್ ವ್ರತ :** 20 ದಿವಸಗಳ ವ್ರತ ; ಡಿಸೆಂಬರ್ 26ರಂದು ಪ್ರಾರಂಭ.

**೪. ಪ್ರಸಾದ ಸಾರಾಯ ಸಂಪದ್ ವ್ರತ :** 10 ದಿವಸಗಳ ವ್ರತ ; ಜನವರಿ 5ರಂದು ಪ್ರಾರಂಭ.

ಈ ನಾಲ್ಕು ಅವಧಿಯ ವ್ರತಗಳಲ್ಲಿ ಯಾವುದನ್ನೇ ಆಯ್ದುಕೊಂಡರೂ ಶರಣ-ಶರಣೆಯರು, ಮಕ್ಕಳು-ಮುದುಕರು ಯಾರೇ ಇರಲಿ ಮುಂದೆ ತಿಳಿಸುವ ನೇಮಗಳನ್ನು ನಡೆಸಬೇಕು.

೧. ಬಿಳಿಯ ವಸ್ತ್ರಗಳನ್ನು ಧರಿಸಬೇಕು. ವ್ರತದ ಅವಧಿಯಲ್ಲಿ ಶರಣರಿರಲಿ, ಶರಣೆಯರೇ ಇರಲಿ ಬಿಳಿಯ ವಸ್ತ್ರಗಳನ್ನು ಧರಿಸಿರಬೇಕು, ಕಾಲಲ್ಲಿ ಚಪ್ಪಲಿ ಧರಿಸುವುದನ್ನು ತೊರೆಯಬೇಕಾಗಿಲ್ಲ. ಚಪ್ಪಲಿ ತೊಡುವುದರಿಂದ ಕಾಲಿಗೆ ರಕ್ಷೆ ಇರುತ್ತದೆ. ಚಪ್ಪಲಿ ಮೈಲಿಗೆ ಎಂಬ ತಪ್ಪು ತಿಳುವಳಿಕೆಯಿಂದ ಯಾರೋ ಬೇರೆ ವ್ರತಗಳವರನ್ನು ನೋಡಿ ಚಪ್ಪಲಿ ತೊಡುವುದನ್ನು ಬಿಡಬೇಕಾಗಿಲ್ಲ.

೨. ಪೂಜೆ-ಪಠಣ ಮಾಡುವಾಗ ಬಿಳಿಯ ವಸ್ತ್ರದ ಮೇಲೆ ಕಾವಿಯ ಸ್ಕಾರ್ಫನ್ನು ಕಡ್ಡಾಯವಾಗಿ ಧರಿಸಬೇಕು.

೩. ಶರಣರು ತಲೆಯ ಮೇಲೆ ಷಟ್ಕೋನದ ಟೋಪಿ ಧರಿಸಿರಬೇಕು.

೪. ಬೆಳಿಗ್ಗೆ-ಸಂಜೆ ಎರಡೂ ಹೊತ್ತು ಸ್ನಾನ ಮಾಡಬೇಕು. ಲಿಂಗಾಯತರು, ಇಷ್ಟಲಿಂಗಾರ್ಚನೆ, ಗುರು ಬಸವಾರ್ಚನೆ ಮಾಡಬೇಕು. ಲಿಂಗಾಯತೇತರರ ಬಸವ ಭಕ್ತರು ಗುರು ಬಸವಾರ್ಚನೆ ಮಾಡಬೇಕು.

೫. ಎರಡೂ ಹೊತ್ತು ವಚನ ಪಠಣ ಮಾಡಬೇಕು. ಬೆಳಿಗ್ಗೆ 108 ವಚನ ಸಂಜೆ 108 ವಚನ ಪಠಿಸಬೇಕು. ಓದಲು ಬರದ ಅವಿದ್ಯಾವಂತರು 'ಓಂ ಶ್ರೀ ಗುರು ಬಸವಲಿಂಗಾಯ ನಮಃ' ಮಂತ್ರವನ್ನು ೧೦೮ರಂತೆ ಎರಡೂ ಹೊತ್ತು ಪಠಿಸಬಹುದು.

೬. ಸಂಜೆಯ ವೇಳೆಯಲ್ಲಿ ಶರಣ ವ್ರತಿಗಳೆಲ್ಲರು ಒಂದು ಸ್ಥಳದಲ್ಲಿ ಸಾಮೂಹಿಕವಾಗಿ ಸೇರಿ ನೆನಹು-ಸಂಕ್ಷಿಪ್ತ ಪ್ರಾರ್ಥನೆ ಮಾಡಿ, ವಚನ ಪಠಣ ಮಾಡಿ, ವಚನ ಲೇಖನವನ್ನು ಮಾಡಬೇಕು. ಪ್ರಾರ್ಥನೆ-ವಚನ ಪಠಣದ ನಂತರ, ಮೌನವಾಗಿ ವಚನ ಲೇಖನವನ್ನು ಕೈಗೊಳ್ಳಬೇಕು. ಬರೆಯಲು ಬರದವರು ಕನಿಷ್ಠ ''ಓಂ ಶ್ರೀ ಗುರು ಬಸವಲಿಂಗಾಯ ನಮಃ'' ಬರೆಯಲು ಕಲಿತು, ಅದೇ ಮಂತ್ರವನ್ನು ಬರೆಯಬೇಕು. ವಚನ ಲೇಖನ ಗ್ರಂಥವನ್ನು ಬರುವಾಗ ತಮ್ಮ ಜೊತೆಗೆ ತಂದು, ಪುನಃ ಮನೆಗೆ ಹೋಗುವಾಗ ಒಯ್ದು, ಮನೆಯಲ್ಲೂ ಬರಹ ಮುಂದುವರಿಸಬಹುದು.

೭. ವ್ರತ ಕಾಲದಲ್ಲಿ ಕಾಯಕವನ್ನು ಬಿಡಬೇಕಾಗಿಲ್ಲ. ಇನ್ನೂ ನಿಷ್ಠೆಯಿಂದ ಮಾಡಬೇಕು.

೮. ಲಿಂಗಾಯತರು ಭಸ್ಮ, ರುದ್ರಾಕ್ಷಿ, ಇಷ್ಟಲಿಂಗಗಳನ್ನು ಸದಾ ಧರಿಸಿರಬೇಕು, ಲಿಂಗಾಯತೇತರ ವ್ರತಧಾರಿಗಳು ಭಸ್ಮ-ರುದ್ರಾಕ್ಷಿಗಳನ್ನು ತಪ್ಪದೇ ಧರಿಸಿರಬೇಕು.

೯. ಸ್ತ್ರೀಯರು ಮುಟ್ಟು-ಮೈಲಿಗೆ ಮುಂತಾದ ಭ್ರಾಂತಿಗೆ ಒಳಗಾಗಬಾರದು.

೧೦. ವ್ರತದ ಅವಧಿಯಲ್ಲಿ ಧೂಮ್ರಪಾನ, ತಂಬಾಕು ಸೇವನೆ, ಮಾಂಸಾಹಾರ, ದಾಂಪತ್ಯ ಸುಖ ಪೂರ್ಣವಾಗಿ ವರ್ಜಿಸಬೇಕು, ಮದ್ಯಪಾನ ವ್ಯಸನಿಗಳು ಮತ್ತು ಮಾಂಸಾಹಾರಿಗಳು ವ್ರತದ ಅವಧಿಯ ನಂತರವೂ ಇವನ್ನು ಬಿಟ್ಟು ಶುದ್ಧಿಯನ್ನು ಕಾಯ್ದುಕೊಂಡರೆ ಉತ್ತಮ.

೧೧. ವ್ರತದ ಅವಧಿಯಲ್ಲಿ ಲಿಂಗಾಯತರು ಪ್ರತಿ ದಿವಸವೂ ಎರಡೂ ಹೊತ್ತು ಇಷ್ಟಲಿಂಗ ಪೂಜೆ ಮಾಡಿ, ನಂತರ ಗುರು ಬಸವಣ್ಣನವರ 108 ಸ್ತುತಿಗಳನ್ನು ಹೇಳಿ ಪೂಜಿಸಿ, ತದ ನಂತರ ವಚನ ಪಠಣ ಮತ್ತು ವಚನ ಲೇಖನ ವಿಧಿಯನು ಪೂರ್ಣಗೊಳಿಸಬೇಕು. ವ್ರತದ ಅವಧಿಯಲ್ಲಿ ಎಷ್ಟು

ಸೋಮವಾರ ಬರುತ್ತವೋ ಅಷ್ಟು ಸೋಮವಾರ ಅಥವಾ ಕಾಯಕ ಜೀವಿಗಳು ಸೋಮವಾರ ರಜೆ ಇಲ್ಲದಿರುವುದರಿಂದ ಭಾನುವಾರದಂದು ಬಸವೇಶ್ವರ ಪೂಜಾವ್ರತವನ್ನು ಪೂರ್ಣ ರೂಪದಲ್ಲಿ ಮಾಡಬೇಕು. ಲಿಂಗಾಯತೇತರರು ಇಷ್ಟಲಿಂಗ ದೀಕ್ಷೆ ಪಡೆದಿರದಿದ್ದರೆ, ಆಗ ದಿನನಿತ್ಯ ಗುರುಬಸವಾರ್ಚನೆ ಮಾಡಿ 108 ಬಸವ ಮಂತ್ರ ಪಠಣ ಮಾಡಬೇಕು. ವಾರಕ್ಕೊಮ್ಮೆ ಪೂರ್ತಿ ಪೂಜಾವ್ರತ ಮಾಡಬೇಕು. ವಚನ ಪಠಣ ಮತ್ತು ವಚನ ಲೇಖನಗಳನ್ನು ಕಡ್ಡಾಯವಾಗಿ ಮಾಡಬೇಕು.

೧೨. ರಾಷ್ಟ್ರೀಯ ಬಸವ ದಳಗಳು ಇದ್ದಲ್ಲಿ ಹೆಚ್ಚು ಹೆಚ್ಚು ಜನರನ್ನು ಅವರ ಸಮಯಾವಕಾಶಕ್ಕೆ ತಕ್ಕಂತೆ 10, 20, 30, 40 ದಿವಸಗಳ ಶರಣ ವ್ರತಿಗಳಾಗಲು ಪ್ರೇರೇಪಿಸಬೇಕು. ಕೂಡಲ ಸಂಗಮಕ್ಕೆ ಶರಣ ಮೇಳಕ್ಕೆ ಕರೆ ತರಬೇಕು. ಅಲ್ಲಿ ಅವರವರ ರಾಷ್ಟ್ರೀಯ ಬಸವ ದಳಗಳಿಂದ ಶರಣ ವ್ರತಧಾರಿಗಳ ಪಟ್ಟಿಯನ್ನು ಸಲ್ಲಿಸಬೇಕು. ಅತಿ ಹೆಚ್ಚಿನ ಶರಣ ವ್ರತಿಗಳನ್ನು ಕರೆತಂದ ರಾಷ್ಟ್ರೀಯ ಬಸವ ದಳಗಳಿಗೆ ಕ್ರಮವಾಗಿ ೩ ಬಹುಮಾನಗಳನ್ನು ಕೊಡಲಾಗುವುದು. ರಾಷ್ಟ್ರೀಯ ಬಸವ ದಳ ಇಲ್ಲದಿರುವಲ್ಲಿ ವೈಯಕ್ತಿಕವಾಗಿಯೇ ಶರಣ ಬಂಧುಗಳು ವ್ರತವನ್ನು ಧಾರಣೆ ಮಾಡಬಹುದು.

ಅದೇ ರೀತಿ, ಶರಣ ವ್ರತ ಸ್ವೀಕಾರ ಮಾಡದೆಯೂ ಕೇವಲ ವಚನ ಲೇಖನ ಮಾತ್ರ ಮಾಡುವವರನ್ನು ಪ್ರೇರೇಪಿಸಿ, ವಚನಗಳನ್ನು, ಬರೆಸಿ, ತಂದು ಸಮರ್ಪಿಸುವ ರಾಷ್ಟ್ರೀಯ ಬಸವ ದಳ ಅಥವಾ ಇನ್ನಿತರ ಧಾರ್ಮಿಕ ಸಂಸ್ಥೆಗಳಿಗೂ ಬಹುಮಾನ ಉಂಟು.

೧೩. ರಾಷ್ಟ್ರೀಯ ಬಸವ ದಳಗಳಲ್ಲಿ ಕ್ರಿಯಾ ಮೂರ್ತಿಗಳಿದ್ದರೆ ಅವರಿಂದ ಶರಣ ವ್ರತ ದೀಕ್ಷೆ ಪಡೆಯಬಹುದು. ಸಾಮಾನ್ಯವಾಗಿ ಮೊದಲೇ ಶರಣ ಬಂಧುಗಳು ಇಷ್ಟಲಿಂಗ, ರುದ್ರಾಕ್ಷಿ ಮಾಲೆ ಮುಂತಾಗಿ ಧರಿಸಿರುತ್ತಾರೆ. ಅಕಸ್ಮಾತ್ ರುದ್ರಾಕ್ಷಿ ಮಾಲೆಯನ್ನು ಮೊದಲೇ ಧರಿಸಿರದಿದ್ದರೆ ಶರಣ ವ್ರತದ ಕಾಲದಲ್ಲಿ ತಪ್ಪದೆ ಧರಿಸಬೇಕು. ರುದ್ರಾಕ್ಷಿ ಮಾಲೆ ಸಿಕ್ಕದೆ ಇದ್ದರೆ, ಅಥವಾ ಅದು ಬಹಳ ತುಟ್ಟಿ ಇರುವ ಕಾರಣ ಕಡೆಗೆ ಭದ್ರಾಕ್ಷಿ ಕಾಳಿನ ಸರವನ್ನಾದರೂ ಧರಿಸಬೇಕು.

ನಿಜವಾಗಿಯೂ ಹೇಳುವುದಾದರೆ ಬಸವ ಧರ್ಮದ ಪ್ರಕಾರ ಅವಧಿಯ ವ್ರತಗಳು ಇರದೆ, ಜೀವನವೇ ಒಂದು ವ್ರತವಾಗಬೇಕು. ಹತ್ತು ದಿನವೋ ಒಂದು ತಿಂಗಳೋ ವ್ರತ ಮಾಡಿ (ಅಯ್ಯಪ್ಪ ಸ್ವಾಮಿ ವ್ರತದಂತೆ) ಕಟ್ಟುನಿಟ್ಟಾದ ಆಚರಣೆ ನಡೆಸಿ, ಪುನಃ ಮೊದಲಿನಂತೆ ಇರುವುದು ನಿಜಕ್ಕೂ ಅರ್ಥರಹಿತ. ಶರಣನ ನಿತ್ಯ ನೇಮಗಳು ಸಹಜವಾಗಿದ್ದು ವರ್ಷ ಪೂರ್ತಿ, ಜೀವಮಾನಪೂರ್ತಿ ಒಂದೇ ರೀತಿ ಇರಬೇಕು. ಆದರೆ ಲಿಂಗಾಯತರು ಧರ್ಮಾಚರಣೆಗೆ ಹೆಚ್ಚಿನ ಸಂಖ್ಯೆಯಲ್ಲಿ ವಿಮುಖರಾಗುತ್ತ ಇಷ್ಟಲಿಂಗಧಾರಣೆ, ವಚನ ಸಾಹಿತ್ಯ ಅಧ್ಯಯನ ಮುಂತಾದುವನ್ನು ತೊರೆಯುತ್ತಲಿರುವುದರಿಂದಲೂ ಮತ್ತು ಅನ್ಯ ದೈವಗಳ ಪೂಜೆ-ವ್ರತಗಳತ್ತ ಒಂದು ಫ್ಯಾಶನ್ ಎಂಬಂತೆ ಆಕರ್ಷಿತರಾಗುತ್ತಿರುವುದರಿಂದಲೂ ಅವರಲ್ಲಿ ವಿಶೇಷ ಆಸಕ್ತಿ ಮೂಡಿಸಲೋಸುಗ ವಿಶಿಷ್ಟ ಅವಧಿಯ ವ್ರತಗಳನ್ನು ನಿರ್ದೇಶಿಸಲಾಗುತ್ತಿದೆ. ಈ ನಿಮಿತ್ತವಾಗಿಯಾದರೂ ಅವರು ಮತ್ತು ಇನ್ನಿತರರು ವಚನ ಸಾಹಿತ್ಯದ ಅಧ್ಯಯನಕ್ಕೆ ತೊಡಗಿದರೆ ಮುಂದೆ ಧರ್ಮಪ್ರಜ್ಞೆಯು ಸ್ಥಾಯಿಯಾಗುತ್ತಾ ಹೋಗುವುದು.

### ಶರಣ ಮೇಳದಲ್ಲಿ ಶರಣ ವ್ರತಿಗಳಿಗೆ ವಿಶೇಷ ಸಂದರ್ಶನಾವಕಾಶ

ವಿಶೇಷವಾದ ದರ್ಶನಾವಕಾಶವನ್ನು ಏರ್ಪಡಿಸಿ, ಶರಣ ವ್ರತಿಗಳು ಬಸವ ಧರ್ಮದ ಮಹಾಜಗದ್ಗುರು ಪೀಠಾಧ್ಯಕ್ಷರನ್ನು ಸಂದರ್ಶಿಸಿ, ಶರಣ ವ್ರತಧಾರಣೆಗಾಗಿ ವಿಶೇಷ ಪ್ರಮಾಣ ಪತ್ರವನ್ನು ಪಡೆಯಲು ಅವಕಾಶ ಕಲ್ಪಿಸುವ ಯೋಜನೆಯನ್ನು ಸಿದ್ಧಪಡಿಸಲಾಗಿದೆ. ಪ್ರತಿ ವರ್ಷದ ಜನವರಿಯ





೧೫ನೆಯ ದಿನಾಂಕದಂದು ಈ ಗುರುದರ್ಶನ ಕಾರ್ಯಕ್ರಮವಿರುತ್ತಿದ್ದು ಶರಣ ವ್ರತಿಗಳು ಪೀಠಾಧ್ಯಕ್ಷರಿಂದ ಆಶೀರ್ವಾದ ಮತ್ತು ಪ್ರಮಾಣ ಪತ್ರವನ್ನು ಪಡೆಯಬಹುದಾಗಿರುತ್ತದೆ.

### ಆಧಾರ ಗ್ರಂಥಗಳು

ಶರಣ ವ್ರತ ಧಾರಣೆಯ ಕಾಲದಲ್ಲಿ ವಚನ ಸಾಹಿತ್ಯ ಪಠಣಕ್ಕೆ ಮತ್ತು ವಚನ ಲೇಖನ ಕಾರ್ಯಕ್ಕೆ ಬಳಸಬಹುದಾದ ಗ್ರಂಥಗಳೆಂದರೆ :

೧. ಬಸವ ವಚನ ದೀಪ್ತಿ. ಸಂಪಾದಕರು : ಬಸವಾತ್ಮಜೆ

೨. ವಚನ ಸಾಹಿತ್ಯ ಸಂಗ್ರಹ. ಸಂಪಾದಕರು : ಎಸ್. ಎಸ್. ಭೂಸನೂರಮಠ

೩. ಕರ್ನಾಟಕ ಸರ್ಕಾರ ಪ್ರಕಟಿಸಿರುವ ವಚನ ಸಂಪುಟಗಳು.

೪. ಅಥವಾ ಲಭ್ಯವಿರುವ ಆದಿ ಶರಣರ ವಚನ ಕೃತಿಗಳು.

ಶ್ರೀಗುರು ಬಸವಣ್ಣನವರೇ ಆದಿ ಪ್ರಮಥರಾಗಿ ಅವರ ಸಮಕಾಲೀನ ಶರಣರು ಬರೆದಿರುವ ವಚನಗಳು, ನಂತರದಲ್ಲಿ ಶ್ರೀ ತೋಂಟದ ಸಿದ್ಧಲಿಂಗೇಶ್ವರರು, ಷಣ್ಮುಖ ಶಿವಯೋಗಿಗಳು ಬರೆದಿರುವ ವಚನಗಳನ್ನು ಪಠಣ ಮಾಡಲು ಮತ್ತು ಬರೆಯಲು ಸೀಮಿತಗೊಳಿಸಬೇಕಾಗಿದೆ.

### ವಚನ ಮಂಟಪ ರಚನೆ

ವಚನ ಮಂಟಪ ಬಳ್ಳಿ ಶುಚಿ ಮೊಗ್ಗೆ ಹೂ ಬಿಡಲು
ರುಚಿ ಜೇನ ಹುಟ್ಟ ಹೊಸಮತವ ಕಟ್ಟಿದರು
ವಚನ ಶಾಸ್ತ್ರಕರು ನಾಡೊಳಗೆ ॥ ನೇ.ಅ. 75 ॥ *ಜನಪದ ಗೀತೆಗಳು*

ಸಾಮಾನ್ಯವಾಗಿ ಪೂಜಾ ಕೋಣೆಗಳು ಚಿಕ್ಕವಿರುತ್ತವೆ. ಆದ್ದರಿಂದ ನಡುಮನೆ ಅಥವಾ ಪಡಸಾಲೆಯಲ್ಲಿ ಒಂದು ಮಂಟಪ ರಚಿಸಿ, ಅದನ್ನು ಅಲಂಕರಿಸಿ ಅದರಲ್ಲಿ ಧರ್ಮಪಿತ ಬಸವಣ್ಣನವರ ಭಾವಚಿತ್ರವಿಟ್ಟು, ಅದರ ಮುಂದೆ ಪಠಣ ಮಾಡುವ ವಚನ ಗ್ರಂಥ ಮತ್ತು ವಚನ ಲೇಖನ ಗ್ರಂಥವನ್ನು ಇಡಬೇಕು. ಎಲ್ಲ ವಿಧಿಗಳನ್ನೂ ಪೂಜೆ-ಪಠಣ-ಲೇಖನ ವಚನ ಮಂಟಪದ ಮುಂದೆಯೇ ಮಾಡಬಹುದು ; ಅಲ್ಲಿ ಏಕಾಂತ ಇರುವುದಿಲ್ಲ ಎಂಬುವ ಶಂಕೆ ಇದ್ದರೆ ಇಷ್ಟಲಿಂಗಾರ್ಚನೆ-ಶಿವಯೋಗ ಸಾಧನೆಯನ್ನು ಪೂಜಾಗೃಹದಲ್ಲಿ ಮಾಡಿ ಬಸವ ಗುರುಪೂಜೆ, ವಚನ ಪಠಣ, ವಚನ ಲೇಖನ ಮುಂತಾದುವನ್ನು ವಚನ ಮಂಟಪದ ಮುಂದೆಯೇ ಮಾಡಬೇಕು. ಈ ಪವಿತ್ರ ವಿಧಿ ಪೂರೈಸಿದ ಮೇಲೆ ಶರಣ ವ್ರತಿಯು ಮನೆಯ ಎಲ್ಲರಿಗೆ ಕರುಣೋದಕ-ಕರುಣಪ್ರಸಾದ ವಿತರಿಸಬೇಕು. ಈ ವ್ರತದ ಅವಧಿಯಲ್ಲಿ ಇನ್ನಿತರರನ್ನು ಜಾತಿಮತಭೇದವಿಲ್ಲದೆ ಆಹ್ವಾನಿಸಿ ಅವರೂ ವಚನ ಪಠಣದಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕು. ಒಮ್ಮೆ, ಇನ್ನಿತರ ಶರಣ ವ್ರತಿಗಳನ್ನು ಆಹ್ವಾನಿಸಿ, ಸಾಮೂಹಿಕ ಪ್ರಾರ್ಥನೆ-ವಚನ ಪಠಣ ಮಾಡಿ, ಪ್ರಸಾದ ದಾಸೋಹ ಮಾಡಬೇಕು. ವ್ರತದ ಅವಧಿಯಲ್ಲಿ ತಮ್ಮ ಆರ್ಥಿಕ ಶಕ್ತಿಗೆ ಅನುಸಾರವಾಗಿ ಇನ್ನಿತರರನ್ನು ಆಹ್ವಾನಿಸಿ ಪ್ರಸಾದ ದಾಸೋಹ ಮಾಡಿಸಬಹುದು. ವಚನ ಮಂಟಪದ ಬಳಿ ಒಂದು ಕಾಣಿಕೆ ಪೆಟ್ಟಿಗೆ (ಹುಂಡಿ) ಇಟ್ಟಿದ್ದು ಬಂದ ಜನರಿಗೆ ಧನ ಸಹಾಯ ಮಾಡಲು ಪ್ರೇರಣೆ ನೀಡಿ ಸಂಗ್ರಹವಾದ ಹಣವನ್ನು ಶರಣ ಮೇಳದ ದಾಸೋಹಕ್ಕಾಗಿ ತಂದು ಒಪ್ಪಿಸಬಹುದು. ಶರಣ ಮೇಳದಿಂದ ವಾಪಸ್ಸಾದ ಮೇಲೆ ವಚನ ಮಂಟಪವನ್ನು ಬಿಚ್ಚಬೇಕು.

### ಮಾಘ ಪೌರ್ಣಿಮೆ ಸಂದರ್ಶನ

ಶರಣ ವ್ರತ ಕೈಗೊಂಡು ಸಹ ತೀರಾ ಅನಿವಾರ್ಯವಾದ ಕಾರಣಕ್ಕೆ ಜನವರಿ ೧೪ರಂದು ಶರಣ ಮೇಳದಲ್ಲಿ ಭಾಗಿಗಳಾಗಲು ಆಗದೆ ಇದ್ದರೆ ಮಾಘ ಪೌರ್ಣಿಮೆಯಂದು (ಚನ್ನ ಹುಣ್ಣಿಮೆ) ಕೂಡಲ ಸಂಗಮಕ್ಕೆ ಬಂದು ಗಣಲಿಂಗ ದರ್ಶನ ಪಡೆದು ವ್ರತವನ್ನು ಪೂರ್ಣಗೊಳಿಸಬಹುದು.

## ಕಾಯಕ - ದಾಸೋಹ - ಪ್ರಸಾದ

ಶರಣರು ಬೋಧಿಸಲ್ಪಟ್ಟ ಪಂಚಾಚಾರಗಳಲ್ಲಿ ಒಂದಾದ ಸದಾಚಾರ ಅಥವಾ ಅರ್ಪಣಾ ತತ್ತ್ವದ ಮೂರು ಅಂಗಗಳು ಕಾಯಕ - ದಾಸೋಹ - ಪ್ರಸಾದ. ಇವು ಮೂರನ್ನೂ ಶರಣ ವ್ರತಿಗಳು ಶುದ್ಧವಾಗಿ ಪಾಲಿಸುತ್ತ ತಮ್ಮ ಆರ್ಥಿಕ ಸ್ಥಿತಿಯು ಅನುಮೋದಿಸುವಷ್ಟು ಧನ ದಾಸೋಹವನ್ನು ಮಾಡಬಹುದು. ಧರ್ಮಕ್ಷೇತ್ರ ಕೂಡಲ ಸಂಗಮದಲ್ಲಿ ನಡೆಯುವ ಶರಣ ಮೇಳಕ್ಕೆ ತಮ್ಮ ಸ್ವಂತ ಕಾಣಿಕೆಯನ್ನು ಮಾತ್ರವಲ್ಲದೆ, ಶರಣ ಮೇಳದ ಮಹತ್ವ ತಿಳಿಸಿ ಇನ್ನಿತರರಿಂದಲೂ ಕಾಣಿಕೆ ಸಂಗ್ರಹಿಸಿ ಕೊಡುವ ಪವಿತ್ರ ಕಾರ್ಯವನ್ನು ಶರಣ ವ್ರತಿಗಳು ಕೈಗೊಳ್ಳಬೇಕೆಂದು ನಿರೀಕ್ಷಿಸುವೆವು. ಹೆಚ್ಚಿನ ಸಂಖ್ಯೆಯಲ್ಲಿ ಶರಣ ವ್ರತಿಗಳು 2001 ಇಸವಿಯ ಶರಣ ಮೇಳದಲ್ಲಿ ಭಾಗಿಗಳಾಗಬೇಕೆಂದು ಆಶಿಸುತ್ತೇವೆ.

-ಬಸವಾತ್ಮಜೆ

## ವಚನ ಲೇಖನ ವ್ರತ

ವಚನ ಸಾಹಿತ್ಯವು ಕೇವಲ ಸಾಹಿತ್ಯ ಮಾತ್ರವಲ್ಲ, ಒಂದು ಧರ್ಮ ಶಾಸ್ತ್ರ. ಮಾನವ ಕುಲಕ್ಕೆ ಬೇಕಾದ ಅಮೂಲ್ಯ ವಿಚಾರಗಳನ್ನು ಪ್ರತಿಪಾದಿಸುವುದಲ್ಲದೆ ಲಿಂಗಾಯತ ಧರ್ಮಾನುಯಾಯಿಗಳಿಗೆ ಧಾರ್ಮಿಕ ಕೈಪಿಡಿ, ಇಂಥ ವಚನ ಸಾಹಿತ್ಯದ ಪಾರಾಯಣ, ಪಠಣ ಮತ್ತು ಬರವಣಿಗೆಯನ್ನು ಅಳವಡಿಸಿಕೊಳ್ಳುವುದು ಉತ್ತಮ ಅಭ್ಯಾಸ.

ಧಾರ್ಮಿಕ ವಿಧಿಗಳನ್ನು ಕೇವಲ ಯಾಂತ್ರಿಕವಾಗಿ ಮಾಡಿದರೆ ಸಾಲದು ಅಥವಾ ಭಾಕ್ತಿಕ ಉತ್ಕಟತೆಯಿಂದ ಮಾಡಿದರೆ ಸಾಲದು, ಧಾರ್ಮಿಕ ವಿಧಿಯ ಜೊತೆಗೆ ಸುಜ್ಞಾನ ಸಂಪಾದನೆಯೂ ಆಗಬೇಕು. ಈ ಹಿನ್ನೆಲೆಯಲ್ಲಿ ವಚನಗಳ ಬರಹವನ್ನು ಮಾಡಲು ಪ್ರಸ್ತುತ ಸೂಚನೆ ನೀಡಲಾಗುತ್ತಿದೆ.

ಪುಲ್‌ಸ್ಕೇಪ್ ಸೈಜಿನ ಲೆಡ್ಜರ್ ಪುಸ್ತಕ ತೆಗೆದುಕೊಳ್ಳಬೇಕು. ಅದು ಅಡ್ಡಗೆರೆ ಉಳ್ಳದ್ದಾದರೂ ಇರಬಹುದು, ಪೂರ್ಣ ಬಿಳಿಯದೂ ಇರಬಹುದು. ಅಥವಾ ವಚನಗಳ ಸಂಖ್ಯೆ ನಿಗದಿತವಾಗಿ ಇಲ್ಲದಿರುವುದರಿಂದ ಬಿಡಿಬಿಡಿ ಹಾಳೆಗಳನ್ನೂ ತೆಗೆದುಕೊಳ್ಳಬಹುದು. ಮೊದಲ ಪುಟದಲ್ಲಿ ಮೇಲೆ ಓಂ ಶ್ರೀ ಗುರುಬಸವಲಿಂಗಾಯ ನಮಃ ಬರೆದು, ಅದರ ಕೆಳಗೆ 86666 ಬರೆಯಬೇಕು. ಅದರ ಕೆಳಗೆ ಷಟ್ಕೋನ ಸಹಿತ 'ಬಸವ-ಲಿಂಗ' ಮುದ್ರೆಯನ್ನು ಬರೆಯಬೇಕು. ಅದರ ಕೆಳಗೆ ಬರೆಯುವವರ ಹೆಸರು,ಪೂರ್ಣವಿಳಾಸ, ಬರೆಯಲು ಆರಂಭಿಸಿದ ದಿನಾಂಕ ಇವನ್ನು ಬರೆಯಬೇಕು. ಶರಣ ಮೇಳಕ್ಕೆ ಹೊರಡುವ ದಿನಾಂಕದವರೆಗೂ ವಚನಗಳನ್ನು ಬರೆಯಬಹುದು. ಬಿಡಿಬಿಡಿ ಹಾಳೆಗಳಲ್ಲಿ ಬರೆದವರು, ಎಲ್ಲಾ ಸೇರಿಸಿ, ಒಟ್ಟಾಗಿ ಬೈಂಡ್ ಮಾಡಿಸಿ ತರಬಹುದು. ಇಲ್ಲವೇ ಎಲ್ಲಾ ಹಾಳೆಗಳನ್ನು ಪೇರಿಸಿ, ದಾರದಲ್ಲಿ ಕಟ್ಟಬಹುದು.

ವಚನಗಳನ್ನು ಪ್ರತಿನಿತ್ಯ ಎಷ್ಟು ಸಾಧ್ಯವೋ ಅಷ್ಟನ್ನು ಅಂದವಾಗಿ, ಸ್ಪಷ್ಟವಾಗಿ (ಅಥವಾ ತಮಗೆ ಬರುವಂತೆ) ಬರೆದು ಇಡಬೇಕು. ಬರೆಯುವಾಗ ಸಂಖ್ಯೆಗೆ ಗಮನ ಕೊಡದೆ ಅರ್ಥವನ್ನು ಮನನ ಮಾಡುತ್ತ ಬರೆಯಬೇಕು.

ಹೀಗೆ ಬರೆದ ಒಟ್ಟು ವಚನಗಳು ಎಷ್ಟು ಎಂಬುದನ್ನು ಬರೆದು ಮುಗಿಸಿದ ದಿವಸ ಮೇಲಿನ ಹಾಳೆಯಲ್ಲಿ ಬರೆದು ಇಡಬೇಕು. ಇಂಥ ಬರಹವನ್ನು ಶರಣ ಮೇಳಕ್ಕೆ ಬರುವಾಗ ತಂದು ಗಣಲಿಂಗ ಮಂಟಪದ ಪಕ್ಕದಲ್ಲಿರುವ ವಚನ ಮಂಟಪದಲ್ಲಿ ಒಪ್ಪಿಸಿ, ಒಂದು ಪ್ರಮಾಣ ಪತ್ರ (certificate) ಪಡೆಯಬೇಕು. ಪ್ರತಿ ಶರಣ ಮೇಳಕ್ಕೆ ಹೀಗೆ ಒಂದು ವಚನ ಬರಹವನ್ನು ತಂದುಕೊಡಬೇಕು. ಶರಣ ಮೇಳ ಮುಗಿಸಿ ಹೋದ ಮೇಲೆ ಮುಂದಿನ ವರ್ಷದ ಬರಹ ಆರಂಭಿಸಬೇಕು. ಈಗ ಈ ಕಲ್ಯಾಣ ಕಿರಣ ಸಂಚಿಕೆ ತಲ್ಪಿದ ಮೇಲೆ ವಚನ ಲೇಖನ ವ್ರತವನ್ನು ಆರಂಭಿಸಬಹುದು.



### ವಿಶೇಷ ಸೂಚನೆ :

೧. ಸಮಯವು ಸಿಕ್ಕಾಗಲೆಲ್ಲ ಬರೆಯುತ್ತ ಹೋಗಬಹುದು.
೨. ವಚನ ಲೇಖನ ಗ್ರಂಥ ತಂದುಕೊಟ್ಟವರಿಗೆಲ್ಲ ಪ್ರಮಾಣಪತ್ರವನ್ನು ನೀಡಲಾಗುವುದು.
೩. ಕನ್ನಡ, ಹಿಂದಿ, ಮರಾಠಿ, ತಮಿಳು, ತೆಲುಗು, ಇಂಗ್ಲೀಷ್ ಯಾವುದೇ ಭಾಷೆಗಳಲ್ಲಿ ಬರೆಯಬಹುದು.

### ಆಧಾರ ಗ್ರಂಥಗಳು :

೧. ೧೨ನೆಯ ಶತಮಾನದ ಆದಿ ಶರಣರ ವಚನಗಳನ್ನು ಬರೆಯಬೇಕು. ನಂತರ ಆಗಿ ಹೋಗಿರುವ ಶ್ರೀ ತೋಂಟದ ಸಿದ್ಧಲಿಂಗೇಶ್ವರರು, ಶ್ರೀ ಷಣ್ಮುಖ ಶಿವಯೋಗಿಗಳ ವಚನಗಳಿಗೂ ಆದ್ಯತೆಯುಂಟು.
೨. ಬಸವ ವಚನ ದೀಪ್ತಿ, ಕರ್ನಾಟಕ ಸರ್ಕಾರದ 15 ಸಂಪುಟಗಳ ಗ್ರಂಥಗಳು, ಲಿ॥ ಭೂಸನೂರುಮಠರು ಸಂಪಾದಿಸಿದ "ವಚನ ಸಾಹಿತ್ಯ ಸಂಗ್ರಹ" ಬಳಸಿಕೊಳ್ಳಬಹುದು.
೩. ಶರಣ ವ್ರತ ಸ್ವೀಕಾರ ಮಾಡಿಯೂ ಬರೆಯಬಹುದು ಅಥವಾ ಹಾಗೆಯೂ ಬರೆಯಬಹುದು.
೪. ವಚನ ಲೇಖನಕ್ಕೆ ವಯಸ್ಸು ಮತ್ತು ಶಿಕ್ಷಣಾರ್ಹತೆಯ ಮಿತಿ ಇಲ್ಲ. ಬರೆಯಲು ಸಮರ್ಥರಿರುವ ಮಕ್ಕಳಿಂದ ಮುದುಕರವರೆಗೆ ಎಲ್ಲ ವಯಸ್ಸಿನವರು ಬರೆಯಬಹುದು. ಸೂಕ್ತವಾಗಿ ವರ್ಗೀಕರಿಸಿ ಬಹುಮಾನ ನೀಡಲಾಗುವುದು.
೫. ಜನವರಿ 11ರಂದು ವಚನ ಮಂಟಪದಲ್ಲಿ ವಚನ ಲೇಖನ ಗ್ರಂಥವನ್ನು ಅರ್ಪಿಸುವಾಗ ಅಲ್ಲಿ ಒಂದು ಅರ್ಜಿ ಪತ್ರವು ಲಭ್ಯವಿರುತ್ತದೆ. 10 ರೂ (ಹನ್ನೊಂದು) ಕೊಟ್ಟು ಅದನ್ನು ಪಡೆದು, ಗ್ರಂಥದೊಡನೆ ಅರ್ಜಿಪತ್ರವನ್ನು ವಿವರಗಳೊಡನೆ ಸಲ್ಲಿಸಬೇಕು.
೬. ಆಶೀರ್ವಾದಪೂರ್ವಕವಾಗಿ ಆ ವಚನ ಲೇಖನ ಪುಸ್ತಕವನ್ನು ವಾಪಸ್ಸು ಪಡೆಯಬೇಕು ಎನ್ನುವವರಿಗೆ ಬಸವ ಧರ್ಮ ಪೀಠದ ಮುದ್ರೆ ಒತ್ತಿ ವಾಪಸ್ಸು ನೀಡಲಾಗುವುದು.

ವಚನ ಲೇಖನ ವ್ರತವು ಅತ್ಯಂತ ಪವಿತ್ರವಾದುದು. ಇದು ಭಕ್ತಿಪ್ರೇರಕ, ಜ್ಞಾನ ಸಂಪಾದನ ಸಾಧನ ಮಾತ್ರವಲ್ಲ ಸಮಯವನ್ನು ಸಾರ್ಥಕಪಡಿಸಿಕೊಳ್ಳಲು ಉತ್ತಮ ಸಾಧನ. ಬಹುಮಾನ ಪಡೆದರಷ್ಟೇ ಸಾರ್ಥಕವಲ್ಲ, ಬರವಣಿಗೆಯೇ ಮಹಾನ್ ತಪಸ್ಸಾಗುವುದು ಎಂಬುದನ್ನು ಶರಣ ಬಂಧುಗಳು ಲಕ್ಷ್ಯದಲ್ಲಿಡಬೇಕು. ಅರ್ಧವಾರ್ಷಿಕ ಪರೀಕ್ಷೆಗಳು ಮುಗಿದಿದ್ದು, ವಾರ್ಷಿಕ ಪರೀಕ್ಷೆಗಳಿಗೆ ತೀವ್ರ ಅಭ್ಯಾಸವು ಜನವರಿಯ ನಂತರ ಪ್ರಾರಂಭವಾಗುವುದು. ಆದ್ದರಿಂದ ನವೆಂಬರ್-ಡಿಸೆಂಬರ್ ತಿಂಗಳಿನಲ್ಲಿ ವಚನ ಲೇಖನ ಮಾಡಲು ವಿದ್ಯಾರ್ಥಿಗಳು ಸಹ ಹೆಚ್ಚಿನ ಆಸಕ್ತಿ ವಹಿಸಬೇಕು.

ಜನವರಿ 11ರಂದು ಶರಣ ಮೇಳಕ್ಕೆ ಬರುತ್ತಿದ್ದಂತೆಯೇ ವಚನ ಲೇಖನ ಗ್ರಂಥವನ್ನು ಅರ್ಪಿಸಿದರೆ, ಪ್ರಮಾಣಪತ್ರ-ಬಹುಮಾನ ನೀಡಲು ಅನುಕೂಲವಾಗುತ್ತದೆ ಎಂಬುದನ್ನು ಶರಣ ಬಂಧುಗಳ ಗಮನಕ್ಕೆ ತಂದು, ಈ ಬಾರಿ ಹೆಚ್ಚಿನ ಜನರು ವಚನ ಲೇಖನ ಗ್ರಂಥಗಳನ್ನು ತರುತ್ತಾರೆಂದು ನಿರೀಕ್ಷಿಸುತ್ತೇವೆ. ಶುಭ ಹಾರೈಕೆಗಳೊಡನೆ,

19-10-2000 ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

### ವಚನ ಲೇಖನ ವ್ರತಕ್ಕಾಗಿ ವಿಶೇಷ ಪುಸ್ತಕ

ಶರಣ ಬಂಧುಗಳೇ, ವಚನ ಲೇಖನ ವ್ರತಕ್ಕಾಗಿ ವಿಶೇಷ ಪುಸ್ತಕವೊಂದನ್ನು ಸಿದ್ಧಪಡಿಸಲಾಗಿದೆ. ಪ್ರಾರಂಭದ ಪುಟಗಳಲ್ಲಿ ಕಡ್ಡಾಯವಾಗಿ ಬರೆಯಬೇಕಾದ ಕೆಲವು ಮಂತ್ರ, ಸ್ತೋತ್ರ, ತತ್ತ್ವವಾಕ್ಯಗಳನ್ನು ಮುದ್ರಿಸಿ ಅನುಕರಿಸಿ (ಕಾಪಿ ರೈಟಿಂಗ್) ಬರೆಯಲು ವ್ಯವಸ್ಥೆ ಮಾಡಲಾಗಿದೆ. ಮೊದಲ ಪುಸ್ತಕವನ್ನು ಬಸವ ಧರ್ಮ ಪೀಠದಿಂದ ಆಶೀರ್ವಾದ ಪೂರ್ವಕವಾಗಿ ತರಿಸಿಕೊಂಡು ಬರೆದು ಅದು ತುಂಬಿದ ನಂತರ ಬೇರೆ ನೋಟ್ ಬುಕ್‌ಗಳಲ್ಲಿ ಬರೆಯಬಹುದು. ವಚನ ಲೇಖನ ವ್ರತದ ಪುಸ್ತಕದ ಬೆಲೆ 45 ರೂ. ಅಂಚೆ ವೆಚ್ಚಕ್ಕೆ 10 ರೂ. ಸೇರಿಸಿ 55 ರೂ.ಗಳನ್ನು ಮನಿಯಾರ್ಡರ್ ಮೂಲಕ ಕೂಡಲಸಂಗಮ ಅಥವಾ ಬೆಂಗಳೂರು ವಿಳಾಸಕ್ಕೆ ಕಳಿಸಬಹುದು.

# ವೀರಶೈವ-ಲಿಂಗಾಯತ ಕುರಿತು ಒಂದು ಪತ್ರ

**2001ನೇ ಇಸ್ವಿಯಲ್ಲಿ ಪ್ರಾರಂಭವಾಗುವ ಜನಗಣತಿಯಲ್ಲಿ ಧರ್ಮಕಾಲಂನಲ್ಲಿ ವೀರಶೈವ/ಲಿಂಗಾಯತವೆಂದು ಬರೆಯಿಸಬೇಕೆಂಬ. ಗೊಂದಲದ ಬಗ್ಗೆ ಸ್ಪಷ್ಟೀಕರಣ**

ಅಖಿಲ ಭಾರತ ವೀರಶೈವ ಮಹಾಸಭೆಯವರು ಮತ್ತು ಪಂಚ ಪೀಠಾಧಿಕಾರಿಗಳು ಮುಂದೆ ಬರುವ ಜನಗಣತಿಯಲ್ಲಿ ಧರ್ಮಕಾಲಂನಲ್ಲಿ ವೀರಶೈವ/ಲಿಂಗಾಯತವೆಂದು ಬರೆಯಿಸಬೇಕೆಂದು 9-9-2000 ಮತ್ತು 10-9-2000ದ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಅದೇ ತರಹ ತಾ 9-9-2000ನೇ ದಿವಸ ಅದೇ ಪತ್ರಿಕೆಯಲ್ಲಿ ಬಸವ ಧರ್ಮ ಪೀಠದ ಅಧ್ಯಕ್ಷರಾದ ಮಾತೆ ಮಹಾದೇವಿಯವರು ಈ ದ್ವಂದ್ವ ಹೇಳಿಕೆಯನ್ನು ಖಂಡಿಸಿ, ಲಿಂಗಾಯತ ಧರ್ಮ ಅದೆ. ವೀರಶೈವ ಮತವಿದೆ, ಆದ್ದರಿಂದ ಕೇವಲ ಧರ್ಮ ಕಾಲಂನಲ್ಲಿ ಲಿಂಗಾಯತವೆಂದು ಬರೆಯಿಸಬೇಕೆಂದು ಪ್ರಕಟಿಸಿದ್ದಾರೆ. ಹೀಗೆ ಬರೆಯಿಸುವುದರಿಂದ ಸ್ವತಂತ್ರ ಹಾಗೂ ಧಾರ್ಮಿಕ ಅಲ್ಪಸಂಖ್ಯಾತರ ಧರ್ಮಗಳಾದ ಜೈನ, ಬೌದ್ಧ, ಸಿಖ್‌ರಂತೆ ಪ್ರತ್ಯೇಕ ಮಾನ್ಯತೆ ಹಾಗೂ ಸೌಲಭ್ಯ ಪಡೆದುಕೊಳ್ಳಲು ಅವಕಾಶ ಸಿಗುತ್ತದೆಂದು ಅವರು ಲಿಂಗಾಯತ ಸಮಾಜ ಬಾಂಧವರಲ್ಲಿ ತಮ್ಮ ಪತ್ರಿಕಾ ಹೇಳಿಕೆ ಮೂಲಕ ಮನವಿ ಮಾಡಿಕೊಂಡಿದ್ದಾರೆ. ಆದ್ದರಿಂದ ಈ ಬಗ್ಗೆ ಸಮಾಜದಲ್ಲಿ ಗೊಂದಲವೆದ್ದಿದೆ. ಇದಕ್ಕೆ ನಾನು ಕೆಳಗೆ ಬರೆದಂತೆ ಸ್ಪಷ್ಟೀಕರಿಸುತ್ತೇನೆ.

12ನೇ ಶತಮಾನದಲ್ಲಿ ಬಸವಣ್ಣನವರು ಲಿಂಗವಂತ ಧರ್ಮ ಸ್ಥಾಪಿಸಿದರು. ವೈಜ್ಞಾನಿಕ ತಳಹದಿಯ ಮೇಲೆ ಇಷ್ಟಲಿಂಗ ಸೃಷ್ಟಿಸಿ ದೇವರ ಕಲ್ಪನೆ ಕೊಟ್ಟು ಧಾರ್ಮಿಕ ಕ್ರಾಂತಿ ಮಾಡಿದರು. ಆಗ ಶೈವ ಧರ್ಮ ಪ್ರಚಲಿತವಿತ್ತು. ಅದರಲ್ಲಿ ವೀರಶೈವ ಒಂದು ಪಂಥವಿತ್ತು. ಅವೆಲ್ಲವೂ ಬಸವಣ್ಣನವರು ಸ್ಥಾಪಿಸಿದ ಲಿಂಗವಂತ ಧರ್ಮದಲ್ಲಿ ಬಂದು ಸೇರಿ ಲಿಂಗಾಯತರಾದರು. ಇಷ್ಟಲಿಂಗಧಾರಿಗಳಾದರು. ಏಕದೇವೋಪಾಸಕರಾದರು. ಅನುಭವ ಮಂಟಪದಲ್ಲಿ ಪಾಸಾದ ತತ್ತ್ವಗಳನ್ನು ಎಲ್ಲರೂ ಒಪ್ಪಿ ಕಾರ್ಯ ಪ್ರವೃತ್ತರಾದರು. ಲಿಂಗಾಯತ ಧರ್ಮ ಇಡೀ ದೇಶದಲ್ಲಿ ಪ್ರಸಾರವಾಯಿತು. ಶಿವಶರಣರಾದ ಹರಳಯ್ಯ-ಮಧುವರಸರ ಮಕ್ಕಳ ವಿಹಾಹ ಜಾತಿ-ಸಂಕರವೆಂದು ಕೂಗೆಬ್ಬಿಸಿ ಸಾಂಪ್ರದಾಯವಾದಿಗಳು ಕಲ್ಯಾಣಕ್ರಾಂತಿಗೆ ಎಡೆಮಾಡಿಕೊಟ್ಟರು. ಅವರಿಗೆ ಎಳೆಹೂಟೆಯಾಯಿತು. ಬಿಜ್ಜಳ ರಾಜನ ಕೊಲೆಯಾಯಿತು. ಶರಣರು ತಮ್ಮ ವಚನ ಸಾಹಿತ್ಯದೊಂದಿಗೆ ಕಲ್ಯಾಣಬಿಟ್ಟು ಹೋದರು. ಮತಾಂತರ ಹೊಂದಿದವರು ತಮ್ಮ ಹಿಂದಿನ ಸಂಪ್ರದಾಯದೊಂದಿಗೆ ವೀರಶೈವರಾಗಿ ಉಳಿದರು.

14-15ನೇ ಶತಮಾನದಲ್ಲಿ ವಚನ ಸಾಹಿತ್ಯ ಮತ್ತೆ ಬೆಳಕು ಕಂಡಿತು. ಶೂನ್ಯ ಪೀಠದ ಪರಂಪರೆ ಮುಂದುವರಿಯಿತು. ಅಭಿನವ ಅಲ್ಲಮನಾಗಿ ಶ್ರೀ ಎಡೆಯೂರು ಸಿದ್ಧಲಿಂಗಯತಿಗಳು ಸ್ವಅನುಭವದಿಂದ ವಚನಸಾಹಿತ್ಯ ರಚಿಸಿ, ಬಸವ ತತ್ವ ಪ್ರಚಾರದಲ್ಲಿ ತಂದರು. ಅಲ್ಲಿಂದ ವಚನ ರಚನೆ ಮುಂದುವರಿಯಿತು. ಸಮಾಜದಲ್ಲಿ ಎರಡು ಬಗೆಯ ಪೀಠಗಳು ಇರುತ್ತವೆ. ಒಂದು ಗುರುವರ್ಗ ಇನ್ನೊಂದು ವಿರಕ್ತ ವರ್ಗ. ಒಂದು ವೈದಿಕ ಸಂಪ್ರದಾಯದ್ದು, ಇನ್ನೊಂದು ಶೂನ್ಯ ಪೀಠದ್ದು. ಬಸವ ತತ್ತ್ವಗಳಾದ ಅಷ್ಟಾವರಣ, ಪಂಚಾಚಾರ, ಷಟಸ್ಥಲಗಳ ತಳಹದಿಯ ಮೇಲೆ ಲಿಂಗಾಂಗ ಸಾಮರಸ್ಯ ಪಡೆಯುವ ನೂತನ ಲಿಂಗಾಯತ ಧರ್ಮದ್ದು. ವಿರಕ್ತ ಮಠಗಳಿಗೆ ಕಾಶಿಯಲ್ಲಿ ಓದಿದವರನ್ನು ಸ್ವಾಮಿಗಳಾಗಿ ಮಾಡಲಿಕ್ಕೆ ಹತ್ತಿದ್ದರಿಂದ ಅವರು ವೇದ, ಆಗಮ, ಶಾಸ್ತ್ರ ವ್ಯಾಕರಣ ವಗೈರೆ ಓದಿದರು. ವಚನ ಸಾಹಿತ್ಯ ಕಲಿಯಲೇ ಇಲ್ಲಾ. ಆದ್ದರಿಂದ ಅವರೂ ವೈದಿಕ ಸಂಪ್ರದಾಯವನ್ನು ಮುಂದುವರಿಸಿದರು. ಸಮಾಜಕ್ಕೆ ನಿಜವಾದ ತತ್ತ್ವ ಬೋಧಿಸಲೇ ಇಲ್ಲ. ಜನರು ಮೂಢನಂಬಿಕೆ ಬಹುದೇವೋಪಾಸನೆ, ಮನೆಪರಂಪರೆಗಳಿಗೊಳಗಾಗಿ ಧರ್ಮಕಾರ್ಯ ಮಾಡಲಿಕ್ಕೆ ಹತ್ತಿದರು. ಹೀಗಾಗಿ ಜನರು ತಮತಮಗೆ ಬೇಕಾದ ಸಂಪ್ರದಾಯಗಳನ್ನು ಹಿಡಿದು



ಧರ್ಮಕಾರ್ಯಗಳನ್ನು ಮಾಡಲಿಕ್ಕೆ ಹತ್ತಿದರು.

ಅಂಧಕಾರದಲ್ಲಿದ್ದ-ವಚನಸಾಹಿತ್ಯವನ್ನು ವಚನ ಪಿತಾಮಹರಾದ ಫ.ಗು.ಹಳಕಟ್ಟಿಯವರು ಮೂಲೆ ಮೂಲೆಗಳಲ್ಲಿದ್ದ ತಾಡಓಲೆಗಳನ್ನು ಸಂಗ್ರಹಿಸಿ ವಚನ ಸಾಹಿತ್ಯ ಬೆಳೆಸಿದರು. ಈ ವಚನ ಸಾಹಿತ್ಯದಿಂದ ಪ್ರೇರಿತರಾಗಿ ಲಿಂಗಾನಂದ ಸ್ವಾಮಿಗಳು ನಿಜವಾದ ಬಸವ ತತ್ತ್ವವನ್ನು ಪ್ರವಚನದ ಮೂಲಕ ಬಹಿರಂಗ ಸಭೆಗಳಲ್ಲಿ ಲಕ್ಷೋಪಲಕ್ಷ ಜನರಿಗೆ ತಿಳಿಹೇಳಿದರು. ತಮ್ಮ ಆಶ್ರಯದಲ್ಲಿ ಕೆಲವು ಜನರಿಗೆ ತರಬೇತಿ ಕೊಟ್ಟು ಬಹಿರಂಗ ಪ್ರಚಾರಕ್ಕೆ ಹಚ್ಚಿದರು. ಇದರಿಂದ ಜನರಿಗೆ ಲಿಂಗಾಯತ ಧರ್ಮದ ನಿಜವಾದ ತತ್ತ್ವ ತಿಳಿದು ಸ್ವಾಮಿಗಳಿಗಿಂತ ಭಕ್ತರೇ ಬಸವತತ್ತ್ವದಲ್ಲಿ ಪರಿಣಿತರಾದರು. ಸಾಹಿತ್ಯ ರಚಿಸಿದರು, ಅದು ಈಗ ಬೃಹದಾಕಾರವಾಗಿ ಬೆಳೆದಿದೆ. ವೀರಶೈವ ಮತ್ತು ಲಿಂಗಾಯತದ ವಿಷಯದಲ್ಲಿ ಯಾವ ಯಾವ ತತ್ತ್ವಗಳು ಅವೆ. ಯಾವುದರಲ್ಲಿ ಮೇಲುಕೀಳು ಅದೆ. ಯಾವುದರಲ್ಲಿ ಸಮಾನತೆ ಅದೆ. ಯಾವ ಧರ್ಮ ವಿಶ್ವಮಾನ್ಯವಿದೆ ಅನ್ನುವುದು ಜನರಿಗೆ ತಿಳಿದಿದೆ. ತಿಳಿದವರು ನಿಜ ತತ್ತ್ವ ತಿಳಿದು ಜನಗಣತಿಯಲ್ಲಿ ಸರಿಯಾಗಿ ಪ್ರಚಾರ ಮಾಡಬೇಕು.

ಕಾನೂನು ದೃಷ್ಟಿ : ವೀರಶೈವ/ಲಿಂಗಾಯತ ಧರ್ಮಾಭಿಮಾನಿಗಳು ಕಾನೂನು ದೃಷ್ಟಿಯಲ್ಲಿ ಶೂದ್ರರು ಹಿಂದೂ ಧರ್ಮದಡಿಯಲ್ಲಿ ವರ್ಣಾಶ್ರಮದಲ್ಲಿ ಬರುವ ಶೂದ್ರರಾಗಿದ್ದಾರೆ. ಏಕೆಂದರೆ ಇದು ಹಿಂದೂ ಧರ್ಮದಲ್ಲಿ 4ನೇ ವರ್ಗ. ಧರ್ಮ ಅಲ್ಲಾ ಈ ಬಗ್ಗೆ ಯಾವ ಪೀಠಾಧಿಕಾರಿಗಳೂ ಧರ್ಮ ಅಂತಾ ಸಿದ್ಧಪಡಿಸಿ ಸಂವಿಧಾನ ತಿದ್ದುಪಡಿ ಮಾಡಿಸಲೂ ಪ್ರಯತ್ನಿಸಲೇ ಇಲ್ಲಾ. ಈ ಬಗ್ಗೆ ನಾನು ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷರಿಗೆ ಪತ್ರ ಬರೆದೆ. ಅದು ಕಾರ್ಯಗತವಾಗಲಿಲ್ಲ. ಆದರೆ ಬಸವ ಧರ್ಮ ಪೀಠದ ಅಧ್ಯಕ್ಷೆ ಮಾತೆ ಮಹಾದೇವಿಯವರು ಈ ಬಗ್ಗೆ ಪ್ರಯತ್ನ ನಡೆಯಿಸಿದ್ದಾರೆಂದು ಕೇಳಿದ್ದೇನೆ ಅವರಿಗೆ ಭಕ್ತಿಪೂರ್ವಕ ನಮನಗಳು.

**1971ನೇ ಇಸ್ವಿಯ ಜನಗಣತಿಯ ಬಗ್ಗೆ ವಿಚಾರ :**

1970ರಲ್ಲಿ ಧಾರವಾಡದಲ್ಲಿ ಜನಗಣತಿಯಲ್ಲಿ ಧರ್ಮ ಕಾಲಂನಲ್ಲಿ ಏನು ಬರೆಯಿಸಬೇಕೆಂಬ ಬಗ್ಗೆ ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷರಾದ್ದ, ಮಾನ್ಯ ಶ್ರೀ ಮಲ್ಲಾರಾಧ್ಯರ ಅಧ್ಯಕ್ಷತೆಯಲ್ಲಿ ಸಭೆ ಜರುಗಿ ವೀರಶೈವ-ಲಿಂಗಾಯತ ಶಬ್ದಗಳ ಬಗ್ಗೆ ಚರ್ಚೆಯಾಗಿ ವೀರಶೈವ-ಲಿಂಗಾಯತ ಬೇರೆಯಲ್ಲ. ಇಬ್ಬರೂ ಇಷ್ಟಲಿಂಗಧಾರಿಗಳು. ಆದ್ದರಿಂದ ಬೇಧವೆಣಿಸದೆ, ಎರಡೂ ಹೆಸರುಗಳನ್ನು ಬರೆಯಿಸಬೇಕೆಂದು ನಿರ್ಣಯಿಸಲಾಯಿತು. ಆ ಪ್ರಕಾರ 1971 ರಿಂದ 1991ರವರೆಗೆ ನಡೆದುಬಂದಿತು. ಆದರೆ 2001ರಲ್ಲಿ ಭೇದ ಬಂದದ್ದು- ಇವೆರಡೂ ಧರ್ಮ ಹಿಂದುಧರ್ಮ ಅಂತ ಹೇಳಿಕೆ ಕೊಟ್ಟಿದ್ದರಿಂದ. ಈ ಬಗ್ಗೆ ನನ್ನ ಸ್ಪಷ್ಟೀಕರಣ ಲಿಂಗಾಯತ ಧರ್ಮವೆಂದು ಬರೆಯಿಸುವುದೇ ಸರಿಯಾದ ಮಾರ್ಗ.

**ಶಿವರುದ್ರಪ್ಪ ಕೋರಿಶೆಟ್ಟರ**

ರಾಜೇಂದ್ರನಗರ ಹಾವೇರಿ-581110 ದಿ. 10-9-2000

---

## ವಚನ ಕಿರಣ

ಅಂತರಂಗದಲ್ಲಿ ಅಪಚಾರವ ಮಾಡಿ
ಹೊರಗೆ ಒಳ್ಳೆಯವನ ತೆರದಿ ನಟಿಸುತಿರಲು
ಇತರರು ಅರಿಯದಿರಲು ಈಶ್ವರನರಿಯನೇ
ಹೇಳ್ವೆ ವೇಮ ವಿಶ್ವತೋಬಿರಾಮ

-ಯೋಗಿ ವೇಮನ

# ವಚನ ಕಿರಣ

1. ಬಸವಣ್ಣಾ, ನಿಮ್ಮ ತತ್ವಜ್ಯೋತಿ ಜಗದಲ್ಲೆಲ್ಲ ಪ್ರಕಾಶಿಸುತಿಹುದಯ್ಯಾ
ಬಸವಣ್ಣಾ, ನಿಮ್ಮ ವಚನದೀಪ್ತಿ ಶರಣರ
ಹೃನ್ಮಂದಿರದಲ್ಲಿ ಬೆಳಗುತಿಹುದಯ್ಯಾ
ಬಸವಣ್ಣಾ, ನಿಮ್ಮ ಹುಟ್ಟು ದೇಶದ ಇತಿಹಾಸದಲ್ಲೊಂದು
ಸುವರ್ಣ ಗಳಿಗೆಯಯ್ಯಾ
ಕನ್ನಡದ ಕುವರರಾಗಿ ಮಾತೃಭಾಷೆಗೆ ದಿವ್ಯತ್ವವ ತಂದುಕೊಟ್ಟು
ಜಡ ಸಂಪ್ರದಾಯಗಳ ವಿರೋಧಿಸಿ ಕ್ರಾಂತಿ ಕಹಳೆಯೂದಿದ
ಭಾರತ ಮಾತೆಯ ಹೆಮ್ಮೆಯ ಪುತ್ರರಾದ
ಮಾತಾ ಪ್ರಿಯ ಸಚ್ಚಿದಾನಂದ ಕಂದ ಬಸವಣ್ಣಾ
ನಿಮ್ಮ ಬೋಧೆ ಜಗಕ್ಕೆಲ್ಲ ಪ್ರಿಯವಾಗಿಹುದಯ್ಯಾ.

2. ನಿಂತಾಗ, ಕುಳಿತಾಗ, ನಡೆವಾಗ, ನುಡಿವಾಗ,
ಉಂಬಾಗ, ಉಡುವಾಗ, ಕೊಂಬಾಗ, ಕೊಡುವಾಗ
ಮಲಗುವಾಗ, ಏಳುವಾಗ, ನಿದ್ರಿಸುವಾಗ,
ಸುಖ-ದುಃಖಗಳಲ್ಲಿ ನೋವು-ನಲಿವುಗಳಲ್ಲಿ
ಎಂದೆಂದೂ ಎನ್ನ ಬಸವ ಸ್ಮರಣೆಯಲ್ಲಿರಿಸಯ್ಯಾ
ಮಾತಾಪ್ರಿಯ ಸಚ್ಚಿದಾನಂದ.

3. ಎನ್ನರಿವು ನೀನೆ ಬಸವಾ
ಎನ್ನಮರೆವು ನೀನೆ ಬಸವಾ
ಎನ್ನ ಜ್ಞಾನ ಬುದ್ಧಿ ನೀನೆ ಬಸವಾ
ಎನ್ನ ಶಕ್ತಿ-ಯುಕ್ತಿ ಮುಕ್ತಿಯೆಲ್ಲವೂ ನೀನೆಯಾಗಿ
ಬಸವಣ್ಣನ ನೆನೆದು ಆನು ಸುಖಿಯಾದೆನಯ್ಯಾ
ಮಾತಾಪ್ರಿಯ ಸಚ್ಚಿದಾನಂದ.

4. ಬಸವಣ್ಣನದೇ ಬಟ್ಟೆಯೆನಗೆ
ಬಸವಣ್ಣನದೇ ಕರುಣೆಯೆನಗೆ
ಬಸವಣ್ಣನದೇ ಸ್ಮರಣೆಯೆನಗೆ
ಬಸವಣ್ಣನದೇ ಜಪವೆನಗೆ
ಬಸವಣ್ಣನದೇ ತಪವೆನಗೆ
ಬಸವಣ್ಣನ ನೆನೆವುತ್ತ ನೆನೆವುತ್ತ
ಭಕ್ತಿಭಾವದುಂಬಿ ನಿಮ್ಮನೆ ಮರೆವೆನಯ್ಯಾ
ಮಾತಾಪ್ರಿಯ ಸಚ್ಚಿದಾನಂದ.

-ಪೂಜ್ಯ ಶ್ರೀ ಮಾತೆ ಅಕ್ಕಮಹಾದೇವಿ, ಬಸವ ಧರ್ಮ ಪೀಠ, ಕೂಡಲಸಂಗಮ



# ಹೀಗೊಂದು ಅನಾಮಧೇಯ ಪತ್ರ

ಪೂಜ್ಯ ಮಾತಾಜಿಯವರಿಗೆ ತಮ್ಮ ಭಕ್ತವೃಂದದಲ್ಲಿ ಒಬ್ಬ ಅನಾಮಧೇಯನಿಂದ ಶರಣು ಶರಣಾರ್ಥಿ.

ನಾನು ನಿಮ್ಮ ಸಂಸ್ಥೆಯ ಚಟುವಟಿಕೆಗಳನ್ನು ಚಿಕ್ಕಂದಿನಿಂದ ಗಮನಿಸುತ್ತಿದ್ದೇನೆ ಮತ್ತು ನಿಮ್ಮ ಸಂಸ್ಥೆಯ ಮಾಸ ಪತ್ರಿಕೆ ''ಕಲ್ಯಾಣ ಕಿರಣ''ವನ್ನು ಪ್ರತಿ ತಿಂಗಳೂ ತಪ್ಪದೇ ಓದುತ್ತೇನೆ ಮತ್ತು ತಮ್ಮ ಹಾಗೂ ಪೂಜ್ಯ ಅಪ್ಪಾಜಿಯವರ ಪ್ರವಚನಗಳನ್ನು ಕೇಳಿ ತುಂಬಾ ಪ್ರಭಾವಿತನಾಗಿದ್ದೇನೆ.

ಪೂಜ್ಯರೇ, ಬಹುಷಃ ನೀವು ಮತ್ತು ಪೂಜ್ಯ ಅಪ್ಪಾಜಿಯವರು ಎದುರಿಸಿದಷ್ಟು ವಿರೋಧವನ್ನು ಬೇರಾವ ಮಠಾಧಿಪತಿಗಳೂ ಎದುರಿಸಿಲ್ಲ. ಯಾರಿಂದ ? ನಮ್ಮ ಅಪ್ಪ ಬಸವಣ್ಣನ ಆಸ್ತಿಯನ್ನು (ವಚನ ಸಾಹಿತ್ಯವನ್ನು ಆಧಾರವಾಗಿಟ್ಟುಕೊಂಡು)ತಿಂದು, ಅವರನ್ನೇ ಧಿಕ್ಕರಿಸುವ, ಧರ್ಮಲಂಡರಿಂದ. (ಮಾತು ಕಟುವಾಗಿ- ದ್ದರೆ ಧರ್ಮಭ್ರಷ್ಟರೆಂದು ತಿದ್ದಿ ಓದಿರಿ) ಇತಿಹಾಸವನ್ನು ನಾವು ತಿರುವಿನೋಡಿದಾಗ ಕ್ರಿ.ಪೂ.ದಿಂದಲೂ ನಮ್ಮವರೇ ನಮ್ಮನ್ನು ಮೋಸಮಾಡುತ್ತಾ ಬಂದಿದ್ದಾರೆ.

ಮೊಟ್ಟ ಮೊದಲನೆಯದಾಗಿ, ಅಲೆಗ್ಸಾಂಡರ್ ಭಾರತಕ್ಕೆ ದಂಡೆತ್ತಿ ಬಂದಾಗ ಝೀಲಂ ನದಿಯ ತೀರದಲ್ಲಿ ಪೋರಸ್ ಅವನನ್ನು ತಡೆದನು. ಆದರೆ ನೆರೆಯ ರಾಜನಾದ ಅಂಬಿಯು ಪೋರಸ್ ರಾಜನ ಮೇಲಿನ ದ್ವೇಷದಿಂದ, ಅಲೆಗ್ಸಾಂಡರ್ ಜೊತೆ ಕೈ ಜೋಡಿಸಿ ತಾಯ್ನಾಡಿಗೆ ದ್ರೋಹ ಬಗೆದನು. ಮುಂದೆ ಬ್ರಿಟೀಷರ ಆಳ್ವಿಕೆಯಲ್ಲಿ ಪ್ಲಾಸಿಯ ಯುದ್ಧದಲ್ಲಿ ಶಿರಾಜ್-ಉದ್-ದೌಲನ ಸೇನಾದಂಡನಾಯಕನಾದ ಮೀರ ಮೊಹಮ್ಮದ್ ಕೊನೆಯ ಗಳಿಗೆಯಲ್ಲಿ, ಬ್ರಿಟೀಷ್‌ರನ್ನು ಸೇರಿ ಒಬ್ಬ ದೇಶಪ್ರೇಮಿಯ ಪತನಕ್ಕೆ ಕಾರಣನಾದನು ಮತ್ತು 1857ರ ಮೊದಲನೆಯ ಭಾರತದ ಸ್ವಾತಂತ್ರ್ಯ ಸಮರದಲ್ಲಿ, ಝಾನ್ಸಿಯ ಲಕ್ಷ್ಮಿಬಾಯಿ, ತಾತ್ಯಾ ಟೋಪಿ, ನಾನಾ ಫಡ್ನವೀಸ್ ಮುಂತಾದ ವೀರ ದೇಶಪ್ರೇಮಿಗಳು ಮುಂಚೂಣಿಯಲ್ಲಿ ನಿಂತು, ಬ್ರಿಟೀಷರನ್ನು ಬಗ್ಗು ಬಡಿಯುವಲ್ಲಿ ಯಶಸ್ವಿಯಾಗಿದ್ದರೆನ್ನಬಹುದು. ಆದರೆ ಕೆಲವು ದೇಶದ್ರೋಹಿಗಳು ಅವರ ಸುಳಿವನ್ನು ಬ್ರಿಟಿಷರಿಗೆ ತಿಳಿಸಿ, ಅವರ ಸಾವಿಗೆ ಮತ್ತು ದೇಶದ ಪತನಕ್ಕೆ ಕಾರಣರಾದರು.

ಮತ್ತು ಇತ್ತೀಚೆಗೆ, 1999ರ ಚುನಾವಣೆಯಲ್ಲಿ, ನಮ್ಮ ದೇಶದವರೇ, ನಮ್ಮ ಅಣ್ಣ ತಮ್ಮಂದಿರೆ, ಭಾರತಾಂಬೆಯ ಮಕ್ಕಳೇ ಒಬ್ಬ ವಿದೇಶೀ ಮಹಿಳೆಯನ್ನು ಪ್ರಧಾನಿಯನ್ನಾಗಿ ಮಾಡಲು ಶಕ್ತಿ ಮೀರಿ ಪ್ರಯತ್ನಿಸಿದರು.

ಮತ್ತು ಮೊನ್ನೆಯಷ್ಟೇ ನಡೆದ ಚರ್ಚ್ ಬಾಂಬ್ ಸ್ಫೋಟಗಳಲ್ಲಿ ಭಾರತೀಯ ವಾಯುಪಡೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಒಬ್ಬ ಮುಸ್ಲೀಮ್ ಅಧಿಕಾರಿಯನ್ನು ಬಂಧಿಸಲಾಗಿದೆ. ಇದರರ್ಥ ಎಲ್ಲಾ ಮುಸ್ಲೀಮ್ ಧರ್ಮೀಯರು ದೇಶದ್ರೋಹಿಗಳೆಂದಲ್ಲ. ಅವರು ಯಾವುದೇ ಧರ್ಮದವರಾದರೂ ಅವರು ಮೊದಲು ಭಾರತೀಯರಲ್ಲವೆ. ಹಾಗೆ ನೋಡಿದಲ್ಲಿ ನಮ್ಮ ದೇಶದ ಅಣ್ವಸ್ತ್ರ ತಂತ್ರಜ್ಞಾನದ ಪಿತಾಮಹರು, ಪ್ರಧಾನ ಮಂತ್ರಿಗಳ ವೈಜ್ಞಾನಿಕ ಸಲಹೆಗಾರರು ಆದ ಡಾ|| ಎ.ಪಿ.ಜೆ. ಅಬ್ದುಲ್ ಕಲಾಮ್‌ರವರು ಮುಸ್ಲಿಮ್ ಧರ್ಮೀಯರಲ್ಲವೇ. ನಾನಿಲ್ಲಿ ಕೇವಲ ಕೆಲವು ಸನ್ನಿವೇಶಗಳನ್ನು ಮಾತ್ರ ಉದಾಹರಣೆಯಾಗಿ ತೆಗೆದುಕೊಂಡಿದ್ದೇನೆ. ನಾವು ಇತಿಹಾಸವನ್ನು ತಿರುವಿ ಹಾಕಿದಾಗ ಇಂತಹ ನೂರಾರು ಸನ್ನಿವೇಶಗಳು ಎದುರಾಗಬಹುದು. ಹೀಗೆ ಅನಾದಿ ಕಾಲದಿಂದಲೂ ನಮ್ಮವರೇ, ನಮ್ಮನ್ನು (ತಾಯಿ ಭಾರತಾಂಬೆಯನ್ನು) ಮೋಸ ಮಾಡುತ್ತ, ಇರಿಯುತ್ತಾ ಬಂದಿದ್ದಾರೆ. ಹೀಗೆ ತನ್ನ ಮಕ್ಕಳಿಂದಲೇ ಇರಿತಕ್ಕೆ ಒಳಗಾಗಿ ತಾಯಿ ಭಾರತಾಂಬೆ ಅದೆಷ್ಟು ನೊಂದಿರಬೇಕು.

ಪೂಜ್ಯರೇ, ಈಗ ನಿಮಗೆ ಎದುರಾಗುತ್ತಿರುವ ವಿರೋಧವೂ ಲಿಂಗಾಯತ ಧರ್ಮೀಯರು ಎಂದು ಹೇಳಿಕೊಳ್ಳುತ್ತಾ ವಚನ ವಾಙ್ಮಯ ತಾಯಿಯ ಉಪ್ಪುಂಡು, ಬರೆದ ಶರಣರಿಗೆ ದ್ರೋಹ ಬಗೆಯುತ್ತಿಲ್ಲವೆ. ವ್ಯತ್ಯಾಸವೇನೆಂದರೆ, ಮೇಲಿನ ಸನ್ನಿವೇಶಗಳು ದೇಶದ್ರೋಹವಾದರೆ, ಇದು ಧರ್ಮದ್ರೋಹ.

इस दुनिया में बहुत से हत्यारे और गुंडे हुए हैं। कई बार मुझे ऐसा लगा की जीत उन्हीकी होगी, लेकिन आखिर में यही हुआ कि वो मिट गये। (ಜಗತ್ತಿನಲ್ಲಿ ಹಲವಾರು ಗೂಂಡಾಗಳು ಆಗಿ ಹೋಗಿದ್ದಾರೆ. ಬಹಳಷ್ಟು ಸಲ ನನಗೆ ಗೆಲುವು ಅವರದೇ ಆಗುವುದು ಎನ್ನಿಸಿತು. ಆದರೆ ಕಡೆಗೆ ಅವರು ನಾಶವಾದರು) ಈ ಮಾತುಗಳನ್ನು ಮಹಾತ್ಮಾ ಗಾಂಧೀಜಿಯವರು ಭಾರತಕ್ಕೆ ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ಹೇಳಿದ್ದರು. ಹಲವರು ಬ್ರಿಟಿಷ್ ಸಾಮ್ರಾಜ್ಯವನ್ನು "ಮುಳುಗದ ಸೂರ್ಯ " ಎಂದು ಹೇಳಿದ್ದರು. ಆದರೆ ಭಾರತಾಂಬೆ ಇಂದು ಮುಕ್ತವಾಗಿಲ್ಲವೆ. ಹಾಗೆಯೇ ಇಂದಿನ ಮಠಾಧಿಪತಿಗಳು ಎಷ್ಟೇ ಧನವಂತರಿದ್ದರೂ, ಗೂಂಡಾಗಳಾಗಿದ್ದರೂ ನೀವು ವಚನ ವಾಙ್ಮಯವನ್ನು, ಲಿಂಗಾಯತ ಧರ್ಮವನ್ನು ನೀವು ಅವರಿಂದ ಮುಕ್ತಗೊಳಿಸುವಲ್ಲಿ ಯಶಸ್ವಿಯಾಗುತ್ತೀರಿ ಎಂದು ಅಚಲವಾಗಿ ನಂಬಿದ್ದೇನೆ. ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ, ನಾವು ಲಿಂಗಾಯತ ಧರ್ಮವನ್ನು ಮತ್ತು ವಚನ ವಾಙ್ಮಯ ತಾಯಿಯನ್ನು ಅವರಿಂದ ಕಸಿದುಕೊಂಡು ಬರಬೇಕಿಲ್ಲ. ಆದರೆ ಅವರನ್ನು ಇವುಗಳ ಹಿಡಿತದಿಂದ ದೂರಮಾಡಬೇಕಾಗಿದೆ.

ಹೆಸರು, ಊರು, ಬೇಡ

## ಕವನ

ಕಂಡಿರೇನ ಕ್ರಾಂತಿಯೋಗಿ ಪುರುಷನ
ಮಹಾಮಹಿಮ ಸಂಗನ ಬಸವಣ್ಣನ
ಜಾತಿ ಭೇದ ತೊರೆತು ಇಲ್ಲಿಗೆ ಬರುವರು
ಜೀವನದಲ್ಲಿ ಶಾಂತಿ ಸುಖವ ಬೇಡುವರು
ಜಾಜಿ, ಮಲ್ಲಿಗೆ, ಸಂಪಿಗೆ ಮಾಲೆ ತರುವರು
ಅಪ್ಪನ ಕೊರಳಿಗೆ ಹಾಕಿ ಪಾದಕೆ ಬೀಳುವರು ..... ಕಂಡಿರೇನ

ಕತ್ತಲೆಯಿಂದ ಬೆಳಕಿನೆಡೆಗೆ ಒಯ್ಯುವಾ
ಕಾಣಿರೆ ಅಪ್ಪನ ವಚನಗಳ ಸುರಿಮಳೆಯಾ
ಯೋಗಿ ಆಗಿ ಸಾಗಿ ಬಂದ ಗುರುವಿಗೆ
ಭಕ್ತಿ ಭಾವದಿಂದ ಬಾಗಿ ನಮಿಸುವಾ ..... ಕಂಡೀರೇನ

ಬಸವ ಧರ್ಮ ನಶಿಸಿ ಹೋಗಿದ್ದ ಮತ್ತೆ ಎತ್ತಿ ಹಿಡಿದು ತೋರಿದ
ಲಿಂಗಾನಂದ ಅಪ್ಪಾಜಿ
ಬಸವ ಧರ್ಮ ನಶಿಸಿ ಹೋಗಿದ್ದ ಮತ್ತೆ ಎತ್ತಿಹಿಡಿದು ತೋರಿದ ಮಾತಾಜಿ
ಕಂಡಿರೇನ ಕ್ರಾಂತಿಯೋಗಿ ಪುರುಷನ ಅವತಾರಪುರುಷನ ಪುಣ್ಯಕ್ಷೇತ್ರವ

-ಅಶೋಕ, ನಾಗರಾಳ್

**ಧರ್ಮಪಿತ ಬಸವಣ್ಣನವರ ವಚನಗಳು-ಅಮಿತ, ಅನುಪಮ, ಅನುಭವದ ಅಮರ ವಾಣಿಗಳು**



# ಧರ್ಮಪಿತರ ಕರೆಯೋಲೆ

ಮಮತೆಯ ಮಕ್ಕಳೇ,

ಸೃಷ್ಟಿಕರ್ತ ಲಿಂಗದೇವನ ಸ್ಮರಣೆಯೊಡನೆ ನಿಮಗೆಲ್ಲ ಶುಭಹಾರೈಕೆಗಳು. ನೀವುಗಳೆಲ್ಲ ನನ್ನ ಮಹಾಮನೆಯ ಮಕ್ಕಳು. ಲಿಂಗದೇವನ ಪ್ರೇರಣೆಯಂತೆ ನಾನು ಮರ್ತ್ಯದಲ್ಲಿ ಒಂದು ಮಹಾಮನೆಯನ್ನು ಕಟ್ಟಿದೆ. ಇದು ಕೇವಲ ಕಲ್ಲು-ಮಣ್ಣು-ಇಟ್ಟಿಗೆ-ಕಟ್ಟಿಗೆಗಳ ಭೌತಿಕ ಮನೆಯಲ್ಲ; ಒಂದು ತತ್ತ್ವ ಸಂಹಿತೆಯನ್ನು ಒಳಗೊಂಡ ಧರ್ಮದ ಮಹಾಮನೆ. ಈ ಮಹಾಮನೆಯನ್ನು ನಾನು ಇದ್ದ ಕಾಲದಲ್ಲಿಯೇ ನೀವು ಪ್ರವೇಶಿಸಿರಬಹುದು, ನಂತರದ ಶತಮಾನದಲ್ಲಿ ಪ್ರವೇಶಿಸಿರಬಹುದು. ಇತ್ತೀಚೆಗೆ ಬಂದಿರಬಹುದು, ಇಂದೇ ನಂಬಿಕೆಯ ಮೂಲಕ, ದೀಕ್ಷೆಯ ಮೂಲಕ ಬಂದಿರಬಹುದು. ಎಂದೇ ಬಂದಿರಲಿ ನೀವು ನನ್ನವರು. ನನ್ನವರೆಲ್ಲರೂ ಜಾತಿ ಮತ ಪಂಥ ವೃತ್ತಿ ವರ್ಗ ಅಂತಸ್ತು ಭೇದವಿಲ್ಲದೆ ಒಂದು ಕಡೆ ಸೇರಬೇಕೆಂಬುದೇ ನನ್ನಿಚ್ಛೆ.

ನಿಮಗೆ ಲೌಕಿಕವಾಗಿ ಸೇರುವುದು ಗೊತ್ತು. ಹೆಣ್ಣು ಮಕ್ಕಳಿಗೆ ತೌರುಮನೆಯಲ್ಲಿ ಆಗಾಗ ಸೇರುವುದೂ ಗೊತ್ತು. ತಾಯಿ-ತಂದೆ, ಅಕ್ಕ-ತಂಗಿ, ಅಣ್ಣ-ತಮ್ಮಂದಿರೊಡನೆ ನಲಿದಾಡಲು ಅದೆಂತಹ ಕಾತುರದಿಂದ ಕಾಯುವರು ಎಂಬುದು ನಿಮಗೆಲ್ಲ ಗೊತ್ತು. ಆದರೆ ಭಕ್ತಿ ಸಂಬಂಧದಿಂದ ಒಂದು ಕಡೆ ಸೇರಬೇಕು; ಈ ಸಂಬಂಧ ರಕ್ತ ಸಂಬಂಧಕ್ಕಿಂತಲೂ ಶ್ರೇಷ್ಠ ಎಂಬುದನ್ನು ಇನ್ನೂ ನೀವು ಬಹಳ ಜನ ಅರಿತಿಲ್ಲ; ಈಗಲಾದರೂ ಅರಿಯಬೇಕು.

ತಮ್ಮ ಮಕ್ಕಳು ತೌರಿಗೆ ಬರಬೇಕು; ಪ್ರೀತಿಪೂರ್ವಕವಾಗಿ ಸೋದರ-ಸೋದರಿಯರೊಡನೆ ಬೆರೆಯಬೇಕು; ತಮ್ಮನ್ನು ಗೌರವಿಸಬೇಕು; ತಂದೆ ತಾಯಿಯರ ವಾತ್ಸಲ್ಯದಲ್ಲಿ ಮೀಯಬೇಕು ಎಂದು ಯಾವ ತಂದೆ-ತಾಯಿ ಬಯಸರು? ಸೃಷ್ಟಿಕರ್ತನೆಂಬ ತಂದೆಯ, ಮಾತೃಹೃದಯಿಯಾದ ನನ್ನ ಇಚ್ಛೆಯು ಅದೇ ಆಗಿದೆ. ಇದನ್ನು ನೀವೇಕೆ ಅರ್ಥ ಮಾಡಿಕೊಳ್ಳುತ್ತಿಲ್ಲ? ಇಷ್ಟು ದಿನ ನಿಮಗೆಲ್ಲ ಅಂಥ ಅವಕಾಶವಿರಲಿಲ್ಲ. ಇದೀಗ ನನ್ನ ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ ನಡೆಯುವ ಶರಣ ಮೇಳ ಅಂಥ ಅವಕಾಶ ಕಲ್ಪಿಸಿದೆ. ಸಮಾನತೆ-ಸೋದರತ್ವ-ಸ್ವಾತಂತ್ರ ಇವು ನನ್ನ ತತ್ತ್ವದ ಮುಖ್ಯಮೂರು ಸೂತ್ರಗಳು. ಇಲ್ಲಿ ಅವು ಮೂರನ್ನು ಕಾಣಬಹುದು. ಅದಕ್ಕಾಗಿ ನಾನು ನಿಮಗೆ ಹಾರ್ದಿಕ ಆಹ್ವಾನ ನೀಡುತ್ತಿದ್ದೇನೆ. ನೀವೆಲ್ಲರೂ ಬನ್ನಿರಿ, ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಬನ್ನಿರಿ.

ಸೃಷ್ಟಿಕರ್ತ ಪರಮಾತ್ಮನೇ ನಮ್ಮೆಲ್ಲರ ತಂದೆ. ಒಂದೊಂದು ಕಾಲದಲ್ಲಿ ಒಬ್ಬೊಬ್ಬರನ್ನು ಲೋಕದ ಉದ್ಧಾರಕ್ಕಾಗಿ, ಜನರನ್ನು ಧರ್ಮ ಮಾರ್ಗಕ್ಕೆ ಕರೆತರಲು ಮಧ್ಯವರ್ತಿಗಳನ್ನಾಗಿ ಆಯ್ಕೆ ಮಾಡಿಕೊಂಡ. ಬುದ್ಧ, ಮೊಹಮ್ಮದ್, ಏಸು, ನಾನು ಎಲ್ಲ ಅಣ್ಣ ತಮ್ಮಂದಿರಂತೆ. ದೇವರೆಂಬ ತಂದೆಯ ಅವಿಭಾಜ್ಯ ಕಿರಣಗಳು. ದೇವರು ಪರಿಪೂರ್ಣನು, ನಿತ್ಯನು. ಅವನು ಸೀಮಿತರಾದ ತಾಯಿ ತಂದೆಗಳ ಹೊಟ್ಟೆಯಲ್ಲಿ ಹುಟ್ಟಿ ಬರುವುದಿಲ್ಲ ಮತ್ತು ಕರ್ತನು ಎಲ್ಲಿಯೋ ಒಂದು ಕಡೆ ಯಾವುದೋ ಲೋಕದಲ್ಲಿ ಸೀಮಿತನಾಗಿ ಇರುವುದಿಲ್ಲ. ಸೃಷ್ಟಿ-ಸ್ಥಿತಿ-ಲಯ- ತಿರೋಧಾನ ಎಂಬ ನಾಲ್ಕು ಕಾರ್ಯಗಳನ್ನು ತಾನು ಮಾಡಿ, ತಾನು ನೇರವಾಗಿ ಕೆಲವು ವ್ಯಕ್ತಿಗಳನ್ನು ಆಯ್ಕೆ

ಮಾಡಿಕೊಂಡು, ಅವರಲ್ಲಿ ತನ್ನ ಅದ್ಭುತವಾದ ಕಾರುಣ್ಯವನ್ನು ಅವತೀರ್ಣಗೊಳಿಸಿ, ಸಾಮರ್ಥ್ಯವನ್ನು ನೀಡಿ, ಲೋಕದ ಜನತೆಯನ್ನು ಅನುಗ್ರಹಿಸಿ ಮುನ್ನಡೆಸಲು ಅವಕಾಶ ನೀಡುವನು. ಸೃಷ್ಟಿಕರ್ತನ ಉದ್ದೇಶ ಲೋಕದ ಮಾನವರು ಲೋಕದ ತಂದೆಯಾದ ದೇವನನ್ನು ಅರಿಯಬೇಕು. ಅವನ ಪ್ರೀತಿಯ ಕಾರುಣ್ಯ ಜಲದಲ್ಲಿ ಮೀಯಬೇಕು ಎಂಬುದೇ ಆಗಿದೆ. ಹೀಗಾಗಿ ಎಲ್ಲ ಧರ್ಮಗಳ ಏಕಮೇವ ಧ್ಯೇಯವು ಸೃಷ್ಟಿಕರ್ತನೇ ಆಗಿದ್ದಾನೆ.

ಈ ಸತ್ಯವನ್ನು ಗ್ರಹಿಸುವಲ್ಲಿ ಸೀಮಿತ ಬುದ್ಧಿಯ ಮಾನವರು ಹಲವಾರು ತಪ್ಪುಗಳನ್ನು ಎಸಗಿ ಮೂಢನಂಬಿಕೆ, ಬಹುದೇವತೋಪಾಸನೆ ಮುಂತಾದುವನ್ನು ರೂಢಿಸಿಕೊಂಡಿದ್ದರೆ ಸಮಾಜವನ್ನು ಒಡೆದು ಆಳಬೇಕೆಂಬ ಸ್ವಾರ್ಥ ಬುದ್ಧಿಯ ಜನರು ಅತ್ಯಂತ ವಿಷಮ ರೀತಿಯ ವರ್ಗೀಕರಣವಾದ ವರ್ಣವ್ಯವಸ್ಥೆ, ಜಾತಿ ಪದ್ಧತಿಯನ್ನು ಹುಟ್ಟು ಹಾಕಿ ಪೋಷಿಸುತ್ತ ಬಂದು ಅನೇಕ ಅನಿಷ್ಟ ಪರಿಣಾಮಗಳಿಗೆ ಕಾರಣರಾದರು. ಶೋಷಣೆಯು ಅಗಾಧವಾಗಿ ಸೃಷ್ಟಿಯ ಅರ್ಧ ಅಂಗವಾದ ಮಹಿಳೆಯರನ್ನು ಒಳಗೊಂಡು ಬಹಳ ಜನರು ದೇವರು-ಧರ್ಮ-ಸಂಸ್ಕಾರ-ಧಾರ್ಮಿಕ ಹಕ್ಕು ; ಇವುಗಳಿಂದ ವಂಚಿತರಾದರು.

ಮಮತೆಯ ಮಕ್ಕಳೇ, ತಾನೇ ಸೃಷ್ಟಿಸಿದ ಈ ಜಗತ್ತು, ಮಾನವ ಸಮಾಜ ದಾರಿ ತಪ್ಪುತ್ತ ಹೊರಟು, ಮಾನವ ಸಮಾಜವನ್ನು ಅಂದಗೆಡಿಸಿದ್ದನ್ನು ಕಂಡು ನೊಂದ ಕರ್ತನು, ನನ್ನಲ್ಲಿ ಅನುಗ್ರಹ ಇಳಿಸಿ, ಸಮಾಜ ಸುಧಾರಣೆಗೆ ನನ್ನನ್ನು ಆಯ್ಕೆ ಮಾಡಿಕೊಂಡನು.

*ಕರ್ತನಟ್ಟಿದಡೆ ಮರ್ತ್ಯದಲ್ಲಿ ಮಹಾಮನೆಯ ಕಟ್ಟಿದೆ.*
*ಸತ್ಯ ಶರಣರಿಗೆ ತೊತ್ತು ಭೃತ್ಯನಾಗಿ ಸವೆದು ಬದುಕಿದೆನು*
*ಕರ್ತನ ಬೆಸನು ಮತ್ತೆ ಬರಲೆಂದಟ್ಟಿದಡೆ*
*ಲಿಂಗದೇವರ ನಿರೂಪಕ್ಕೆ ಮಹಾಪ್ರಸಾದವೆಂದೆನು*

ದೇವನ ಆಜ್ಞೆಯಂತೆ ನನ್ನ ಬದುಕು ನಡೆಯಿತು. ನಾನು ಆರಂಭಿಸಿದ ಸತ್ಯ ಸ್ಥಾಪನೆಯ ಕಾರ್ಯವನ್ನು ಅಸಂಖ್ಯಾತ ಶರಣರು ಮುಂದುವರಿಸಿದರು. ತಮ್ಮ ಪ್ರಾಣತೆತ್ತು ವಚನ ಸಾಹಿತ್ಯವನ್ನು ರಕ್ಷಿಸಿ, ನಿಮಗೆ ಅಮೂಲ್ಯ ಜ್ಞಾನ ಭಂಡಾರವನ್ನು ಕೊಟ್ಟಿದ್ದಾರೆ. ಮಾನವ ಸಮಾಜ ವರ್ಣ-ಜಾತಿ, ವರ್ಗ-ಅಂತಸ್ತು, ಮತ-ಪಂಥ, ಬಣ್ಣ-ಲಿಂಗ ಭೇದಗಳಿಂದ ಅಸಮಾನತೆಯನ್ನು ಸೃಷ್ಟಿಸಿರುವುದನ್ನು ಕಂಡು ಇವೆಲ್ಲವುಗಳಿಂದ ಹೊರತಾದ "ಗಣಧರ್ಮ"ವನ್ನು ನಾನು ಕೊಟ್ಟಿದ್ದೇನೆ. ಇಂದು ನೀವು ಕೆಲವರು ಹುಟ್ಟಿನಿಂದಲೇ ಲಿಂಗವಂತರಾಗಿರಬಹುದು. ನಿಮ್ಮ ತಾಯಿ ತಂದೆ ಲಿಂಗವಂತರಾದ ಕಾರಣ. ಆದರೆ ಇದು ನನ್ನ ಆಶಯವಲ್ಲ. ಏಕೆಂದರೆ ಹುಟ್ಟಿನಿಂದ ಬರುವುದು ಜಾತಿ, ಸಂಸ್ಕಾರದಿಂದ ಬರುವುದು ಧರ್ಮ. ನೀವು ಸಂಸ್ಕಾರ ಹೊಂದಿ ಧರ್ಮಾಚರಣೆಯಿಂದ ಲಿಂಗವಂತರಾಗಬೇಕೇ ಹೊರತು, ಯಾವ ಸಂಸ್ಕಾರವನ್ನೂ ಹೊಂದದೆ ಜಾತಿಯಿಂದ ಲಿಂಗವಂತರು ಎಂದು ಹೇಳಿಕೊಳ್ಳುವುದು ನನಗೆ ಸಮ್ಮತವಾಗದ ವಿಷಯ. ನನ್ನ ತತ್ತ್ವ ಸಂಹಿತೆ ಯಾವುದೇ ಒಂದು ಜಾತಿ ವರ್ಣಕ್ಕೆ ಸೀಮಿತವಾಗದ 'ಗಣಧರ್ಮ'ವಾದ್ದರಿಂದ ಈ ಮಾರ್ಗವನ್ನು ಯಾರು ಬೇಕಾದರೂ ಸ್ವೀಕರಿಸಬಹುದು. ಹಾಗೆ ಸ್ವೀಕರಿಸಿದವರನ್ನು ಪ್ರೀತಿಯಿಂದ ನೀವು ಸ್ವಾಗತಿಸಿ ಬರಮಾಡಿಕೊಂಡು, ಸಮರಸ ಮಾಡಿಕೊಳ್ಳಬೇಕು.

ಇಂಥ ಸಾಮರಸ್ಯ ಮೂಡಬೇಕಾದರೆ ನೀವು ಆಗಾಗ ಒಂದೆಡೆ ಸೇರಬೇಕು.



*ಕಾಗೆಯೊಂದಗುಳ ಕಂಡಡೆ*
*ಕರೆಯದೆ ತನ್ನ ಬಳಗವೆಲ್ಲವ?*
*ಕೋಳಿ ಒಂದು ಕುಟುಕ ಕಂಡಡೆ*
*ಕೂಗಿ ಕರೆಯದೆ ತನ್ನ ಕುಲವನೆಲ್ಲವ?*
*ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದರೆ*
*ಆ ಕಾಗೆ ಕೋಳಿಯಿಂದ ಕರಕಷ್ಟ ಲಿಂಗದೇವಾ.*

ಸೃಷ್ಟಿಕರ್ತನನ್ನು ಇಷ್ಟಲಿಂಗ ರೂಪದಲ್ಲಿ ನಿತ್ಯವೂ ಆರಾಧಿಸಿರಿ. ಇದು ವೈಯಕ್ತಿಕ ಆತ್ಮೋದ್ಧಾರಕ್ಕಾಗಿ. ಸಂಸ್ಕಾರ ಮತ್ತು ಸಂಘಟನೆಗಾಗಿ ಸಮುದಾಯ ಜೀವನದ ಸೂತ್ರಗಳಾಗಿ ಸಾಮೂಹಿಕ ಪ್ರಾರ್ಥನೆಯನ್ನು ಅಳವಡಿಸಿಕೊಳ್ಳಿರಿ.

**ಕೌಟುಂಬಿಕ ಪ್ರಾರ್ಥನೆ:** ಪ್ರತಿಯೊಬ್ಬ ವ್ಯಕ್ತಿಯ ಆತ್ಮೀಯ ವಲಯವೆಂದರೆ ಕುಟುಂಬ. ಕುಟುಂಬದವರೆಲ್ಲ ಕುಳಿತು ವಾರಕ್ಕೊಮ್ಮೆಯಾದರೂ ಸಾಮೂಹಿಕವಾಗಿ ಇಷ್ಟಲಿಂಗಾರ್ಚನೆ ಮಾಡಿರಿ. ಈ ಮೂಲಕ ಕೌಟುಂಬಿಕ ಸೌಹಾರ್ದತೆ ಬೆಳೆಯುವುದೇ ಅಲ್ಲದೆ ಎಲ್ಲರಲ್ಲೂ ಧರ್ಮಶ್ರದ್ಧೆ ಗಾಢವಾಗುವುದು. ದಿನ ನಿತ್ಯ ಸಂಜೆಯ ವೇಳೆಯಲ್ಲಿ ಹತ್ತು ಹದಿನೈದು ನಿಮಿಷ ಕಾಲವಾದರೂ ಮನೆಮಂದಿಯೆಲ್ಲ ಕುಳಿತು, ನೆನಹು ಸಂಜೆಯ ಪ್ರಾರ್ಥನೆ ಮಾಡಿರಿ.

**ವಾರದ ಪ್ರಾರ್ಥನೆ :** ಸಮುದಾಯ ಜೀವನದ ಶ್ರೇಷ್ಠ ಸೂತ್ರವೆಂದರೆ ಸಾಮೂಹಿಕ ಪ್ರಾರ್ಥನೆ. ವಾರಕ್ಕೊಮ್ಮೆ ಒಂದು ಸ್ಥಳದಲ್ಲಿ ಧರ್ಮಾನುಯಾಯಿಗಳು ಸೇರಿ ಸಾಮೂಹಿಕ ಪ್ರಾರ್ಥನೆ ಮಾಡಿ, ನಂತರ ವಚನಾನುಭವಗೋಷ್ಠಿ ಮಾಡಿರಿ. ಸೃಷ್ಟಿಕರ್ತನನ್ನು ಭಜಿಸಿ ಪ್ರಾರ್ಥಿಸಿ, ಸ್ತುತಿಸುವ ಮೂಲಕ ಅವನಿಗೆ ಕೃತಜ್ಞತೆ ಸಲ್ಲಿಸಿರಿ.

**ನೆನಹು :** ಪ್ರತಿದಿನ ಸಂಜೆ ೭ ಘಂಟೆಗೆ ಸರಿಯಾಗಿ ನೀವು ಎಲ್ಲಿಯೇ ಇದ್ದರೂ ಆ ಸ್ಥಳದಲ್ಲಿ ಐದು ನಿಮಿಷಗಳ ಪ್ರಾರ್ಥನೆಯನ್ನು ವೈಯಕ್ತಿಕವಾಗಿಯಾಗಲಿ ಸಾಮೂಹಿಕವಾಗಿಯಾಗಲಿ ಅಳವಡಿಸಿಕೊಂಡು ತಪ್ಪದೆ ಮಾಡಿರಿ.

**ಗಣ ಮೇಳ :** ನನ್ನ ವಚನಗಳನ್ನು ಗಮನಿಸಿರಿ. ಗಣ ಮೇಳಾಪಕ್ಕೆ ಎಷ್ಟು ಒತ್ತು ಕೊಟ್ಟಿದ್ದೇನೆ ನೋಡಿರಿ. ಪಕ್ಷಿಗಳು ಸಮೂಹ ಜೀವನವನ್ನು ಇಷ್ಟ ಪಡುತ್ತವೆ. ಆನೆಗಳು ಬಲಿಷ್ಠ ಪ್ರಾಣಿಗಳು, ಆದರೂ ಗುಂಪುಗೂಡಿಯೆ ಬದುಕಲು ಇಷ್ಟಪಡುತ್ತವೆ. ಸಮೂಹವನ್ನು ತೊರೆದ ಮದವೇರಿದ ಸಲಗ ಎಷ್ಟು ಉನ್ಮತ್ತವಾಗಿ ವರ್ತಿಸುವುದೋ ಹಾಗೆ ಸಮಾಜದಿಂದ ಬೇರೆಯಾಗುವ ವ್ಯಕ್ತಿ ಸಹ ಪ್ರೇಮ ಸ್ವಭಾವವನ್ನು ತೊರೆದು ವಿಕೃತ ಮನಸ್ಕನಾಗುವನು. ಆಯಾ ಊರುಗಳಲ್ಲಿರುವ ಧರ್ಮ ಬಾಂಧವರು ಧಾರ್ಮಿಕ ಭ್ರಾತೃತ್ವ ಭಾವ ಬೆಳೆಸಿಕೊಂಡು ವರ್ಷದಲ್ಲಿ ಒಂದು ದಿನವಾದರೂ ಒಟ್ಟುಗೂಡಿ ಪ್ರಾರ್ಥನೆ-ಪೂಜೆ ಮಾಡಿರಿ. ಶಿವರಾತ್ರಿ- ಯಂದು ಬೆಳಿಗ್ಗೆ ವಿಶಾಲವಾದ ಮೈದಾನಗಳಲ್ಲಿ ಧರ್ಮಬಾಂಧವರೆಲ್ಲ ಸೇರಿ ಗಣ ಮೇಳದಲ್ಲಿ ಭಾಗಿಗಳಾಗಿರಿ.

**ಶರಣ ಮೇಳ :** ವ್ಯಕ್ತಿಯು ವೈಯಕ್ತಿಕ ಪೂಜೆ ಮಾಡುವುದು. ಕುಟುಂಬದವರೆಲ್ಲ ಒಂದಡೆ ಸೇರಿ ಪ್ರಾರ್ಥಿಸುವುದು ನಿತ್ಯ ವಿಧಿಗಳು. ಸಾಮೂಹಿಕ ಪ್ರಾರ್ಥನೆ ವಾರಕ್ಕೊಮ್ಮೆ ನಡೆಯುವುದಾದ್ದರಿಂದ, ವಿವಿಧ ಬಡಾವಣೆ ಪ್ರದೇಶಗಳ ಜನರು ಅಲ್ಲಲ್ಲೇ ಕಲೆತು ಅದನ್ನು

ಮಾಡುವರು. 'ಗಣ ಮೇಳ'ವು ಆಯಾ ಗ್ರಾಮ, ಊರು, ನಗರಗಳ ಧರ್ಮಬಾಂಧವರನ್ನು ಒಂದೆಡೆ ತರಲು ನೆರವಾಗುವುದು. ಇನ್ನು ಪ್ರಾದೇಶಿಕತೆ, ಭಾಷೆ, ಮುಂತಾದ ಎಲ್ಲ ಸೀಮೆಗಳನ್ನು ದಾಟಿ ಧಾರ್ಮಿಕ ಸೂತ್ರದ ಮೇಲೆ ನಮ್ಮ ತತ್ತ್ವಾನುಯಾಯಿಗಳನ್ನು ಬೆಸೆಯುವ ಸೂತ್ರವೇ ಶರಣ ಮೇಳ. ಆದ್ದರಿಂದ ನಿಮ್ಮ ಎಲ್ಲ ಕೆಲಸ ಕಾರ್ಯಗಳನ್ನು ಬದಿಗೊತ್ತಿ ಕೂಡಲ ಸಂಗಮಕ್ಕೆ ಧಾವಿಸಿ ಬಂದು ಜನವರಿ ೧೨ ರಿಂದ ೧೫ ರವರೆಗೆ ನಡೆಯುವ ಶರಣ ಮೇಳದಲ್ಲಿ ನೀವು ತಪ್ಪದೇ ಭಾಗಿಗಳಾಗಿರಿ.

ಸತ್ಯ ಸ್ಥಾಪನೆಗಾಗಿ, ಸಮಾನತೆಯ ಅನುಷ್ಠಾನಕ್ಕಾಗಿ ನಾವುಗಳೆಲ್ಲರೂ ಮಾಡಿದ ತ್ಯಾಗವನ್ನು ನೀವು ಮರೆಯಬಾರದು. ನಮ್ಮ ಅಂತಃಕರಣ ಪೂರ್ವಕ ಕಳಕಳಿಯನ್ನು ಪ್ರಾಂಜಲ ಮನಸ್ಸಿನಿಂದ ಅರಿಯಬೇಕು. ಜಗಬದುಕಲೆಂದು ಜನ ಬದುಕಲೆಂದು ವಚನ ವಾಙ್ಮಯವನ್ನು ಹೋರಾಡಿ ರಕ್ಷಿಸಿದ ಅಕ್ಕನಾಗಲಾಂಬಿಕೆ- ಮಡಿವಾಳ ಮಾಚಯ್ಯ-ಚನ್ನಬಸವಣ್ಣ ಮುಂತಾದವರ ಹೋರಾಟ ನಿಮ್ಮನ್ನು ಎಚ್ಚರಿಸದೆ? ಸಮಾನತೆಯ ಧ್ವಜವನ್ನು ಹಾರಿಸಲಿಕ್ಕಾಗಿ ಹರಳಯ್ಯ-ಮಧುವಯ್ಯ -ಶೀಲವಂತರು ಮಾಡಿದ ಪ್ರಾಣಾರ್ಪಣೆ, ಬಲಿದಾನ ನಿಮ್ಮ ಅಂತಃಕರಣವನ್ನು ಕಲಕದೆ?

ಹೆತ್ತ ತಂದೆ ಬಯಸುವುದೇನನ್ನು? ತನ್ನ ಮಕ್ಕಳೆಲ್ಲರೂ ಒಂದೆಡೆ ಸೇರಿ ಹಾಡಿ ಪಾಡಿ ನಲಿಯಬೇಕೆಂದು ತಾನೆ? ಅದೇ ನನ್ನ ಬಯಕೆ ಸಹ. ತೌರಿಗೆ ಬಂದರೆ ಏನು ಸಿಗುತ್ತದೆ ಎಂದು ನಿಮ್ಮ ಪ್ರಶ್ನೆಯೆ? ಜ್ಞಾನದ ವಸ್ತ್ರವನ್ನು ನನ್ನ ಪ್ರತಿನಿಧಿಗಳಾದ ಬೋಧಕರು ಉಡಿಸುವರು, ಸದ್ಗುಣಗಳ ಆಭರಣ ತೊಡಿಸುವರು. ವಚನ ಜ್ಞಾನದ ಸಂಪದವನ್ನು ಉಡಿ ತುಂಬಿ ಕಳಿಸುವರು ಐಹಿಕ ಜಗತ್ತಿನಲ್ಲಿ ನನಗೆ ಮೆಚ್ಚುಗೆಯಾಗುವಂತೆ ನೀವು ಹೇಗೆ "ಒಗೆತನವ" ಮಾಡಬೇಕೆಂಬುದನ್ನು ಕಲಿಸಿ ಕಳಿಸುವರು.

ಷಡಂಗ ದಾಸೋಹ ಮಾಡಿರಿ, ತನು-ಮನ-ಧನ-ಪ್ರಾಣ-ಅಭಿಮಾನ-ಸಮಯ; ಈ ಆರನ್ನೂ ಮೀಸಲಿರಿಸಿ ನಮ್ಮ ತತ್ತ್ವಗಳ ಪಾಲನೆಗಾಗಿ ಶ್ರಮಿಸಿರಿ. ಸಮಷ್ಟಿಯ ಉದ್ಧಾರಕ್ಕಾಗಿ ವೈಯಕ್ತಿಕ ಅಹಂಕಾರ-ಪ್ರತಿಷ್ಠೆ ತೊರೆಯಿರಿ. ಅನುಭವ ಮಂಟಪದ ಮೂಲಕ ನಾವು ಬೋಧಿಸಿದ ಮೌಲ್ಯಗಳು ಅನುಷ್ಠಾನಕ್ಕೆ ಬರದಿರಲು ಪರಸ್ಪರರ ಸ್ವಾರ್ಥ, ಅಹಂಕಾರ-ಪ್ರತಿಷ್ಠೆಗಳೇ ಕಾರಣ ಎಂಬುದನ್ನು ಈಗಲಾದರೂ ಅರಿತುಕೊಳ್ಳಿರಿ.

ನಿಮ್ಮನ್ನು ಯಾರಾದರೂ ಶರಣ ಮೇಳಕ್ಕೆ ಆಹ್ವಾನಿಸಬೇಕೆಂದು, ಕರೆ ಕಳುಹಿಸಬೇಕೆಂದು ನಿರೀಕ್ಷಿಸುವಿರೋ? ಕೂಡದು. ನದಿಯು ನಿರಂತರವಾಗಿ ಹರಿಯುತ್ತಿರುತ್ತದೆ; ಆದರಿಂದ ಯಾರು ಬೇಕಾದರೂ ನೀರನ್ನು ತುಂಬಿಕೊಳ್ಳಬಹುದು. ಹಾಗೆಯೇ ಶರಣ ಮೇಳದಲ್ಲಿ ವಚನ ವಾಙ್ಮಯ ಗಂಗೆ ಹರಿಯುತ್ತಿರುತ್ತಾಳೆ. ಬನ್ನಿ, ನಿಮ್ಮ ಹೃದಯ-ಮನ-ಬುದ್ಧಿ ಹಿಡಿಯುವಷ್ಟು ತುಂಬಿಕೊಳ್ಳಿರಿ. ನೀವು ನನಗಾಗಿ, ನಮ್ಮ-ನಿಮ್ಮೆಲ್ಲರ ತಂದೆಯಾದ ದೇವನನ್ನು ಆರಾಧಿಸಲು ಬರುತ್ತೀರೆಂದು ನಾನು ಸದಾ ನಿರೀಕ್ಷಿಸುತ್ತ ವಾತ್ಸಲ್ಯಪೂರ್ಣವಾಗಿ ನಿಮಗೆ ಈ ಆಹ್ವಾನ ನೀಡಿರುವೆನು.

ನಿಮ್ಮ ಪ್ರೀತಿಯ ತಂದೆ- **ಬಸವಣ್ಣ**

**(ಗ್ರಹಿಸಿದವರು, -ಬಸವಾತ್ಮಜೆ ಮಾತಾಜಿ)**



# ಜನಗಣತಿ ಕುರಿತು ಶರಣ.ಜಯದೇವ ಅವರ ಪತ್ರ

(ರಾಜ್ಯ ಪ್ರಗತಿ ಎಂಬ ಪತ್ರಿಕೆಯ 25-9-2000ದ ಸಂಚಿಕೆಯಲ್ಲಿ ಶರಣ. ಮ.ಜಯದೇವ ಎಂಬುವವರು ಒಂದು ಲೇಖನ (ಪತ್ರ ಬರಹ)ಮುದ್ರಣಗೊಂಡಿದೆ. ಲಿಂಗಾಯತ ಧರ್ಮವನ್ನು ಪ್ರವೇಶಿಸಿ ಅನೇಕ ವರ್ಣ ಜಾತಿ ಜನಾಂಗಗಳವರು ತಮ್ಮ ಜೀವನವನ್ನು ಸಾರ್ಥಕಗೊಳಿಸಿಕೊಂಡಿದ್ದಾರೆ. ಎಲ್ಲರಿಗೂ ಧರ್ಮ ಸಂಸ್ಕಾರ ಕೊಡುವ ಧರ್ಮಗಳು ಮೈದಳೆದಾಗ ಅನೇಕ ಜಾತಿ ಮತ ಪಂಥಗಳವರು ಧರ್ಮದೀಕ್ಷೆ ಪಡೆದು ತಮ್ಮ ಪೂರ್ವಾಶ್ರಯ ಮರೆಯುವುದು ಸ್ವಾಭಾವಿಕ. ಆದರೆ ಇತ್ತೀಚೆಗೆ ಕೆಲವು ಸಂಕುಚಿತ ಜನರು ವಿಶಾಲವಾದ, ಧಾರ್ಮಿಕತೆ ಬಿಟ್ಟು ಪುನಃ ಜಾತಿಯ ಸೀಮಿತ ಚೌಕಟ್ಟಿಗೆ ತಮ್ಮ ತಮ್ಮ ಜನರನ್ನು ಒಳಪಡಿಸುವ ತಂತ್ರಗಳನ್ನು ಮಾಡುತ್ತಾರೆ.

ಇಂಥ ಎಲ್ಲ ಜಾತಿಗಳವರಿಗೆ ಶರಣ. ಜಯದೇವ ಅವರ ಲೇಖನದಲ್ಲಿ ಸೂಕ್ತ ಬುದ್ಧಿವಾದವಿದೆ. ಆದಕ್ಕಾಗಿ ಲೇಖನವನ್ನು ಪ್ರಕಟಿಸಲಾಗಿದೆ. ರಾಜ್ಯ ಪ್ರಗತಿ ಪತ್ರಿಕೆಗೆ ಧನ್ಯವಾದಗಳು. ಸಂಪಾದಕರು.)

ಪುರಾಣಗಳ ಆಧಾರದಿಂದ 'ನಗರ್ತ ಜನಾಂಗ' ಸೃಷ್ಟಿಕರ್ತ ಬ್ರಹ್ಮನ ಸೊಂಟದಿಂದ ಉದಯಿಸಿದವರೆಂದೂ ಹಾಗೂ ಈ ಜನಾಂಗದ ಸುಧರ್ಮನೆನ್ನುವವನು ದೇವಲೋಕದ ಅಪ್ಸರೆಯ ಮಾನಭಂಗಕ್ಕೆಳಸಿ ಬ್ರಹ್ಮನ ಕುಪಿತಕ್ಕೊಳಗಾಗಿ ತಾನೂ ಹಾಗೂ ತನ್ನ ಜನಾಂಗವೆಲ್ಲ ನಾಶವಾಗಲಿಕ್ಕೆ ಕಾರಣನಾಗುವನೆಂಬುದು, ದೇವಾನುದೇವತೆಗಳು ಬ್ರಹ್ಮನನ್ನು ಬೇಡುವುದು, ಬ್ರಹ್ಮನ ಆದೇಶದಂತೆ 'ವಲ್ಕಲ'ನೆಂಬುವ ಋಷಿಯು ಗರಿಕೆ ಹುಲ್ಲಿನಿಂದ ಸಹಸ್ರ ಋಷಿಗಳನ್ನು ಸೃಷ್ಟಿಸಿ ಭೂಲೋಕಕ್ಕೆ ಕಳುಹಿಸುವುದು. ಅದರಿಂದಾಗಿ ಈ ನಗರ್ತ ಜನಾಂಗ ಉದ್ಭವಿಸಿ ಅಯೋಧ್ಯೆಯಲ್ಲಿ ನೆಲೆಸಿ, ನಂತರ ತಮಿಳುನಾಡು ಹಾಗೂ ಕರ್ನಾಟಕಗಳಿಗೆ ವಲಸೆ ಬಂದು ನೆಲೆಸುತ್ತಾರೆಂಬ, ಲೇಖನ ಓದಿ ಈ ವೈಜ್ಞಾನಿಕ ಯುಗದಲ್ಲಿಯೂ ಈ ರೀತಿ 'ಕಾಗಕ್ಕ-ಗುಬ್ಬಕ್ಕ' ಕಥೆಗಳನ್ನು ಹೆಣೆಯುತ್ತಾ ಈ ನಗರ್ತ ಜನಾಂಗಕ್ಕೆ ತಿಳಿಸುತ್ತಿರುವುದನ್ನು ನೋಡಿ ಚೋದ್ಯವೆನಿಸುತ್ತದೆ.

ತಾಯಿ ತಂದೆಗಳ ಗರ್ಭದಿಂದಲ್ಲದೆ ಬೇರೆ ರೀತಿ, ಹುಟ್ಟಲಿಕ್ಕೆ ಸಾಧ್ಯವಿಲ್ಲ. ಇದು ವೈಜ್ಞಾನಿಕ ಪರಮ ಸತ್ಯ, ಜನಾಂಗ ವಾಚಕವಾಗಿಯಾಗಲಿ, 'ನಗರತ್ತಾರ್' ಎಂದರೆ ನಗರದವರು ಎಂದು ಬಂದಿರಬಹುದು. ಅಥವಾ 'ನಗರತರು' ಅಂದರೆ, ಈ ಜನಾಂಗದವರು ಬೇರೆ ಬೇರೆ ಜಾಗಗಳಿಂದ ಸಿಗುವ ಜೀವನಾವಶ್ಯಕ ವಸ್ತುಗಳನ್ನು ತಂದು ಊರಿನವರಿಗೆ ವ್ಯಾಪಾರದ ಮೂಲಕ ವಿತರಿಸುತ್ತಿದ್ದರೆಂಬ ಕಾರಣದಿಂದ ಕಾಯಕ ವಾಚಕವಾಗಿಯಾಗಿಯೂ ಬಂದಿರಬಹುದು.

ಶೈವ ಮಾರ್ಗದಲ್ಲಿದ್ದ ಈ ಜನಾಂಗದವರು ಕರ್ನಾಟಕಕ್ಕೆ ಬಂದಾಗ ಇಲ್ಲಿ ವಿಶ್ವಗುರು ಬಸವಣ್ಣನವರಿಂದ ಸಂಸ್ಥಾಪಿಸಲ್ಪಟ್ಟ, ಲಿಂಗವಂತ ಧರ್ಮ ಉಚ್ಛ್ರಾಯ ಸ್ಥಿತಿಯಲ್ಲಿರುತ್ತದೆ. ಈ ಧರ್ಮದ ಆಚಾರ-ವಿಚಾರ, ಕಾಯಕ-ದಾಸೋಹತತ್ತ್ವ, ಜಾತಿ, ಭೇದಗಳಿಲ್ಲದೆ ಎಲ್ಲರನ್ನೂ, ಎಂಥವರನ್ನೂ ಇಂಬಿಟ್ಟುಕೊಂಡು ಬದುಕುತ್ತಿರುವುದನ್ನು ಕಂಡು ವಲಸಿಗರಾಗಿ ಬಂದು ನಗರ್ತ ಜನಾಂಗವು ಲಿಂಗವಂತ ಧರ್ಮವನ್ನಾಶ್ರಯಿಸುತ್ತದೆ. ಇಷ್ಟಲಿಂಗಧಾರಿಗಳಾಗಿ ಲಿಂಗಾಯತ ಸಮಾಜದಲ್ಲಿ ಮಿಳಿತವಾಗಿ ತಾವು ಕಾಯಕದಿಂದ ಗಳಿಸಿದ್ದರಲ್ಲಿ ಸಮಾಜಕ್ಕೆ ಉಪಯೋಗವಾಗುವಂತಹ ಕಾರ್ಯಗಳಿಗೂ ನೀಡಿ ಧನ್ಯರಾಗಿ ತಮ್ಮ ಬಾಳನ್ನು ಸಾಗಿಸುತ್ತಾ ಬಂದಿರುತ್ತಾರೆ.

ಆದಿ ಗುರುರಾಯನು ಭೇದಿಸಿ ಲಿಂಗವ ಕೊಟ್ಟಾ
ಮೂದೇವರೊಡೆಯ । ಮೂಜಗದ ಕರ್ತನೇ
ಆದಿ ಗುರು [illegible] ॥

ಆದಿಗುರು ಬಸವಣ್ಣನವರಿಂದ ಭೇದಿಸಿ ಬಂದಂತಹ ಈ ಇಷ್ಟಲಿಂಗ ಧರಿಸಿದಂತಹ ನಗರ್ತ ಜನಾಂಗದವರಾದ ನಾವು ಈ ಧರ್ಮಕ್ಕೆ ಪೂರಕವಾಗಿ ನಡೆದುಕೊಳ್ಳಬೇಕಾದುದು ಕರ್ತವ್ಯ.

ಹಿಂದೂ ಧರ್ಮವೆನ್ನುವುದೆ ಅಸಂಬದ್ಧವಾಗಿದೆ. ಬಂಜೆಯ ಮಗನ ಹೆಸರನ್ನು ಹೇಳಿದಂತಿದೆ. ಹಿಂದೂ ಪದ ಜನಾಂಗ ವಾಚಕ ಅಥವಾ ಸಾಂಸ್ಕೃತಿಕ ವಾಚಕವೇ ವಿನಃ ಧರ್ಮ ವಾಚಕವಲ್ಲ. ದುರ್ದೈವದಿಂದಾಗಿ ಇದು ಬ್ರಿಟಿಷರ ಕಾಲದ ಜನಗಣತಿಯಲ್ಲಿ ಧರ್ಮವಾಚಕವಾಗಿ ದಾಖಲಾಗಿರುತ್ತೆ. ಈ ದೇಶವನ್ನು ಹಿಂದೆ ಭರತ ಖಂಡ - ಭರತವರ್ಷ- ಭರತಕಾಲವೆಂದು ಕರೆಯುತ್ತಿದ್ದುದು ತಿಳಿದು ಬರುತ್ತೆ. ಸಿಂಧೂ ನದಿಯ ಈ ಭಾಗದಲ್ಲಿದ್ದವರನ್ನು ಸಿಂಧುಗಳು ಎನ್ನುತ್ತಿದ್ದುದು ಕ್ರಮೇಣ ಹಿಂದೂಗಳು ಎಂದಾಗಿರುತ್ತೆ.

ಈ ದೇಶದಲ್ಲಿ, ಜನ್ಮತಳೆದ, ಬೌದ್ಧ ಜೈನ, ವೈದಿಕ, ಲಿಂಗಾಯತ, ಸಿಖ್ ಮುಂತಾದ ಧರ್ಮಗಳೆಲ್ಲವೂ ಹಿಂದೂ ಧರ್ಮಗಳೇ ! 'ಓಂಕಾರ'ವನ್ನು ಒಪ್ಪಿ ಹಿಂದೂ ರಾಷ್ಟ್ರದಲ್ಲಿ ಜನ್ಮಿಸಿರುವ ಧರ್ಮಗಳೆಲ್ಲವೂ ಹಿಂದೂ ಧರ್ಮಗಳೇ, ಆದರೆ ಈಗ ವೈದಿಕ ಪುರೋಹಿತಶಾಹಿ ಧರ್ಮವನ್ನೇ ಹಿಂದೂ ಧರ್ಮವೆಂದು ವ್ಯಾಖ್ಯಾನಿಸಲಾಗುತ್ತಿದೆ. ಇದರ ಪ್ರಕಾರ ಜನಿವಾರ ಧಾರಣೆಯೇ ಧರ್ಮ ಎನ್ನಿಸಿಕೊಳ್ಳುತ್ತದೆ. ಇದಿಲ್ಲದವರು ಶೂದ್ರವರ್ಗಕ್ಕೆ ಸೇರ್ಪಡೆಯಾಗುತ್ತಾರೆ. ಇದರಲ್ಲೂ ಶ್ರೇಣಿಕೃತವಾಗಿ ವರ್ಗೀಕರಿಸಲಾಗಿದೆ. ಬ್ರಾಹ್ಮಣ-ಒಂದನೇ ವರ್ಗ, ಕ್ಷತ್ರಿಯ-ಎರಡನೇ ವರ್ಗ, ವೈಶ್ಯ-ಮೂರನೇ ವರ್ಗ- ಈ ಮೂರು ವರ್ಗಕ್ಕೆ ಜನಿವಾರಧಾರಣೆಯ ಹಕ್ಕುಂಟು. ಇನ್ನುಳಿದ ನಿಜವಾದ ಕಾಯಕ ಜೀವಿಗಳನ್ನು ಶೂದ್ರರೆಂದು ಧರ್ಮ ಬಾಹಿರರನ್ನಾಗಿಯೂ, ಕಡೆಯದಾಗಿ ಹೊಲೆ-ಮಾದಿಗರನ್ನಂತೂ ಮಾನವರೆಂದೇ ಪರಿಗಣಿಸದೆ ಪಶುಗಳಿಗಿಂತಲೂ ಕೀಳಾಗಿ ಅಸ್ಪೃಶ್ಯರೆಂದೂ ವರ್ಗೀಕರಿಸಿರುವುದು ಕಾಣಬರುತ್ತದೆ.

ಮೇಲಿನ ಎಲ್ಲಾ ವಿಚಾರಗಳಿಂದ ತಿಳಿದು ಬರುವುದೇನೆಂದರೆ, ನಗರ್ತ ಜನಾಂಗ ಹಿಂದೂ ಧರ್ಮವಲ್ಲ, ಶೂದ್ರ ಜನಾಂಗವಾಗಿ ಕಾಣಬರುತ್ತದೆ. ಸ್ವತಂತ್ರ ಲಿಂಗವಂತ ಧರ್ಮಕ್ಕೆ ಬಂದು ತಮ್ಮ ಹಿಂದಿನ ಹಾಗೂ ಹುಟ್ಟಿನ ಶೂದ್ರತ್ವವನ್ನು ಕಳೆದುಕೊಂಡು 'ಲಿಂಗಾಯತ ಧರ್ಮಿ'ಯರೆನಿಸಿದ್ದಾರೆ. ಇವರುಗಳೆಲ್ಲರೂ ಧಾರ್ಮಿಕವಾಗಿ ಸರಿಸಮಾನರು. ಬಸವಣ್ಣನವರೆನ್ನುವಂತೆ -'ಹಾರುವ ಮೊದಲ್ಗೊಂಡು ಅಂತ್ಯಜ ಕಡೆಯಾಗಿ ಶಿವಭಕ್ತರೆಲ್ಲರ ಒಂದೆ ಎಂಬೆನು' ಎನ್ನುವಂತೆ ಲಿಂಗಧಾರಿಗಳಲ್ಲಿ ಮೇಲು-ಕೀಳು ಇಲ್ಲದೆ ಸರಿಸಮಾನತೆ ಇರುತ್ತದೆ.

ಆದ್ದರಿಂದ ಸಮಾಜ ಬಾಂಧವರೇ, ಹತ್ತು ವರ್ಷಗಳಿಗೊಮ್ಮೆ ಬರುವ ಜನಗಣತಿಯಲ್ಲಿ ನಂ.7 ಧರ್ಮ ಎಂಬ ಕಾಲಂನಲ್ಲಿ ಲಿಂಗಾಯತ ಎಂದೇ ಬರೆಸಬೇಕಾಗಿ ಪ್ರಾರ್ಥಿಸುತ್ತೇನೆ. ಈ ಜನಗಣತಿಯಲ್ಲಿ ಎಲ್ಲಿಯೂ ಜಾತಿಯನ್ನು ಕೇಳಿರುವುದಿಲ್ಲ. ನಿಮ್ಮಗಳ ಧರ್ಮ ಯಾವುದೆಂದು ಮಾತ್ರ ಕೇಳುತ್ತಾರಾದ ಕಾರಣ ನಾವುಗಳೆಲ್ಲರೂ ಇಷ್ಟಲಿಂಗಧಾರಿಗಳಾಗಿರುವ ಕಾರಣ 'ಲಿಂಗಾಯತ' ಎಂದು ಪ್ರಾಮಾಣಿಕವಾಗಿ ಬರೆಸಬೇಕು.

ನಮ್ಮ ಜನಾಂಗದ ಹಿರಿಯರು ಸರ್ವಜನಪ್ರಿಯರಾಗಿ ಸಕಲ ಮಾನವರಿಗೂ ಒಳಿತಾಗುವಂತಹ ಎಷ್ಟೋ ಪುಣ್ಯಕಾರ್ಯಗಳನ್ನು ಮಾಡಿ, ತ್ರಿಕಾಲ ಲಿಂಗಪೂಜಾನಿಷ್ಟರಾಗಿದ್ದುದು ಕಾಣಬರುತ್ತೆ. ಆದ್ದರಿಂದ ನಾವುಗಳೆಲ್ಲರೂ ಸ್ವೀಕರಿಸಿರುವ ಈ ಲಿಂಗಾಯತ ಧರ್ಮ ಮಾರಕವಾಗದೆ, ಪೂರಕವಾಗಿ ವರ್ತಿಸುವುದು ನಮ್ಮೆಲ್ಲರಿಗೂ ಶ್ರೇಯಸ್ಕರ. ಲಿಂಗಾಯತ ಧರ್ಮವೂ ಈ ರಾಷ್ಟ್ರದಲ್ಲಿ ಹುಟ್ಟಿರುವ ಇತರೆ ಧರ್ಮಗಳಂತೆ ಸ್ವತಂತ್ರ ಧರ್ಮವೆಂಬುದನ್ನು ಕೇಂದ್ರಕ್ಕೆ ಮನವರಿಕೆ ಮಾಡಿಕೊಡಬೇಕಾಗಿದೆ. ತನ್ಮೂಲಕ ಧಾರ್ಮಿಕ ಅಲ್ಪ ಸಂಖ್ಯಾತತೆ ಲಿಂಗಾಯತರಿಗೂ ಸಿಕ್ಕಿ, ಸರ್ಕಾರದ ಎಲ್ಲ ಸವಲತ್ತುಗಳು ಜೈನ, ಬೌದ್ಧ, ಸಿಖ್‌ರಿಗೆ ಸಿಗುವಂತೆ ನಮಗೂ ಸಿಕ್ಕುವ ಅವಕಾಶಗಳಿವೆ. ಆದ್ದರಿಂದ ಈಗ ನಾವುಗಳು 'ಎಣ್ಣೆ ಬಂದಾಗ ಕಣ್ಣು ಮುಚ್ಚಿಕೊಂಡರು'



ಎಂಬ ಗಾದೆಯಂತೆ ಮೂರ್ಖತನ ತೋರದೆ ಜಾಣರಾಗಿ ಜನಗಣತಿಯ ಧರ್ಮ ಎಂಬ ಕಾಲಂನಲ್ಲಿ ಲಿಂಗಾಯತ ಎಂಬ ಒಂದೇ ಪದವನ್ನು ಬರೆಸಬೇಕು. ಧಾರ್ಮಿಕ ಅಲ್ಪಸಂಖ್ಯಾತತೆಯ ಪ್ರಯೋಜನ ಸಿಗುವ ಈ ಸುವರ್ಣ ಅವಕಾಶವನ್ನು ಕಳೆದುಕೊಳ್ಳಬಾರದೆಂದು ತಮ್ಮಲ್ಲರಲ್ಲಿ ಕಳಕಳಿಯಿಂದ ವಿನಂತಿಸುತ್ತೇನೆ.

ಈಗ್ಗೆ ಕೆಲವು ತಿಂಗಳ ಹಿಂದೆ ಮುಂಬಯಿಯಲ್ಲಿ ನಡೆದ ಪ್ರಕರಣ ತಿಳಿಸುತ್ತೇನೆ. ಸೂಕ್ಷ್ಮವಾಗಿ ಗಮನಿಸಿ. ಅದೇಂದರೆ, ಅಲ್ಲಿ ಸುಶಿಕ್ಷಿತರೂ, ಸಭ್ಯರೂ ಹಾಗೂ ಲಕ್ಷಾಧೀಶ್ವರರೂ ಆದ ನಮ್ಮ ಲಿಂಗವಂತ ಬಂಧುಗಳೊಬ್ಬರಿದ್ದಾರೆ. ಅವರನ್ನು ಅವರ ಬ್ರಾಹ್ಮಣ ಮಿತ್ರರೊಬ್ಬರು ಒಂದು ಧಾರ್ಮಿಕ ಸಮಾರಂಭಕ್ಕೆ ಬಹಳ ಒತ್ತಾಯಪೂರ್ವಕವಾಗಿ ಆಹ್ವಾನಿಸುತ್ತಾರೆ. ಆಗರೆ ಈ ನಮ್ಮ ಧರ್ಮಬಂಧುಗಳು ವಿನಯದಿಂದಲೇ ತಮಗೆ ಬರಲಿಕ್ಕೆ ಸಮಯವಿಲ್ಲ ಎಂದು ಹೇಳಿದರೂ ಆ ಮಿತ್ರ ಕುಟುಂಬದವರು ಮತ್ತೆ ಮತ್ತೆ ಒತ್ತಾಯ ಪೂರ್ವಕವಾಗಿ ತಾವಲ್ಲದೆ ತಮ್ಮ ಕುಟುಂಬ ವರ್ಗವೆಲ್ಲಾ ಬಂದು ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಆಗ್ರಹಿಸುತ್ತಾರೆ. ಆ ವಿಪ್ರ ಮಿತ್ರರ ಆಗ್ರಹ ಪೂರ್ವಕ ಒತ್ತಾಯಕ್ಕೆ ಮಣಿದು ಈ ನಮ್ಮ ಧರ್ಮಬಂಧುಗಳು ಕುಟುಂಬ ಸಮೇತ ಆ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ. ಅಲ್ಲಿನ ಧಾರ್ಮಿಕ ಕಾರ್ಯಕ್ರಮಗಳೆಲ್ಲ ಮುಗಿದ ನಂತರ, ಆ ವಿಪ್ರ ಸ್ನೇಹಿತರು ಇವರನ್ನು ಕುರಿತು, 'ನಿಮ್ಮ ಮೇಲಂಗಿಯನ್ನು ಬಿಚ್ಚಿ ಭೋಜನಕ್ಕೆ ಬರಬೇಕೆಂದು ತಿಳಿಸುತ್ತಾರೆ.' ಇವರು ಸಂಕೋಚದಿಂದಲೇ ಅಂಗಿಯನ್ನು ಬಿಚ್ಚಿ ಭೋಜನಕ್ಕೆ ಬರಬೇಕೆಂದು ತಿಳಿಸುತ್ತಾರೆ'. ಇವರು ಸಂಕೋಚದಿಂದಲೇ ಅಂಗಿಯನ್ನು ಬಿಚ್ಚಿ ಭೋಜನಕ್ಕೆ ತೆರಳಬೇಕೆಂದಿರುವಾಗ, ಆ ಬ್ರಾಹ್ಮಣ ಮಿತ್ರರು ಇವರನ್ನು ಆಶ್ಚರ್ಯದಿಂದ ನೋಡಿ, 'ನಿಮ್ಮ ಜನಿವಾರವೆಲ್ಲಿ ? ಏಕೆ ಧರಿಸಿಲ್ಲ!' ಎಂದು ಪ್ರಶ್ನಿಸುವರು. ಆಗ ಈ ನಮ್ಮ ಧರ್ಮಬಂಧುಗಳು 'ನಾವು ಲಿಂಗಾಯತರು' ಬ್ರಾಹ್ಮಣರಲ್ಲ' ಎಂದು ತಿಳಿಸುವರು. ಅದಕ್ಕೆ ಆ ಮಿತ್ರರು 'ನಾವು ನಿಮ್ಮನ್ನು ಬ್ರಾಹ್ಮಣರೆಂದು ಆಹ್ವಾನಿಸಿದ್ದೆವು. ದಯವಿಟ್ಟು ನಮ್ಮನ್ನು ಕ್ಷಮಿಸಿ. ನಮ್ಮವರ ಈ ಸಹ ಪಂಕ್ತಿ ಭೋಜನಕ್ಕೆ ನೀವು ಬರಲಾಗದು, ಎಂದು ಹೇಳುತ್ತಾರೆ. ಇವರು ಪೆಚ್ಚು ಮೋರೆಯಿಂದ ಹಸಿದು ಅಪಮಾನದ ಮುಜುಗರಕ್ಕೀಡಾಗಿ ತಮ್ಮ ಕುಟುಂಬದೊಂದಿಗೆ ಹಿಂದಿರುಗುವರು. ನೋಡಿದಿರಾ, ಇವರು ಸಮಾಜದಲ್ಲಿ ಗಣ್ಯ ಕಂಟ್ರ್ಯಾಕ್ಟರ್ ಹಾಗೂ ಶ್ರೀಮಂತರು, ಇಂತಹವರಿಗೇ ಹಿಂದೂ ಧರ್ಮದವರು ಶ್ರೇಷ್ಠರು ಎನ್ನಿಸಿಕೊಂಡವರಿಂದ ಅಪಮಾನವಾಯಿತು.

ಇದರಿಂದ ತಿಳಿಯುವುದೇನೆಂದರೆ, ಯಾವುದೇ ಕಾರಣಕ್ಕೂ ಯಾವ ವರ್ಗವನ್ನು ಅವರು ತಮಗೆ ಸರಿಸಮಾನವಾಗಿ ಸ್ವೀಕರಿಸುವುದಿಲ್ಲ.

ಮೇಲಿನ ಪ್ರಕರಣವು ಒಂದು ಉದಾಹರಣೆ ಮಾತ್ರ. ಲಿಂಗವಂತ ಧರ್ಮದಲ್ಲಿ ಮೇಲು ಕೀಳೆಂಬ ತಾರತಮ್ಯ ಭಾವವಿಲ್ಲ. ಸರ್ವ ಸಮಾನತೆಯನ್ನು ನಾವು ಕಾಣಬಹುದು. ಈ ಬಸವ ಧರ್ಮವು ವಿಶ್ವವ್ಯಾಪಕವಾಗಿ ಜಗತ್ತಿನಲ್ಲಿ ಉನ್ನತಮಟ್ಟದಲ್ಲಿ ನಿಂತು ಜಾಗತಿಕ ಧರ್ಮಗಳ ಸಾಲಿನಲ್ಲಿ ದೇದೀಪ್ಯಮಾನವಾಗಿ ಬೆಳಗುವ ಕಾಲ ಕ್ಷಿಪ್ರದಲ್ಲಿಯೇ ಬರುತ್ತದೆ. ಎಂಬುದು ಸರ್ವಜ್ಞನ ಒಂದು ವಚನದಲ್ಲಿ ಉಲ್ಲೇಖವಾಗಿರುತ್ತದೆ.

ಆದ್ದರಿಂದ ಅವೈಜ್ಞಾನಿಕ ವಿಚಾರಗಳಿಂದ ಹೊರ ಬಂದು ಚಿಂತಿಸುವ ಪ್ರಾಜ್ಞತೆಯನ್ನು ನಮ್ಮ ಸಮಾಜ ಬೆಳೆಸಿಕೊಳ್ಳಬೇಕು. ಯಾರೋ ಒಬ್ಬ ಅತ್ಯಾಚಾರಿ ಸಮಾಜವೆಲ್ಲದರ ನಾಶಕ್ಕೆ ಕಾರಣನಾದನೆಂಬುದು, ಶಾಪಕ್ಕೆ-ಕ್ರೋಧಕ್ಕೆ ಗುರಿಯಾಗುವುದು ಹಾಗೂ ಶಾಪಗ್ರಸ್ತವಾಗಿ ಈ ಸಮಾಜ ತಾನಾಗಿಯೇ ಉದ್ಭವಿಸಿತೆಂಬುದು ತಿಳುವಳಿಕೆಯುಳ್ಳವರಾರೂ ಒಪ್ಪತಕ್ಕಂತಹ ವಿಚಾರವೇ ಅಲ್ಲ. ನಮ್ಮ ಸಮಾಜದಲ್ಲಿ ನಡೆಯುವ ಕರ್ಣಮಂಟಪ ಹಾಗೂ ವಿವಾಹ ಮಹೋತ್ಸವಗಳಂತಹ ಶುಭ ಸಮಾರಂಭಗಳಲ್ಲಿ ಲಿಂಗಧಾರಣೆ ಮುಖ್ಯ ವಿಧಿಯಾಗಿರುತ್ತದೆ ಎಂಬುದನ್ನು ಗಮನಿಸಬೇಕು. ಮಕ್ಕಳಿಗೆ

ಕರ್ಣಕುಂಡಲ ಮಹೋತ್ಸವದಲ್ಲಿಯೇ ಹೆಚ್ಚಾಗಿ ಲಿಂಗಧಾರಣೆ ಮಾಡಿಸಿಕೊಂಡಿರದಿದ್ದರೆ, ವಿವಾಹ ಪೂರ್ವದಲ್ಲಾದರೂ ಕಡ್ಡಾಯವಾಗಿ ಲಿಂಗಧಾರಣೆ ಮಾಡಿಸಿಕೊಳ್ಳಬೇಕಾಗಿರುತ್ತೆ ಮತ್ತು ನಾವು ಲಿಂಗೈಕ್ಯರಾದಾಗಲೂ ನಮ್ಮ ಸಂಗಡ ಬರುವುದು ನಮ್ಮಗಳ ಇಷ್ಟಲಿಂಗವೇ ವಿನಃ ಬೇರೇನೂ ಅಲ್ಲ. ನಮ್ಮಲ್ಲಿ ಲಿಂಗಧಾರಣೆಯೇ ಧಾರ್ಮಿಕ ಮುಖ್ಯವಿಧಿಯಾಗಿರುವುದರಿಂದ ನಾವು ಧಾರ್ಮಿಕವಾಗಿಯೂ ಲಿಂಗಾಯತರು.

ಲಿಂಗಾಯತ ಧರ್ಮವು ಒಂದು ಸ್ವತಂತ್ರ ಸ್ವಾವಲಂಬಿ ಧರ್ಮ. ಪರಿಪೂರ್ಣ ಧರ್ಮದ ಎಲ್ಲಾ 15 ಲಕ್ಷಣಗಳನ್ನೊಳಗೊಂಡ ಧರ್ಮ. ಬಸವ ಧರ್ಮ ಪೀಠದ ದ್ವಿತೀಯ ಮಹಾ ಜಗದ್ಗುರುಗಳಾಗಿರುವ ಪರಮ ಪೂಜ್ಯ ಮಾತೆ ಮಹಾದೇವಿಯವರು ಲಿಂಗಾಯತ ಧರ್ಮ ಮಹಾಸಭಾವನ್ನು ಸಂಸ್ಥಾಪಿಸಿ, ಇದರ ಅಧ್ಯಕ್ಷರನ್ನಾಗಿ ಶರಣರಾದ ಪುಟ್ಟರುದ್ರಪ್ಪನವರನ್ನು ನೇಮಕ ಮಾಡಿರುತ್ತಾರೆ.

ಸನ್ಮಾನ್ಯ ಪುಟ್ಟರುದ್ರಪ್ಪನವರು ಸಾತ್ವಿಕರೂ, ಸರಳ ಜೀವಿಗಳು ಆಗಿ ವಂದನೀಯರಿರುತ್ತಾರೆ. ಇವರು ಬಹಳಷ್ಟು ಸಂಘ ಸಂಸ್ಥೆಗಳಲ್ಲಿ ಚಟುವಟಿಕೆಯಿಂದ ಕಾರ್ಯಮಾಡುತ್ತಾ ಇದ್ದಾರೆ. ಇವರು ನಮ್ಮ ನಗರ್ತ ಸಮಾಜ ಬಾಂಧವರಾಗಿರುವುದು ಹೆಮ್ಮೆಯ ವಿಷಯವಾಗಿರುತ್ತೆ. ಕರ್ನಾಟಕ, ಆಂಧ್ರ ತಮಿಳುನಾಡು, ಮಹಾರಾಷ್ಟ್ರ ಹಾಗೂ ಹಿಂದಿ ಭಾಷಾ ಪ್ರದೇಶವಾದ ಉತ್ತರ ಭಾರತದಲ್ಲಿರುವ ಲಿಂಗಾಯತ ಧರ್ಮೀಯರೆಲ್ಲರಿಗೂ ಮಾನ್ಯವಾಗಿರುವ ಈ ಲಿಂಗಾಯತ ಮಹಾಸಭಾಕ್ಕೆ ಅಧ್ಯಕ್ಷರಾಗಿರುವ ಶ್ರೀಯುತರು ನಮ್ಮ ಸಮಾಜ ಬಾಂಧವರು ಎಂಬುದು ಅಭಿಮಾನಿಸತಕ್ಕ ವಿಚಾರ. ನಮ್ಮಗಳೆಲ್ಲರಿಗೂ ಈ ಮಹಾಸಭಾದ ವತಿಯಿಂದ ಬರುವಂತಹ ಆದೇಶಗಳನ್ನು ಲಕ್ಷಾಂತರ ಲಿಂಗಾಯತ ಧರ್ಮೀಯರು ಪಾಲಿಸುತ್ತಲಿದ್ದಾರೆ. ಅವರಿಗೆ ಹೆಗಲೆಣೆಯಾಗಿ ನಿಂತು ಕಾರ್ಯಮಾಡುವುದು ನಮ್ಮ ಸಮಾಜ ಬಾಂಧವರಿಗೆ ಶ್ರೇಯಸ್ಕರ.

ಇನ್ನೂ ಒಂದು ಮುಖ್ಯ ವಿಷಯವನ್ನು ನಮ್ಮ ನಗರ್ತ ಸಮಾಜ ಬಾಂಧವರು ಗಮನಿಸಬೇಕು. ಅದೇನೆಂದರೆ; ನಮ್ಮ ಮಕ್ಕಳು ಬೇರೆ ಜಾತಿ, ಮತ ಪಂಥದ ಹುಡುಗನನ್ನೋ ಅಥವಾ ಹುಡುಗಿಯನ್ನೋ ಪ್ರೇಮಿಸಿ ಅವರನ್ನೇ ವಿವಾಹವಾಗಬೇಕೆಂದು ಹಠಹಿಡಿದಾಗ, ವಿಧಿಯಿಲ್ಲದೇ ಹಿರಿಯರು ಆ ಪ್ರೇಮಿಗಳ ಮದುವೆ ಮಾಡಬೇಕಾದರೆ, ಬೇರೆ ಜಾತಿಯವರಾದ ಅವರಿಗೆ ಮೊದಲು ಲಿಂಗ ಸಂಸ್ಕಾರದ ಮೂಲಕ ಇಷ್ಟಲಿಂಗಧಾರಣೆ ಮಾಡಿಸಿ ನಂತರದಲ್ಲಿ ಅವರಿಗೆ ಮದುವೆ ಮಾಡಿಸುವುದನ್ನು ಕಾಣುತ್ತೇವೆ. ಆದ್ದರಿಂದ ನಮ್ಮ ಸಮಾಜದ ಎಲ್ಲ ಸಾಮಾಜಿಕ ಹಾಗೂ ಧಾರ್ಮಿಕ ಕ್ರಿಯೆಗಳಲ್ಲಿ ಲಿಂಗಧಾರಣೆ-ಲಿಂಗಪೂಜೆ ಇವೇ ಮುಖ್ಯವಾಗಿರುವುದರಿಂದ ನಾವು ಧಾರ್ಮಿಕವಾಗಿ ಲಿಂಗಾಯತರೇ ಸರಿ. ಆದಕಾರಣ ಮುಂಬರುವ 2001ರ ಜನಗಣತಿಯಲ್ಲಿ ನಮ್ಮ ಸಮಾಜ ಬಾಂಧವರು ಯಾವುದೇ ಅಜ್ಞಾನಕ್ಕೀಡಾಗದೆ ಧರ್ಮ ಎಂಬ ಕಾಲಂನಲ್ಲಿ ಲಿಂಗಾಯತ ಎಂದು ಮಾತ್ರ ಬರೆಸಬೇಕಾಗಿ ವಿನಂತಿ. ಸೆನ್ಸಸ್‌ನಲ್ಲಿ ಯಾವುದೇ ಜಾತಿ, ಕುಲ, ಪಂಗಡಗಳನ್ನು ಕೇಳುವುದಿಲ್ಲ. ನಂ.7ರ ಕಾಲಂನಲ್ಲಿ ಧರ್ಮ ಮಾತ್ರ ಕೇಳಿರುತ್ತಾರೆ. ನಾವುಗಳೆಲ್ಲರೂ ಸ್ಪಷ್ಟವಾಗಿ ಲಿಂಗಾಯತ ಎಂದು ಮಾತ್ರ ಬರೆಸಿ ನಮ್ಮ ಪ್ರಾಜ್ಞತೆಯನ್ನು ತೋರ್ಪಡಿಸಬೇಕಾಗಿ ಕಳಕಳಿಯಿಂದ ಮತ್ತೊಮ್ಮೆ ನಗರ್ತ ಸಮಾಜ ಬಾಂಧವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಸರ್ವರಿಗೂ ಬಸವ ಸ್ಮರಣ ಪೂರ್ವಕ ಶರಣು ಶರಣಾರ್ಥಿ.

ಮ. ಜಯದೇವ, ವ್ಯಾಪಾರಿಗಳು
ಮುಖ್ಯ ರಸ್ತೆ, ವಿಜಯಪುರ-562135

---

ವೈಚಾರಿಕ ಪತ್ರಿಕೆಯಾದ ಕಲ್ಯಾಣ ಕಿರಣವನ್ನು ಓದಲು ಪ್ರೇರೆಪಿಸಿ,
ನಿಮ್ಮ ಬಂಧು ಮಿತ್ರರಿಗೆ ಉಡುಗೊರೆಯಾಗಿ ಕಳಿಸಿರಿ






ಧರ್ಮಗುರು ಬಸವಣ್ಣ

॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥

86666

### ಕೂಡಲ ಸಂಗಮ ಸುಕ್ಷೇತ್ರದಲ್ಲಿ
### ಬಸವ ಧರ್ಮ ಸಂಸ್ಥಾಪನಾ ದಿನದ
### ಅಂಗವಾಗಿ ಹದಿನಾಲ್ಕನೆಯ

# ಶರಣ ಮೇಳ



ಗಣ ಧ್ವಜ

### 2001ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಲಿಂಗಾಯತ (ಬಸವ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರ ಜನವರಿ 14, 15 ಮತ್ತು 16ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟ ಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಹದಿನಾಲ್ಕನೆಯ ಶರಣ ಮೇಳವು 2001ರ ಜನವರಿ 11, 12, 13, 14 ಮತ್ತು 15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಲಿಂಗಪೂಜೆ, ಗಣಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ ೧೪ರಂದು ಬೆಳಿಗ್ಗೆ 10 ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40, 30 ಮತ್ತು 10 ದಿವಸಗಳ **'ಶರಣ ವ್ರತ'**ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತದೆ. ದಿ. 11 ಮತ್ತು 12ರಂದು ಧರ್ಮಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ -ಧರ್ಮಗಳಿಗೆ ಸಂಬಂಧಪಟ್ಟಂತೆ ಮುಕ್ತ ಚರ್ಚೆಗೆ ಅವಕಾಶವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದು ಪಾಲ್ಗೊಳ್ಳಿರಿ.

### ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೆ, ಹೊರರಾಜ್ಯಗಳಿಂದಲೂ ಶರಣ ಪ್ರತಿಗಳು ಆಗಮಿಸುವರು. ಜನವರಿ 10ನೆಯ ದಿನಾಂಕ ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ

ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

| | |
|---|---|
| 1. ಮಹಾಪೋಷಕರು | : 5000 ರೂ. ಮತ್ತು ಮೇಲೆ ಕೊಟ್ಟವರು. |
| 4. ಹಿತೈಷಿಗಳು | : 500 ರೂ |
| 2. ಪೋಷಕರು | : 2000 ರೂ. ಮತ್ತು ಮೇಲೆ ಕೊಟ್ಟವರು. |
| 5. ಸ್ವಾಗತ ಸಮಿತಿ ಸದಸ್ಯತ್ವ | : 250 ರೂ |
| 3. ದಾನಿಗಳು | : 1000 ರೂ. ಮತ್ತು ಮೇಲೆ ಕೊಟ್ಟವರು. |
| 6. ಪ್ರತಿನಿಧಿ ಶುಲ್ಕ | : 125 ರೂ |

ಅನ್ನ ದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ ಕಾಣಿಕೆಯನ್ನು ಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000 / 10000 ರೂಪಾಯಿಗಳ ಪುದುವಟ್ಟು (F.D.) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣ ಮೇಳದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ-ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು "ಶರಣ ಮೇಳ ಉತ್ಸವ ಸಮಿತಿ, ಕೂಡಲಸಂಗಮ"ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ. ತೆಗೆಸುವವರು ಕೇವಲ State Bank of India ದ Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು.) ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ.ಯನ್ನಾಗಲೀ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.

ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧಗಯೆ ಧರ್ಮಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಪ್ರತಿಯೊಬ್ಬ ಬಸವ ಧರ್ಮಾನುಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕೂಲತೆ ಇದ್ದರೂ ಒಮ್ಮೆಯಾದರೂ ಶರಣ ಮೇಳದ (ಜನವರಿ 14ರಂದು ನಡೆಯುವ) ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಿ, ಗಣಲಿಂಗ ದರ್ಶನ ಪಡೆದು ತನ್ನ ಧಾರ್ಮಿಕ ಅನುಯಾಯಿತ್ವವನ್ನು ಸ್ವೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾಗನು. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

**ಶರಣರ ಬರವೆಮಗೆ ಪ್ರಾಣ ಜೀವಾಳ**

ಬೆಂಗಳೂರು ವಿಳಾಸ :
ಬಸವ ಮಂಟಪ, 2035
2ನೇ ಬ್ಲಾಕ್, 20ನೇ ಮುಖ್ಯರಸ್ತೆ,
ರಾಜಾಜಿನಗರ, ಬೆಂಗಳೂರು-560010
ದೂರವಾಣಿ : 080-3325335, 3322790

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ
ಕೂಡಲ ಸಂಗಮ-587115
ತಾ-ಹುನಗುಂದ, ಜಿಲ್ಲೆ-ಬಾಗಲಕೋಟೆ
ದೂರವಾಣಿ : 08351-58038, 58007, 58140

ಯೋಜನೆಯಡಿ ಸುಲಭ ಕಂತುಗಳಲ್ಲಿ ಮನೆ ಬಳಕೆ ಸಾಮಗ್ರಿಗಳನ್ನು ಸರಬರಾಜು ಮಾಡುವುದು.
ಕಂತಿನ ಅವಧಿಯು 12 ತಿಂಗಳಿಂದ 36 ತಿಂಗಳವರೆಗೆ ಇರುವುದು.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ :
ವ್ಯವಸ್ಥಾಪಕ ನಿರ್ದೇಶಕರು
ಕೆ.ಎಸ್.ಐ.ಎಂ.ಸಿ.ಲಿ.
ನ. 31/61 ಗಣಪತ್ ಕಟ್ಟಡ
2ನೇ ಮುಖ್ಯ ರಸ್ತೆ, ವೈಯಾಲಿಕಾವಲ್
ಬೆಂಗಳೂರು-560003

ಶಾಖೆಗಳು :
ಮೈಸೂರು, ಮಂಗಳೂರು, ಧಾರವಾಡ, ಗುಲ್ಬರ್ಗಾ, ಹಾಸನ , ಶಿವಮೊಗ್ಗ, ಮಂಡ್ಯ, ಬಳ್ಳಾರಿ, ರಾಯಚೂರು. ಬೆಳಗಾಂ, ಕೋಲಾರ, ತುಮಕೂರು, ಚಿತ್ರದುರ್ಗ, ಬೀದರ್, ಚಿಕ್ಕಮಗಳೂರು, ಬಿಜಾಪುರ, ಕಾರವಾರ, ಬಾಗಲಕೋಟ, ಗದಗ್, ಚಾಮರಾಜನಗರ, ದಾವಣಗೆರೆ, ಹಾವೇರಿ

## ಜಗದಣ್ಣ ಬಸವಣ್ಣ

ಬಸವಣ್ಣನವರ ಭಕ್ತಿ । ಸೃಷ್ಟಿಕರ್ತನು ಧರೆಗಿಳಿಸಿದ ಶಕ್ತಿ
ಅವರ ಸಮ ಸ್ಥಿತಿ । ಶರಣರಿಗೊಂದು ಆಸ್ತಿ
ಅವರ ಅನುಕಂಪ । ಹೋಗಲಾಡಿಸಿತು ಶರಣರ ಮನದ ತಾಪ
ಅವರು ಬಯಸಿದ ಕನಸು । ಮನುಕುಲದ ಸೊಗಸು
ಅವರ ಮಮತೆ । ಎಲ್ಲರಿಗೂ ಸಿಕ್ಕಿದ ಸಮಾನತೆ
ಧರ್ಮಪಿತರ ನುಡಿ । ಸವಿನುಡಿ ಸಿಹಿನುಡಿ ದೇವನುಡಿ
ಅವರು ಮಾಡಿದ ಕ್ರಾಂತಿ । ಓಡಿಸಿತು ಮನುಕುಲದ ಭ್ರಾಂತಿ

-ಬಿ.ಎಂ. ರುದ್ರಶೆಟ್ಟಿ, ಹಾಸನ

## ಕವನಗಳು

1. ಸೂರ್ಯನಿಗೆ ದೀಪ್ತಿಯ ಬೆಳಗಿನ ಹಂಗೇಕಯ್ಯಾ
ಜಲದೊಳಗಿರುವ ಮತ್ಸ್ಯಕ್ಕೆ ತೃಷೆಯ ಹಂಗೇಕಯ್ಯಾ
ಭೂಮಿಗೆ ನೆರಳಿನ ಹಂಗೇಕಯ್ಯಾ
ಬಸವಣ್ಣನೊಲುಮೆ ಎನಗಿರುವಾಗ
ವಿಷ್ಣು ಗಣೇಶರ ಒಲುಮೆಯ ಹಂಗೇಕಯ್ಯಾ

2. ನಿನ್ನ ಪಾದವ ಅರ್ಚಿಸಿ ಎನ್ನ ತನು
ಪಾವನವಾಯಿತ್ತು ಬಸವಣ್ಣ
ನಿನ್ನ ವಚನಂಗಳ ಕೇಳಿ ಎನ್ನ ಮನ
ಪಾವನವಾಯಿತ್ತು ಬಸವಣ್ಣ
ನಿನ್ನ ಧ್ಯಾನವ ಮಾಡಿ ಎನ್ನ ಆತ್ಮ
ಪಾವನವಾಯಿತ್ತು ಬಸವಣ್ಣ
ನಿನ್ನ ಮೂರ್ತಿಯ ನೋಡಿ ಎನ್ನ ಕಂಗಳು
ಪ್ರಜ್ವಲಗೊಂಡವು ಬಸವಣ್ಣ
ನಿನ್ನಿಂದ ಬಸವಪ್ರಿಯ ಲಿಂಗತಂದೆಯನ್ನು ಅರಿತೆ ಬಸವಣ್ಣ

-ಅವಿನಾಶ, ಭದ್ರಾವತಿ





## 45ನೇ ಶರಣ ಮೇಳಕ್ಕೆ ಜಯವಾಗಲಿ !

ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ಚರಣಕಮಲಗಳಿಗೆ ಕಲಬುರ್ಗಿಯಿಂದ ಶ್ರೀ ವೀರಭದ್ರಪ್ಪ. ಎಮ್.ಪಾರಶೆಟ್ಟಿ ಮಾಡುವ ಶಿರಸಾಷ್ಟಾಂಗ ನಮಸ್ಕಾರಗಳು.

ಈಗ ತಮಗೆ ಪತ್ರ ಬರೆಯಲು ಕಾರಣವೇನೆಂದರೆ ಮಾತಾಜಿ, ನಿನ್ನೆ ನಿತ್ಯ ಬಜಾರಕ್ಕೆ ಹೋಗುವಂತೆ ಹೋಗಿದ್ದೆ. ಒಂದು ಪೋಟೋ ಫ್ರೇಮ್ ಹಾಕುವ ಅಂಗಡಿಯ ಮುಂದೆ ಶ್ರೀ ಗುರು ಬಸವಣ್ಣನವರ ಅಭಯ ಹಸ್ತ ಪೋಟೋ ಫ್ರೇಮ್ ಹಾಕಿ ಇಟ್ಟಿದ್ದರು. ಹಾಗೆ ಮುಸಲ್ಮಾನರ ಹಜ್ ಮೆಕ್ಕಾ ಯಾತ್ರಾದಲ್ಲಿ ಲಕ್ಷಾಂತರ ಜನರು ನಮಾಜ್ ಮಾಡುವ ಚಿತ್ರ ನೋಡಿ ನನ್ನ ಲಕ್ಷ್ಯ ಕೂಡಲ ಸಂಗಮದ ಶರಣ ಮೇಳದ ಕಡೆಗೆ ಹರಿದು ಸ್ವಲ್ಪ ಸಮಯ ಮೈಮರೆತು ಪೂಜ್ಯ ಮಾತಾಜಿ ಹಾಗೂ ಪೂಜ್ಯ ಲಿಂಗಾನಂದ ಸ್ವಾಮಿಗಳು ಎಂಟುನೂರು ವರುಷಗಳಿಂದ ಯಾವ ಸ್ವಾಮಿಗಳಿಗೂ ಹೊಳೆಯದ ಕೆಲಸ ಮಾಡಿ ನಮ್ಮ ಲಿಂಗಾಯತರಿಗೆ ಪ್ರತಿವರುಷ ಧರ್ಮ ಕ್ಷೇತ್ರಕ್ಕೆ ಬರುವಂತೆ ಮಾಡಿ ಶರಣರನ್ನು ಒಂದು ಕೂಡಿಸಿ 'ಶರಣಮೇಳ' ಎಂಬ ಪವಿತ್ರ ಕಾರ್ಯ ಮಾಡಿದ್ದಾರೆ. 1988ರಲ್ಲಿ ಶರಣ ಮೇಳ ಪ್ರಾರಂಭಿಸಿದರು. ಅಲ್ಲಿಂದ ನಾನು ನಮ್ಮವರು ಹೋಗಲು ಪ್ರಾರಂಭಿಸಿದೆವು. ಮುಂದೆ ನನಗೆ ಸ್ವಲ್ಪ ನಡೆಯಲು ತ್ರಾಸ ಆಗಿ ನಾಲ್ಕು ಶರಣಮೇಳಕ್ಕೆ ಹೋಗಲಿಕ್ಕೆ ಆಗಲಿಲ್ಲಾ. ಪುನಃ 13ನೇ ಶರಣಮೇಳಕ್ಕೆ ಬಂದೆನು. ಬಹಳಷ್ಟು ಹಳೆಯ ಸ್ನೇಹಿತರು ಭೆಟ್ಟಿಯಾಗಿ ಸಂತೋಷಗೊಂಡೆನು.

ಇದೆ ವಿಚಾರದಲ್ಲಿ ಮನೆಗೆ ಬಂದು ರಾತ್ರಿ ಪ್ರಸಾದ ಮಾಡಿ ಬಸವಧ್ಯಾನ ಮಾಡುತ್ತ ಮಲಗಿಕೊಂಡೆನು. ರಾತ್ರಿ ಒಂದು ಕನಸು ಬಿತ್ತು. ಶರಣಮೇಳದಲ್ಲಿ ಜನರು ಸಂಭ್ರಮದಿಂದ ಓಡಾಡುತ್ತಿದ್ದರು. ಕೂಡಲ ಸಂಗಮವು ಕೈಲಾಸವಾಗಿತ್ತು. ಹೊಸ ಹೊಸ ಬಿಲ್ಡಿಂಗ್‌ಗಳು, ಸುಂದರವಾಗಿ ಕಟ್ಟಿದ್ದು, ಬಸವ ಧರ್ಮ ಪೀಠದಲ್ಲಿಂದ ಸಂಗಮದ ಐಕ್ಯ ಮಂಟಪದವರೆಗೆ ಜನರೇ ಜನರು. ಎಲ್ಲಿ ಸ್ಥಳ ಸಿಕ್ಕುವಲ್ಲಿ ಲಿಂಗಪೂಜೆ ಮಾಡಿಕೊಳ್ಳುತ್ತಿದ್ದರು. ನಮಗೆ ಘನಲಿಂಗದ ಹತ್ತಿರದ ತೋಟದಲ್ಲಿ ಲಿಂಗಪೂಜೆಗೆ ಸ್ಥಳ ಸಿಕ್ಕಿತ್ತು.

ಬೇರೆ ಬೇರೆ ಭಾಷೆ ಮಾತನಾಡುವ ಜನರು ಇರುವೆಗಳ ಸಾಲಿನಂತೆ ಕೂಡಿ ಬಿಟ್ಟಿದ್ದರು. 45ನೇ ಶರಣ ಮೇಳಕ್ಕೆ ಜಯವಾಗಲಿ, ಚನ್ನಬಸವಣ್ಣನವರಿಗೆ ಜಯವಾಗಲಿ, ಶ್ರೀ ಗುರು ಬಸವಲಿಂಗಾಯನಮಃ, ಜಯ ಜಯ ಮಹಾದೇವ ಲಿಂಗದೇವ, ಶರಣರಿಗೆ ಜಯವಾಗಲಿ, ಶರಣ ಮೇಳಕ್ಕೆ ಜಯವಾಗಲಿ, ಮಾತೆ ಮಹಾದೇವಿಯವರಿಗೆ ಜಯವಾಗಲಿ, ಲಿಂಗಾನಂದ ಸ್ವಾಮಿಗಳಿಗೆ ಜಯವಾಗಲಿ, ಬಸವ ಧರ್ಮ ಪೀಠಕ್ಕೆ ಜಯವಾಗಲಿ ಎಂದು ಮುಗಿಲು ಮುಟ್ಟುವಂತೆ ಘೋಷಣೆ ಕೂಗುತ್ತಿದ್ದೆವು. ಅಷ್ಟರಲ್ಲಿ ಎಚ್ಚರವಾಯಿತು. ಮುಂದೆ ಏನು ನಡೆಯುತ್ತಿತ್ತು ಗೊತ್ತಾಗಲಿಲ್ಲಾ. ಒಮ್ಮೆಲೆ 45ನೇ ಶರಣ ಮೇಳದ ಚಿತ್ರದ ಕನಸು ಬೀಳುವಲ್ಲಿ ಏನು ವಿಚಾರ ಗೊತ್ತಾಗಿಲ್ಲ. ಆ ಶರಣ ಮೇಳಕ್ಕೆ ನಾವೆಲ್ಲಿ ಇರುತ್ತೇವೆ. ಎಂಥಾ ಕನಸು ! ವಿಚಿತ್ರ ವಿಚಿತ್ರ ! ಬಸವಾದಿ ಶರಣರ ವಚನಗಳು, ಎಷ್ಟು ವರ್ಷಗಳಾದರೂ ಹಾಳಾಗುವುದಿಲ್ಲ. ಈಗ ಮನೆ ಮನೆಗಳಲ್ಲಿ ವಚನೋತ್ಸವ, ಬಸವಜ್ಯೋತಿ, ವಚನಗಳ ಪುಸ್ತಕ ಹಂಚುವುದು, ಬಸವೇಶ್ವರ ಪೂಜೆ ನಡೆದಿಧೆ. 45ನೇ ಶರಣ ಮೇಳದ ಕನಸು ಯಾಕೆ ಬಿತ್ತು ಗೊತ್ತಿಲ್ಲಾ. ಅದು ಬಸವ ಸಂದೇಶವಿರಬಹುದು. 45ನೇ ಶರಣಮೇಳಕ್ಕೆ ಒಂದು ನೂರು ರೂಪಾಯಿ ಭಕ್ತಿ ಕಾಣಿಕೆ ಸಲ್ಲಿಸಿರುವೆನು. ಮುಟ್ಟಿದ ನಂತರ ತಮ್ಮ ಕೃಪಾಶೀರ್ವಾದ ಒಂದು ಪುಸ್ತಕದಲ್ಲಿ ಬರೆದು ಕಳಿಸುವಿರೆಂದು ಆಶಿಸುತ್ತೇನೆ. ನಮ್ಮ ಮನೆಯಲ್ಲಿ ತಮ್ಮ ಹಸ್ತಾಕ್ಷರದ ಆಶೀರ್ವಾದ ಇರಲಿ. ತಮ್ಮ ಚರಣಕಮಲಗಳಿಗೆ ಶಿರಸಾಷ್ಟಾಂಗ ನಮಸ್ಕಾರಗಳು.

ತಮ್ಮ ಸೇವಕ
ಶ್ರೀ ವೀರಭದ್ರಪ್ಪ ಎಮ್. ಪಾರಶೆಟ್ಟಿ, ನಿವೃತ್ತ ಪಿಎಸ್ಐ.

## ಮತ್ತೆ ಬೆಳಗಿದ ಬಸವ ಭಾನು

ನಮ್ಮುಸಿರು, ನಿಮ್ಮುಸಿರು, ಎಲ್ಲರೆದೆಯಲಿ ಹಸಿರು
ಝೇಂಕರಿಸಿ ಬೆಳೆಯುತಿದೆ ಬಸವಗುರುವಿನ ಹೆಸರು
ಅಂದು ನಲಿಸಿತು ಬಸವ ತತ್ವದಾ ಸಂದೇಶ
ಇಂದು ಕೊಸರಿತು ಮತ್ತೆ ಶರಣರಾ ಆದೇಶ
ನೊಂದವನ ಬೆಂದಮನ ಕೂಗಿ ಕರೆಯಿತು ಅವರ
ಅಂದಂತೆ ಬಂದರು ಸದ್ಗುರು ಲಿಂಗಾನಂದರು
ಎಲ್ಲೆಲ್ಲೂ ಪಸರಿಸಿತು ಬಸವ ತತ್ತ್ವದ ಜೇನು
ಸೊಲ್ಲು ಸೊಲ್ಲಿಗೆ ಬಂತು ವಚನ ಸೌರಭ ಭಾನು
ತತ್ತ್ವದಾ ಘರ್ಜನೆಯು ಧೀಂಗುಟ್ಟಿ ರಾಜ್ಯದೊಳು
ಎತ್ತರಕೆ ಊರ್ಜಿಸಿತು ಗುರುವಾಣಿ ರಾಷ್ಟ್ರದೊಳು
ಕಟ್ಟಿದರು 'ಬಸವದಳ' ದಿಟ್ಟತನದಲಿ ಅವರು
ಮೆಟ್ಟಿನಿಂತರು ಪಟ್ಟಭದ್ರ ಪುರೋಹಿತರೆದುರು
ಶರಣರಿನು ಕೂಡಿಸಲು ಶರಣ ಮೇಳವು ಬಂತು
ಕಾರಣಿಕ ಮಹಾಪುರುಷ ಬಸವ ಕ್ಷೇತ್ರವು ಆಯ್ತು
ಅಂದು ಕಲ್ಯಾಣದಲಿ ಅಮರ ಗಣಂಗಳ ಉದಯ
ಇಂದು ಈ ಸಂಗಮದಿ ಶರಣ ಸಂತರ ಉದಯ
ಕೂಡಲಾ ಸಂಗಮದಿ ಸಂಕ್ರಾಂತಿಯಂದೆ 'ಶರಣಮೇಳ'
ಮಾಡಿದರು ಹೊರ ರಾಜ್ಯದೊಳು 'ಬಸವ ಧರ್ಮದ ಮೇಳ'
ಸಾಧನೆಗೆ ತಕ್ಕ ಫಲ ದೊರೆತಾಯ್ತು ಶರಣರಿಗೆ
ಭೇದ ಭಾವವ ತೊರೆದು ಸೇರಾಯ್ತು ಭಕ್ತ ಜನ
ಇವನಾರು ? ಇವನಾರು ? ಎಂದೆನಿಸಲಿಲ್ಲ ಕಣಾ
ಇವನಮ್ಮವ ಇವನಮ್ಮವ ಎಂದೆನಿಸಿತು ಶರಣ ಗಣ
ಬನ್ನಿ ಎಲ್ಲರೂ ಕೂಡಿ 'ಮಹಾಮನೆ ಮಹಾಮಠ'ಕ್ಕೆ
ಬನ್ನಿ ದರುಶನ ಮಾಡಿ ನಮಿಸಿ "ಗಣಲಿಂಗ"ಕ್ಕೆ
ಪೂಜ್ಯ ಶ್ರೀ ಮಾತಾಜಿ ಮಾಡಿ ಸಂಶೋಧನೆಯ
ನೀಡಿದರು ದರುಶನಕೆ 'ಗಣಲಿಂಗ' ದೇವನ
ಬಿತ್ತು ಮನದಲಿ ತತ್ತ್ವ ಸಂದೇಶ ನೀಡಿದರು
ಕಿತ್ತೂರಿನ ವೀರ ವಿರಾಗಿಣಿಯು ಮಾತಾಜಿ
ಗುರುದೇವ ಗುರುಜಂಗಮ ಲಿಂಗಾನಂದ ಗುರೂಜಿ
ಮಹಾಮಾತೆ ಬಸವಾತ್ಮಜೆ ಜಗನ್ಮಾತೆ ಮಾತಾಜಿ
ಒಮ್ಮೆ ಬಂದು ಸಂಗಮಕೆ ಬಸವ ತತ್ತ್ವ ಅರಿಯಿರಿ
ನಿಮ್ಮ ತನು, ಮನ, ಧನವ, ಲಿಂಗದೇವಗರ್ಪಿಸಿರಿ.

ಶರಣ ಎಸ್.ಜಿ.ಬಸವರಾಜು
ಕಾರ್ಯಾಧ್ಯಕ್ಷರು, ರಾಷ್ಟ್ರೀಯ ಬಸವ ದಳ, ಚಿಕ್ಕಮಗಳೂರು



## ಕಲ್ಯಾಣ ಕಿರಣ ಇದು ಕಲ್ಯಾಣ ಕಿರಣ

ಕಲ್ಯಾಣ ಕಿರಣ ಇದು ಕಲ್ಯಾಣ ಕಿರಣ
ಕಲ್ಲಿನ ನಾಣ್ಯವ ಮಾಡಿದ ಕಿರಣ । ಜ್ಞಾನದ ಬೆಳಕಿನ ಹೊಂಗಿರಣ ॥1॥
ಕವಿದಿಹ ಕತ್ತಲೆ ಕತ್ತರಿಸಲು ಬಂದ । ವಕ್ಕರಿಸಿದ ಕಷ್ಟಗಳ ಕಳೆಯಲು ಬಂದ
ಮೌಢ್ಯಾಚಾರವನಳಿಸಲು ಬಂದ । ಮಾನವತೆಯಿಂದ ದೈವತ್ವಕ್ಕೆ ತಂದ ॥2॥
ವಚನ ಸಾಹಿತ್ಯವೆಂಬ ಹೂದೋಟದಲಿ । ಮಾತಾಜಿ ದುಂಬಿ ಹೀರಿದ ಮಕರಂದದಲಿ
ರಚಿಸಿದ ಜೇನುಗೂಡಿನ ಸುದ್ದಿಯನಬ್ಬಿಸಿ । ಎಲ್ಲೆಡೆ ತತ್ತ್ವದ ಜೇನನು ನೀಡುವ ॥3॥
ನಾಸ್ತಿಕರ ಆಸ್ತಿಕರ ಮಾಡುತ ಬಂತು । ಮರುಳರ ದುರ್ಬುದ್ಧಿ ಕಳೆಯುತ ಬಂತು
ಪಾವನರ ಪಾವನಿಸಿದ ಧಾರೆಯದಿಂತು । ಶರಣ ಮಾರ್ಗವ ತೋರಲು ಬಂತು ॥4॥
ಪತ್ರಿಕೆಯೆಂಬ ಜೇನ್ ತೊಟ್ಟಿನಲಿ । ಅರಿವನು ಮೂಡಿಸಲು ಸಿಹಿಸುದ್ದಿಯಲಿ
ಎಲ್ಲರ ಮನೆಯ ಕದವ ತಟ್ಟುತ ಬಂತು । ಎಂಥವರ ಮನವನು ಮುಟ್ಟುತ ಬಂತು ॥5॥
ವಿರೋಧಿಗಳಿಗೆ ವಿಕೃತವೆ ಎನಿಸಿತ್ತು । ಅಭಿಮಾನಿಗಳನು ಅತಿಮುದ್ದಿಗೊಳಿಸಿತ್ತು
ದ್ರೋಹಿಗಳಿಗೆ ಕಹಿಯಾಗಿ ಕಂಡಿತ್ತು । ದಾಸೋಹಿಗಳಿಗೆ ಸಿಹಿಯ ತಂದಿತ್ತು ॥6॥
ಜ್ಞಾನದ ಬೆಳಕನು ಬೀರುತ ಬಂತು । ಸುಜ್ಞಾನಿಗಳನು ಬೆಳೆಸುತ ಬಂತು
ತತ್ತ್ವಾಭಿಮಾನವ ಬಿತ್ತುತ ಬಂತು । ಚಿಂತಕರ ಮನಸಿಗೆ ಸಂತಸ ತಂತು ॥7॥
ಕಾದಿದ ಲೋಕಕೆ ಕಲ್ಯಾಣ ತಂದ । ಬಸವಾದಿ ಪ್ರಮಥರ ಕರುಣೆಯ ಕಂದ
ಮಹಾಜಗದ್ಗುರು ಪೀಠದ ಅಂದ । ಮಾತಾಜಿ ರಚಿಸಿದ ರಚನೆಯನೋದಲು ಆನಂದ ॥8॥

ರಚನೆ : ಕೆ.ವಿ. ವೀರೇಶ. ರಾಷ್ಟ್ರೀಯ ಬಸವ ದಳ
ತಿಮ್ಮಪ್ಪಯ್ಯನ ಹಳ್ಳಿ

## ವಚನ ಕಿರಣ

ಬಸವಣ್ಣನ ನೆನೆ ನೆನೆದು ಕಷ್ಟವ ಕಳೆದುಕೊಳ್ಳುವೆನಯ್ಯಾ
ಬಸವಣ್ಣನ ನೆನೆ ನೆನೆದು ದುಃಖವ ದೂರಗೊಳಿಸುವೆನಯ್ಯಾ
ಬಸವಣ್ಣನ ನೆನೆ ನೆನೆದು ತಾಪವ ತಣ್ಣಗಾಗಿಸುವೆನಯ್ಯಾ
ಬಸವಣ್ಣನ ನೆನೆ ನೆನೆದು ಕಳವಳವ ಕಾಣದಂತಾಗಿಸುವೆನಯ್ಯಾ
ಬಸವಣ್ಣನ ನೆನೆ ನೆನೆದು ಕುಣಿದು ಕುಪ್ಪಳಿಸುವೆನಯ್ಯಾ
ಬಸವಣ್ಣನ ಸ್ಮರಣೆಯಲ್ಲಿಯ ಆನಂದವೇನೆಂದು ಬಣ್ಣಿಸಲಯ್ಯಾ
ಎನ್ನ ಹೆತ್ತ ತಂದೆ ಗುರು ಬಸವಣ್ಣನ ವರ್ಣನೆಯ ಮಾಡುವ
ಎನ್ನ ಗುರುತಾಯಿ ಪೂಜ್ಯ ಮಾತಾಜಿಯವರ ವ್ಯಕ್ತಿತ್ವಕ್ಕೆ ಆನು ಬೆರಗಾದೆನಯ್ಯಾ
ಮಾತಾ ಪ್ರಿಯ ಸಚ್ಚಿದಾನಂದ.

-ಪೂಜ್ಯ ಶ್ರೀ ಮಾತೆ ಅಕ್ಕಮಹಾದೇವಿ
ಬಸವ ಧರ್ಮ ಪೀಠ, ಕೂಡಲಸಂಗಮ

## ಸೆಪ್ಟೆಂಬರ್-ಅಕ್ಟೋಬರ್ ತಿಂಗಳಲ್ಲಿ ದೇಣಿಗೆ ಸಲ್ಲಿಸಿದ ದಾಸೋಹಿಗಳು

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಬೆಂಗಳೂರು ಬಸವ ಮಂಟಪದಲ್ಲಿ ಪ್ರತಿ ಭಾನುವಾರದ ಪ್ರಾರ್ಥನೆ-ಪ್ರವಚನದ ನಂತರ ಗಣಪ್ರಸಾದ (ಊಟ)ದ ವ್ಯವಸ್ಥೆ ಮಾಡಲು ಶರಣ ಬಂಧುಗಳು ಅಪೇಕ್ಷಿಪಟ್ಟು 1500 (ಒಂದು ಸಾವಿರದ ಐದು ನೂರು) ರೂಪಾಯಿಗಳಂತೆ ಕೊಟ್ಟಿದ್ದಾರೆ. ಒಂದು ವರ್ಷಕ್ಕೆ ಸುಮಾರು 1500 ರೂ. ಬಡ್ಡಿ ಬರುವಂತೆ 15000/- (ಹದಿನೈದು ಸಾವಿರ) ರೂ. ಎಫ್.ಡಿ. ಇಡಲು ಸಹ ಅವಕಾಶ ನೀಡಲಾಗಿದೆ.

### 15000 ರೂ. ಪುದುವಟ್ಟಿಗೆ ಕೊಟ್ಟವರು.

ಶರಣ. ಎಂ.ಸಿ.ರವಿ S/o ಎಂ.ಚಿಕ್ಕಪಿಳ್ಳಪ್ಪ, ಬೆಂಗಳೂರು.

### ಭಾನುವಾರದ ದಾಸೋಹಕ್ಕೆ 1500 ರೂ. ಕೊಟ್ಟವರು

1-10-2000 ಶರಣೆ. ನಾಗಮಣಿ ಬೀದರ್, ಬೆಂಗಳೂರು
8-10-2000 ಶರಣೆ ಪುಷ್ಪಾ ಮತ್ತು ಶರಣ. ಸಿದ್ದರಾಮಪ್ಪ ಪಾಟೀಲ್
15-10-2000 ಶರಣೆ. ಕಲ್ಯಾಣಮ್ಮ ಶರಣೆ. ಅನಿತಾ ಮಹಾಂತೇಶ ಗದ್ದಿ, ಬೆಂಗಳೂರು
22-10-2000 ಶರಣೆ ಜಯಮ್ಮ ಗುರುಸಿದ್ದಯ್ಯ
29-10-2000 ಶರಣೆ ಮಮತಾ ಅರುಣಕುಮಾರ್, ಬಳ್ಳೂರ್, ದಾವಣಗೆರೆ

ಧರ್ಮಗ್ರಂಥ ನಿಧಿಗೆ 1000 ರೂ. ಶರಣ. ಸಿದ್ದಪ್ಪ ಸಾವಳೆ, ಬೀದರ್

ಕಟ್ಟಡ ನಿಧಿಗೆ 2002 ರೂ. ಶರಣ. ಬಿ.ಸಿ. ಚಂದ್ರಶೇಖರಯ್ಯ

### ಜನಗಣತಿ ಪ್ರಚಾರಕ್ಕಾಗಿ ಕರಪತ್ರ ಮುದ್ರಣಕ್ಕೆ ಧನ ದಾಸೋಹ ಮಾಡಿದ ಶರಣರು

(ಸೆಪ್ಟಂಬರ್ ಸಂಚಿಕೆಯಿಂದ ಮುಂದುವರಿದ ಪಟ್ಟಿ)

10,000 (ಹತ್ತು ಸಾವಿರ) ಪ್ರತಿಗೆ 1100 ರೂ.

ಅಮೃತರಾವ್ ಮಹಾದೇವಪ್ಪ ವಡ್ಡೆ ಮತ್ತು ಗ್ರಾಮಸ್ಥರು, ಯರನಳ್ಳಿ, ಬೀದರ
ಮಲಶೆಟ್ಟಪ್ಪ ಗಿರೆಪ್ಪ ಗೌರಶೆಟ್ಟಿ, ಮಂದಕನಹಳ್ಳಿ, ಬೀದರ
ಬಸವರಾಜ ರಾಮಣ್ಣ ಶಟಗುಂಡೆ, ಮಂದಕನಳ್ಳಿ, ಬೀದರ
ಕಲ್ಯಾಣರಾವ ಪಾಟೀಲ, ಸಂಗಮಕರ, ಬೀದರ
ಚಂದ್ರಮ್ಮ ಅಣ್ಣೆಪ್ಪ ಪಾಟೀಲ, ಗಾದಗಿ, ಬೀದರ
ವಿಜಯ ಬಾಳಾಸಾಹೇಬ ಪಾಟೀಲ, ಕಬ್ಬನೂರು, ಬೀದರ

5000ಪ್ರತಿಗೆ 650 ರೂ. ಕೊಟ್ಟವರು

ಬಸವರಾಜ ಚಂದ್ರಕಾಂತ ಲುಕ್, ಬಾಗಲಕೋಟೆ
ಎಸ್.ಎಫ್. ಹುನಗುಂದ ಮತ್ತು ಸಹೋದರರು
ಶರಣಪ್ಪ ಬಸವಂತರಾವ್ ಮಾಲಿ ಪಾಟೀಲ, ಮಸ್ಕಲ್, ಬೀದರ
ಮಲಶೆಟ್ಟಿ ಶಿವರಾಯ ಪೋಲೀಸ್ ಪಾಟೀಲ, ಮಸ್ಕಲ್, ಬೀದರ
ಹನುಮಂತಪ್ಪ ನಾಗಶೆಟ್ಟಿ ಬಿರಾದಾರ, ಮಸ್ಕಲ್, ಬೀದರ
ರಾಷ್ಟ್ರೀಯ ಬಸವ ದಳ, ಜೀರ್ಗಾ, ಬೀದರ
ಗುಜ್ಜಮ್ಮ ಕಲ್ಯಾಣರಾವ್ ಸೋಶೆಟ್ಟಿ, ಕಮಠಾಣ, ಬೀದರ



ಶ್ರೀ ಬಸವೇಶ್ವರ ಯುವಕ ಮಂಡಳ, ಹಜನಾಳ, ಬೀದರ
ಶಾಂತಪ್ಪ ಬಿರಾದಾರ, ಸಂಗಮ, ಬೀದರ
ಚನ್ನಬಸಯ್ಯ ರಾಚಯ್ಯ ಸ್ವಾಮಿ, ಸಂಗಮ
ರಾವಗಿರಾವ್ ಮಹಾರುದ್ರಪ್ಪ ಖಿಮ್ಮಶೆಟ್ಟಿ, ಠಾಣಾಕುಸನೂರ, ಬೀದರ
ಭೀಮರಾವ್ ಮಾರುತಪ್ಪ ಚಿಂಚೋಳಿ, ಠಾಣಾಕುಸನೂರ, ಬೀದರ
ರಾಜಕುಮಾರ್ ಮಲಶೆಟ್ಟಪ್ಪ ದೇಶೆಟ್ಟಿ, ನಿರ್ಣಾ, ಬೀದರ
ರಾಷ್ಟ್ರೀಯ ಬಸವ ದಳ, ಮಂದಕನಳ್ಳಿ, ಬೀದರ
ರಾಷ್ಟ್ರೀಯ ಬಸವ ದಳ, ಅಕ್ಕಿವಾಟ, ಮಹಾರಾಷ್ಟ್ರ

3000 ಪ್ರತಿಗೆ 540 ರೂ. ಕೊಟ್ಟವರು

ಲಿಂಗಾಯತ ಸಮಾಜ, ಉಮಳವಾಡ, ಮಹಾರಾಷ್ಟ್ರ
ವೀರಶೈವ ಲಿಂಗಾಯತ ಜಾಂಝು ಪಥಕ್, ಕೋತಲಿ, ಮಹಾರಾಷ್ಟ್ರ
ಚನ್ನಪ್ಪ ಫಾಳೆಪ್ಪ ಕೋಟಿ, ನಿರ್ಣಾ, ಬೀದರ
ಪ್ರಭುರಾವ್ ಅಡಿವೆಪ್ಪ ಮಾಲಿ ಪಾಟೀಲ, ರಂಜೋಳ ಖೇಣಿ
ಕಾಶೀನಾಥಪ್ಪ ವೀರಸಂಗಪ್ಪ ಬಿರಾದಾರ, ಶೆಂಬೆಳ್ಳಿ
ಕಾಶೀನಾಥರಾವ್ ಫಾಳೆಪ್ಪ ಎಣಕೆಮುರೆ, ಶೆಂಬೆಳ್ಳಿ
ಬಸವ ಬಳಗ, ಹಾಲಳ್ಳಿ, ಬೀದರ್
ಮಲ್ಲಯ್ಯ ರೇವಣಸಿದ್ದಯ್ಯ ಮಠಪತಿ, ಶೆಂಬೆಳ್ಳಿ
ಬಸವರಾಜ ಅಡಿವೆಪ್ಪಾ ಹದಿನೂರ, ಜನವಾಡ
ರಾಷ್ಟ್ರೀಯ ಬಸವ ದಳ, ಗಡಿಕುಸನೂರ, ಬೀದರ
ಗುರುಲಿಂಗಯ್ಯ ಭಾಗ್ಯವಂತಿ ಹಾಲಾ, ಹಳ್ಳಿಖೇಡ (ಬಿ), ಬೀದರ
ದಿಲೀಪಕುಮಾರ ಶಿವಲಿಂಗಪ್ಪ ತಾಳಂಪಳ್ಳಿ, ಹಳ್ಳಿಖೇಡ (ಬಿ), ಬೀದರ
ಶಂಕ್ರಪ್ಪ ದಾನಪ್ಪ ಕಂದಗೂಳಕರ, ಸಿಂದಬಂದಗಿ, ಬೀದರ
ವೈಜನಾಥ ಶಂಭು, ಕೋಳಾರ (ಕೆ), ಬೀದರ
ಶಿವಕುಮಾರ ರಾಮಶೆಟ್ಟಪ್ಪ ಪೋಲೀಸ್‌ಪಾಟೀಲ, ಕಾಡವಾದ. ಬೀದರ
ವೈಜನಾಥ ಬಸಪ್ಪಾ ಮಂಗಲಗಿ, ಕಾಡವಾದ, ಬೀದರ
ಕಾಶೀನಾಥ, ವೀರಪ್ಪ ಹಡಪದ, ಕಾಡವಾದ, ಬೀದರ
ಬಸವೇಶ್ವರ ದೇವಸ್ಥಾನ ಕಮಿಟಿ, ಮರಖಲ್, ಬೀದರ (500 ರೂ.)
ಶಿವರಾಜ ಫಾಳೆಪ್ಪ ಸಿರಿಗೆರೆ, ಚಾಂಬೋಳ, ಬೀದರ
ಸಂಗ್ರಾಮಪ್ಪ ಮುದುಕಪ್ಪ, ಹಳ್ಳಿ ಮತ್ತು ಚೆನ್ನಮ್ಮ ಹನುಮಂತಪ್ಪ ಹಳ್ಳಿ, ಗಾದಗಿ, ಬೀದರ
ತುಕಾರಾಂ ವೀರಭದ್ರಪ್ಪ ಹಣಮಶೆಟ್ಟಿ, ಹಳ್ಳದಕೇರಿ, ಬೀದರ
ಬಸಯ್ಯ ಮಡಿವಾಳಯ್ಯ ಚಂದನಕೇರಿ, ಸಿರ್ಸಿ (ಔ), ಬೀದರ
ಬಸವಣ್ಣೆಪ್ಪ ಹಾವಪ್ಪ ಟಿಂಗಸಾಲ, ಸಿರ್ಸಿ (ಔ),ಬೀದರ
ಶಿವಕುಮಾರ ವೈಜನಾಥ ಟಿಂಗಸಾಲ, ನೆಲವಾಡ, ಬೀದರ
ರಾಷ್ಟ್ರೀಯ ಬಸವ ದಳ, ಖತಗಾಂವ, ಬೀದರ

ಪಂಚಪ್ಪ ಶಂಕ್ರಪ್ಪ ವಲ್ಲೆಪ್ಪೂರೆ, ಬೆಳಕೂಣೆ (ಚೌಧರಿ), ಬೀದರ
ವಿಶ್ವನಾಥ ಹನುಮಂತಪ್ಪ ಬುಟ್ಟಿ, ಮಸ್ಕಲ್, ಬೀದರ
ಬಾಬುಶೆಟ್ಟಿ ಶಿವರಾಯ್ ಪೋಲೀಸ್ ಪಾಟೀಲ, ಮಸ್ಕಲ್, ಬೀದರ
ಮಾರುತಿ ಇಂಗಾಳೆ, ಈಚಲಕರಂಜಿ
ಶಿವಕುಮಾರ ಬಿರಾದಾರ, ನೌಬಾದ್, ಬೀದರ
ವಿಶ್ವನಾಥ ಹನುಮಂತಪ್ಪ ಬುಟ್ಟಿ, ಮಸ್ಕಲ್, ಬೀದರ
ಬಾಬುಶೆಟ್ಟಿ ಶಿವರಾಯ ಪೋಲೀಸ್ ಪಾಟೀಲ, ಮಸ್ಕಲ್, ಬೀದರ
ಮಹಾದೇವಪ್ಪ ಚನ್ನಪ್ಪ ಕೋಟಿ, ಜೇರ್ಗಾ, ಬೀದರ
ಮಲ್ಲಿಕಾರ್ಜುನ ಪುಂಡಲೀಕಪ್ಪ ಗೌರಶೆಟ್ಟಿ, ಮಂದಕನಳ್ಳಿ
ಮಾರುತಪ್ಪ ಭೀಮಣ್ಣ ಗೌರಶೆಟ್ಟಿ, ಮಂದಕನಳ್ಳಿ, ಬೀದರ
ಅಶಪ್ಪ ಬಸವಲಿಂಗಪ್ಪ ಗೌರಶೆಟ್ಟಿ, ಮಂದಕನಳ್ಳಿ ಬೀದರ
ಭೀಮರಾವ್ ಗುತ್ತೆಪ್ಪ ಸಂತಪೂರೆ, ಮಂದಕನಳ್ಳಿ ಬೀದರ
ಬಸಮ್ಮ ಲಿಂ.ಬಸಪ್ಪ ಕೋಸಂ, ಮಂದಕನಳ್ಳಿ, ಬೀದರ
ರೇವಣಪ್ಪ ಹನುಮಂತಪ್ಪ ಹಲಬುರ್ಗೆ, ಮಂಧಕನಳ್ಳಿ, ಬೀದರ
ಶಂಕ್ರಪ್ಪ ಸಿದ್ದಪ್ಪ ಸಿದ್ದಾಪುರೆ, ಮಂದಕನಳ್ಳಿ, ಬೀದರ
ಸೋಮಯ್ಯ ರೇವಣಯ್ಯಸ್ವಾಮಿ, ಮಠ, ನೌಬಾದ್, ಬೀದರ
ನಿರಂಜನಪ್ಪ ಸಿದ್ದಪ್ಪ ಹುಮನಾಬಾದೆ, ನೌಬಾದ್, ಬೀದರ
ರಾಷ್ಟ್ರೀಯ ಬಸವ ದಳ, ಸಂತಪುರ, ಬೀದರ
ಸೋಮಶೇಖರ ಮಲ್ಲಿಕಾರ್ಜುನ ನೀಲಪ್ಪ, ಲಾಡಗೇರಿ, ಬೀದರ
ಶಂಕರರಾವ್ ಅಣ್ಣೆಪ್ಪ ಸದಲಾಪುರೆ, ಗಾದಗಿ, ಬೀದರ
ಕಲ್ಲಯ್ಯ ಸ್ವಾಮಿ ಹಣಮಂತರಾಯ ಕೌಡಗಾವೆ ಮತ್ತು ಪ್ರಭು ಸಾಕೋಳೆ, ಜೋಜನಾ, ಬೀದರ
ಸಂಗಪ್ಪ ಬಂಡೆಪ್ಪ ಬಿರಾದಾರ, ಸಂಗಮ, ಬೀದರ
ಲಿಂಗಾಯತ ಸಮಾಜ, ತಾಕವಾಡೆ, ಮಹಾರಾಷ್ಟ್ರ
ಗುರುಬಸವ ಮಾಗುಂಡಪ್ಪ ಧೂಪದ, ಬೆಳಕೂಣಿ, ಬೀದರ
ನಾಗನಾಥಸ್ವಾಮಿ ಫಕೀರಯ್ಯಸ್ವಾಮಿ ಜ್ಯಾಂತೆ, ನಿಡೋದಾ, ಬೀದರ
ಸೋಮನಾಥ ಕಲ್ಲಪ್ಪ ಲಂಜವಾಡೆ, ತಾಣಾಕುಸನೂರ, ಬೀದರ
ಧನರಾಜ್ ಅಣ್ಣಾರಾವ್ ಕಳಸೆ, ತಾಣಾಕುಸನೂರು, ಬೀದರ,
ವಿಶಾಲ ರಾಜಕುಮಾರ ಪಾಟೀಲ, ತಾಣಾಕುಸನೂರ, ಬೀದರ
ಬಸವೇಶ್ವರ ಯುವಕ ಮಂಡಳಿ, ಮಜರೇವಾಡಿ, ಮಹಾರಾಷ್ಟ್ರ (ಮುಂದುವರಿಯುವುದು)


★ ಮುದ್ರಣಕ್ಕೆ ದೇಣಿಗೆ ಕೊಟ್ಟವರದ್ದು ಇನ್ನೂ ಬಹಳ ಹೆಸರು ಇದ್ದು ಸ್ಥಳಾಭಾವದಿಂದ ಕೆಲವು ಹೆಸರುಗಳನ್ನು ಮಾತ್ರ ಮುದ್ರಿಸಲಾಗಿದೆ. ಎಲ್ಲ ದಾನಿಗಳಿಗೂ ಶುಭವನ್ನು ಹಾರೈಸುತ್ತೇವೆ.

---

ಲಿಂಗದೇವಾ ಇನು ನಿಮ್ಮನು, ಅರಿಯದೆ ಕೆಟ್ಟೆನಲ್ಲ ನಿಮ್ಮನು
ತಿಳಿಯದೆ ಅನ್ಯದೈವಕ್ಕೆ ಕೈ ಮುಗಿದು, ಮೂಢನಂಬಿಕೆಗಳೊಳಗಾಗಿ ನಿಮ್ಮ ನಿಜವ ಮರೆತೆನಲ್ಲ.
ಎನ್ನ ಅಳಲಿಸದೆ ಬಳಲಿಸದೆ ಸೀಘ್ರಗಿ ಬಂದು, ಅಂಗದಲಿ ನಿಂದು ನಿಜ ನಿವಾಸವ
ತೋರಿ ಚುಳುಕಾದಿರಯ್ಯ, ನಿತ್ಯಮುಕ್ತ ನಿಷ್ಕಲಲಿಂಗ ಪ್ರಭುವೆ. -ಶರಣೆ. ಗೀತಾ ಶೆಟ್ಟರ್, ಕೊಪ್ಪಳ



# ಬಸವ ಗಂಗೋತ್ರಿ ನಗರ ಯೋಜನೆ



## ಶರಣ ಬಂಧುಗಳಿಗೆ ಸಂತೋಷದ ಸುದ್ದಿ

ಬೆಂಗಳೂರು ನಗರ ಕರ್ನಾಟಕದ ರಾಜಧಾನಿ, ಉದ್ಯಾನ ವನಗಳ ನಗರವೆಂದು ಖ್ಯಾತಿ ಪಡೆದಿರುವುದೇ ಅಲ್ಲದೆ ತನ್ನ ಸಮಶೀತೋಷ್ಣ ಹವೆಯಿಂದ ದೇಶ ವಿದೇಶಗಳ ಜನರನ್ನು ಆಕರ್ಷಿಸುತ್ತಿದೆ. ಇದಕ್ಕೆ "ಕಲ್ಯಾಣ ನಗರ" ಎಂಬ ಹೆಸರೂ ಸಹ ಅನ್ವರ್ಥವಾಗಿ ಬಂದಿದೆ.

ಬೆಂಗಳೂರಿನ ಉಪನಗರವಾದ ಕೆಂಗೇರಿಯಿಂದ ಆಚೆಗೆ ಬೆಂಗಳೂರು-ಮೈಸೂರು ಹೆದ್ದಾರಿಗೆ ಹೊಂದಿಕೊಂಡಂತೆ, ಕುಂಬಳಗೋಡು ಗ್ರಾಮದ ಸರಹದ್ದಿಗೆ ಸೇರಿದ **"ಬಸವ ಗಂಗೋತ್ರಿ"**ಯ ಜಮೀನಿನ ಸ್ವಲ್ಪ ಭಾಗವನ್ನು ಪಾಂಡಿಚೇರಿಯ 'ಅರೋವಿಲ್ಲೆ' ರೀತಿಯಲ್ಲಿ ಶರಣರ ವಸಾಹತುವನ್ನಾಗಿ ರೂಪಿಸಲು ಬಯಸಿ ಒಂದು ಯೋಜನೆಯನ್ನು ಸಿದ್ಧಪಡಿಸಲಾಗುತ್ತಿದೆ. ಶರಣ ಬಂಧುಗಳು, ಬಸವ ತತ್ವಾಸಕ್ತರು ಒಂದು ಕಡೆ ವಾಸಿಸುತ್ತ ನಿತ್ಯವೂ ಪ್ರಾರ್ಥನೆ, ಅನುಭವ ಗೋಷ್ಠಿಗಳಲ್ಲಿ ಭಾಗಿಗಳಾಗಿ, ೧೨ನೆಯ ಶತಮಾನದ ಶರಣರ ಸಮುದಾಯಿಕ ಜೀವನದಂತೆ ತತ್ವನಿಷ್ಠ, ಪ್ರಶಾಂತ ಜೀವನಕ್ಕೆ ಪ್ರೋತ್ಸಾಹ ಕೊಡುವುದೇ ಈ ಯೋಜನೆಯ ಉದ್ದೇಶ.

ಬಸವ ಗಂಗೋತ್ರಿ, ನಗರವು ಬೆಂಗಳೂರಿನಿಂದ ಅತಿದೂರದಲ್ಲಿಯೂ ಇರದೆ, ನಗರ ಮಧ್ಯದ ಗೋಜು ಗಡಿಬಿಡಿಗಳಿಂದ ದೂರವಾಗಿಯೂ ಇದೆ. ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆಯ ಅನುಕೂಲತೆ ಹೊಂದಿದೆ. ಈ ಪ್ರದೇಶಕ್ಕೆ ಹೊಂದಿಕೊಂಡೇ ಕೈಗಾರಿಕಾ ನಗರವು ತ್ವರಿತಗತಿಯಲ್ಲಿ ಬೆಳೆಯುತ್ತಿರುವುದರಿಂದ ನಾಗರಿಕ ಸೌಲಭ್ಯಗಳು ಸುಲಭವಾಗಿ ದೊರೆಯುತ್ತವೆ.

೧. "ಬಸವ ಗಂಗೋತ್ರಿ ನಗರ" ಯೋಜನೆಯು ವಿಶ್ವಕಲ್ಯಾಣ ಮಿಷನ್ ಟ್ರಸ್ಟಿನ ಒಡೆತನದಲ್ಲಿ ರೂಪುಗೊಳ್ಳುತ್ತಿದ್ದು, ಇದಕ್ಕಾಗಿ ಒಂದು ನಿವೇಶನ ವಿತರಣಾ ಸಮಿತಿಯನ್ನು ರಚಿಸಲಾಗಿದೆ. ಈ ಯೋಜನೆಯಡಿಯಲ್ಲಿ ಕೆಳಕಂಡ ಅಳತೆಗಳನ್ನುಳ್ಳ ನಿವೇಶನಗಳು ಲಭ್ಯವಾಗಲಿವೆ.

ವರ್ಗ 'ಎ'-೪೦' X ೬೦'-ವಿಸ್ತೀರ್ಣ ೨೪೦೦ ಚ.ಅಡಿಗಳು

ವರ್ಗ 'ಬಿ'-೩೦' X ೪೦'-ವಿಸ್ತೀರ್ಣ ೧೨೦೦ ಚ.ಅಡಿಗಳು

ನಿವೇಶನಗಳಲ್ಲಿ ಬೆಳೆದಿರುವ ತೆಂಗಿನಮರಗಳನ್ನು ಹಾಗೆಯೇ ಉಳಿಸಿಕೊಳ್ಳಲು

ಸಂಕಲ್ಪಿಸಿರುವುದರಿಂದ ನಿವೇಶನಗಳ ಅಳತೆಗಳು ಸ್ವಲ್ಪ ಏರುಪೇರಾಗುವ ಸಂಭವವಿದೆ. ಅಲ್ಲದೆ ಭೂಮಿಯ ಆಕಾರಕ್ಕನುಗುಣವಾಗಿಯೂ ಸಹ ನಿವೇಶನಗಳ ಅಳತೆಗಳಲ್ಲಿ ಕೆಲವೊಂದು ಮಾರ್ಪಾಟಾಗಬಹುದು. ಚದುರಡಿಯ ಮೇಲೆ ಬೆಲೆಯನ್ನು ನಿರ್ಧರಿಸಲಾಗುವುದು.

೨. ನಿವೇಶನಗಳು ಸೀಮಿತ ಸಂಖ್ಯೆಯಲ್ಲಿರುವುದರಿಂದ ಅರ್ಜಿ ಪತ್ರಗಳ ಆಧಾರದ ಮೇಲೆ ವಿತರಣಾ ಸಮಿತಿಯು ಸದಸ್ಯರನ್ನು ಆಯ್ಕೆ ಮಾಡಿ, ನಂತರ ಸದಸ್ಯತ್ವ ಶುಲ್ಕ ರೂ. ೧೦೦೦-೦೦ (ಒಂದು ಸಾವಿರ) ರೂಪಾಯಿ ಕಟ್ಟಲು ಪರವಾನಗಿ ನೀಡುವುದು.

೩. ನಿವೇಶನ ಪಡೆಯಲಿಚ್ಛಿಸುವವರು ಅರ್ಜಿ ಮತ್ತು ಹೆಚ್ಚಿನ ವಿವರಗಳಿಗಾಗಿ "ವಿಶ್ವಕಲ್ಯಾಣ ಮಿಷನ್, ಬೆಂಗಳೂರು" ಹೆಸರಿಗೆ ೧೦೦-೦೦(ಒಂದುನೂರು) ರೂಗಳನ್ನು ಎಂ.ಓ/ಕ್ರಾಸ್ಡ್ ಡ್ರಾಫ್ಟ್ ಮೂಲಕ ಬೆಂಗಳೂರಿನಲ್ಲಿನ ಬ್ಯಾಂಕ್‌ಗಳಲ್ಲಿ ಪಾವತಿಯಾಗುವಂತೆ ಈ ಕೆಳಕಂಡ ವಿಳಾಸಕ್ಕೆ ಕಳಿಸುವುದು. ಈ ಮೊಬಲಗನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ನಿವೇಶನ ಅಭಿವೃದ್ಧಿ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಂಡಿರುವುದರಿಂದ. ಸದಸ್ಯರ ಆಯ್ಕೆ ಮತ್ತು ನಿವೇಶನ ವಿತರಣೆ ಬೇಗನೆ ಆಗುವುದು. ಆದ್ದರಿಂದ ಆಸಕ್ತರು ಬೇಗನೆ ಪತ್ರ ವ್ಯವಹಾರ ಮಾಡಬೇಕು.

ವ್ಯವಹರಿಸಬೇಕಾದ ವಿಳಾಸ:- ದೂರವಾಣಿ : 080 - 332 5335
332 2790

ಪೂಜ್ಯ ಶ್ರೀ ಸದ್ಗುರು ಸ್ವಾಮಿ ಅಲ್ಲಮ ಪ್ರಭು, ವಿಶ್ವಕಲ್ಯಾಣ ಮಿಷನ್
ಬಸವ ಗಂಗೋತ್ರಿ ನಗರ, ಯೋಜನೆ, ಬಸವ ಮಂಟಪ
೨೦೩೫, ೨೦ನೆಯ ಮುಖ್ಯರಸ್ತೆ, ೨ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-೫೬೦ ೦೧೦


## ಬಸವ ಗಂಗೋತ್ರಿ ಸ್ಥಳ ನಿರ್ದೇಶನ

ವಿಶ್ವಕಲ್ಯಾಣ ಮಿಷನ್ (ರಿ.)ಒಡೆತನದ ಬಸವ ಗಂಗೋತ್ರಿಯು ಕುಂಬಳಗೋಡು ಗ್ರಾಮದ ಬಳಿ ಬೆಂಗಳೂರು-ಮೈಸೂರು ರಸ್ತೆಯಲ್ಲಿ ಬೆಂಗಳೂರಿನಿಂದ ೨೧ ಕಿ.ಮೀ.ಬಳಿ ಇದ್ದು ಬೆಂಗಳೂರು ನಗರದಿಂದ ಸಿಟಿ ಬಸ್ಸಿನ ಅನುಕೂಲತೆ ಇದೆ. ಕಲಾಸಿಪಾಳ್ಯಂ ಸಿಟಿ ಮಾರ್ಕೆಟ್ ಬಸ್ ನಿಲ್ದಾಣದಿಂದ. ಹೋಗುವ ಬಸ್ ನಂಬರ್‌ಗಳು ೨೩೧, ೨೨೭, ೨೨೮, ೨೨೯, ೨೨೬ಬಿ. ಮೆಜೆಸ್ಟಿಕ್ ಬೆಂಗಳೂರು ಮುಖ್ಯ ನಿಲ್ದಾಣದಿಂದ ಹೊರಡುವ ಮೈಸೂರು ರಸ್ತೆಯಲ್ಲಿ ಸಂಚರಿಸುವ ಸಾಮಾನ್ಯ ವೇಗದ ಬಸ್ಸುಗಳು ಬಸವ ಗಂಗೋತ್ರಿ ನಿಲ್ದಾಣದ ಬಳಿ ನಿಲ್ಲುತ್ತವೆ.

ರಾಮೋಹಳ್ಳಿ ಕ್ರಾಸ್‌ಗೆ ದೊಡ್ಡ ಆಲದ ಮರಕ್ಕೆ ಹೋಗುವ ಬಸ್ಸುಗಳು ನಿಲ್ಲುತ್ತಿದ್ದು, ಅಲ್ಲಿಗೆ ಬಸವ ಗಂಗೋತ್ರಿಯು ಬಹಳ ಹತ್ತಿರ. ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ಗ್ರಾಮ ಎರಡರ ಮಧ್ಯೆ ಬಸವ ಗಂಗೋತ್ರಿಯ ದ್ವಾರವಿದೆ.



## ಭಾರತದ ಜನಗಣತಿ-2001






### ೨೦೦೧ನೆಯ ಇಸವಿಯಲ್ಲಿ ನಡೆಯುವ ಜನಗಣತಿಯಲ್ಲಿ "ಲಿಂಗಾಯತ" ಎಂದು ಬರೆಸಲು ಕಳಕಳಿಯ ಕರೆ

ಲಿಂಗಾಯತವು ವಿಶ್ವಗುರು ಬಸವಣ್ಣ (ಕ್ರಿ.ಶ.೧೧೩೪-೧೧೯೬)ನವರಿಂದ ಸ್ಥಾಪಿತವಾದ ಸ್ವತಂತ್ರ, ಸ್ವಾವಲಂಬಿ, ಪ್ರಗತಿಪರ ಧರ್ಮ. ಭಾರತದ ದೇಶದ ಜನಸಂಖ್ಯೆಯ ದೃಷ್ಟಿಯಿಂದ ಜೈನ, ಬೌದ್ಧ, ಸಿಖ್ ಧರ್ಮಗಳ ಅನುಯಾಯಿಗಳಂತೆ ಲಿಂಗಾಯತರು ಧಾರ್ಮಿಕ ಅಲ್ಪಸಂಖ್ಯಾತರ ಸೌಲಭ್ಯಗಳನ್ನು ಪಡೆಯಲು ಅರ್ಹರು. ಭಾರತೀಯ ಪರಂಪರೆಯಲ್ಲಿ ಜನಿಸಿಯೂ ಬೌದ್ಧ, ಜೈನ, ಸಿಖ್ ಧರ್ಮಗಳು ಸ್ವತಂತ್ರ ಧರ್ಮಗಳು ಎಂದು ಮಾನ್ಯತೆ ಪಡೆದಿದ್ದರೆ, ಇವುಗಳ ಅನುಯಾಯಿಗಳು ಧಾರ್ಮಿಕ ಅಲ್ಪಸಂಖ್ಯಾತರು ಎಂದು ಮಾನ್ಯತೆ ಪಡೆದಿದ್ದಾರೆ. ಅದೇ ರೀತಿ ಲಿಂಗಾಯತ ಧರ್ಮವು ಮಾನ್ಯತೆ ಪಡೆಯಲು ಅರ್ಹವಾಗಿದೆ. ಏಕೆಂದರೆ ಇದು ಹಿಂದು ಧರ್ಮದ ಒಂದು ಅಂಗವಾಗದೆ ಒಂದು ಸ್ವತಂತ್ರ ಧರ್ಮಕ್ಕೆ ಇರಬೇಕಾದ ಎಲ್ಲ ಲಕ್ಷಣಗಳನ್ನು ಹೊಂದಿದೆ.

| | | | |
|---|---|---|---|
| ೧. | ಧರ್ಮ ಸ್ಥಾಪಕರು | - | ವಿಶ್ವಗುರು ಬಸವಣ್ಣನವರು |
| ೨. | ಧರ್ಮ ಸಂಹಿತೆ | - | ಸಮಾನತೆ ಸಾರುವ ವಚನ ಸಾಹಿತ್ಯ |
| ೩. | ಧರ್ಮದ ದೇವರ ಹೆಸರು | - | ಲಿಂಗದೇವ |
| ೪. | ಧರ್ಮ ಲಾಂಛನ | - | ನಿರಾಕಾರ ಲಿಂಗದೇವನ ಕುರುಹಾದ ಇಷ್ಟಲಿಂಗ |
| ೫. | ಧರ್ಮ ಕ್ಷೇತ್ರ | - | ಬಸವಣ್ಣನವರ ಐಕ್ಯಕ್ಷೇತ್ರ ಕೂಡಲಸಂಗಮ |
| ೬. | ಧಾರ್ಮಿಕ ವಾರ್ಷಿಕ ಸಮಾವೇಶ | - | ಕೂಡಲ ಸಂಗಮದಲ್ಲಿ ನಡೆಯುವ ಶರಣ ಮೇಳ |
| ೭. | ಧಾರ್ಮಿಕ ವ್ರತ | - | ಶರಣ ವ್ರತ |
| ೮. | ಧರ್ಮ ಧ್ವಜ | - | ಷಟ್ಕೋನ- ಇಷ್ಟಲಿಂಗ ಸಹಿತ ಬಸವ ಧ್ವಜ |
| ೯. | ಧರ್ಮ ಸಂಸ್ಕಾರ | - | ಇಷ್ಟಲಿಂಗ ದೀಕ್ಷೆ |
| ೧೦. | ಧರ್ಮ ಮಂದಿರ | - | ಬಸವ (ಅನುಭವ)ಮಂಟಪ |
| ೧೧. | ಧಾರ್ಮಿಕ ವಿಧಿ-ವಿಧಾನ | - | ಗುರು-ಬಸವಣ್ಣ, ಲಿಂಗ-ಗೋಳಾಕಾರದ ಇಷ್ಟಲಿಂಗ, ಜಂಗಮ-ಪವಿತ್ರಾತ್ಮರ ಪೂಜೆ |
| ೧೨. | ಧಾರ್ಮಿಕ ಕೂಟ | - | ಶರಣ ಸಂಗಮ-ವಾರದ ಪ್ರಾರ್ಥನೆ |
| ೧೩. | ಧಾರ್ಮಿಕ ಮಾಸ | - | ಶ್ರಾವಣ |
| ೧೪. | ಧರ್ಮ ಭಾಷೆ | - | ಕನ್ನಡ |
| ೧೫. | ಧರ್ಮ ಪರಂಪರೆ | - | ಶರಣ ಪರಂಪರೆ |
| ೧೬. | ಧಾರ್ಮಿಕ ಸೋದರತ್ವ | - | ಜಾತಿ ವರ್ಗ ವರ್ಣಾತೀತ ಸಮಾನತೆ |
| ೧೭. | ಧರ್ಮದ ಧ್ಯೇಯ | - | ಜಾತಿ ವರ್ಣ ವರ್ಗರಹಿತ ಧರ್ಮಸಹಿತ ಶರಣ ಸಮಾಜ (ಕಲ್ಯಾಣ ರಾಜ್ಯ )ನಿರ್ಮಾಣ |




ಆದ್ದರಿಂದ ಜನಗಣತಿಯ ೮ನೆಯ ಕಾಲಂ ಮತ (Religion) ಎಂದಿರುವಲ್ಲಿ ಲಿಂಗಾಯತ (Lingayat-L) ಎಂದು ಬರೆಸಿರಿ. (ಇಂಗ್ಲೀಷಿನ Religion ಪದವನ್ನು ಧರ್ಮ ಎಂದು ಭಾಷಾಂತರಿಸುವುದೇ ಸೂಕ್ತ ಆದರೆ ಜನಗಣತಿಯ ಕನ್ನಡ ಪರಿಪತ್ರದಲ್ಲಿ Religion ಪದವನ್ನು ಮತ ಎಂದು ಭಾಷಾಂತರಿಸಲಾಗಿದೆ) ಗಣತಿಕಾರರು ಸರಿಯಾಗಿ ಬರೆದಿರುವರೆ ಎಂಬುದನ್ನು ಖಚಿತಪಡಿಸಿಕೊಳ್ಳಿರಿ. ಗಣತಿಕಾರರು ನೀವು ತಿಳಿಸಿದರೂ ಅದರಂತೆ ಬರೆದುಕೊಳ್ಳದಿದ್ದರೆ ತಕ್ಷಣವೇ ಪ್ರತಿಭಟಿಸಿ, ನಾಗರಿಕ ಅಧಿಕಾರಿಗಳಾದ ತಹಸೀಲ್ದಾರ್, ಅಸಿಸ್ಟೆಂಟ್ ಕಮೀಷನರ್, ಜಿಲ್ಲಾಧಿಕಾರಿಗಳಿಗೆ ದೂರು ಸಲ್ಲಿಸಿರಿ. ಇನ್ನೇನಾದರೂ ವಿವರಗಳು ಬೇಕಾಗಿದ್ದಲ್ಲಿ ಹಿಂದಿನ ಪುಟದಲ್ಲಿ ಕೊಟ್ಟಿರುವ ವಿಳಾಸಕ್ಕೆ ಸಂಪರ್ಕಿಸಿರಿ.

ವಿಶೇಷ ಎಚ್ಚರಿಕೆ: ವೀರಶೈವ ಪದವು ಲಿಂಗಾಯತದ ಸಮಾನಾರ್ಥ ಕೊಡುವ ಪದ ಎಂದು ಭಾವಿಸಿ ಅದನ್ನು

ಕಲ್ಯಾಣ ಕಿರಣ CPMG/KA/BGW - 50 ನವೆಂಬರ್ - 2000

R.NO. 19980/70 WPP (W) - 17

